ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

30 ನವೆಂಬರ್ 2016 ಪುಟ 20 ರೂ. 15/-

ಕೊಡಗು: ಕಾಂಗ್ರೆಸ್ ಮನೆ ಮುರಿದ ಟಿಪ್ಪು



ತುಘಲಕ್ ಮೋದಿ

ದುಬಾರಿ ಮದುವೆ

ರೆಡ್ಡಿ ಮೈಮೇಲೆ ಶ್ರೀಕೃಷ್ಣದೇವರಾಯ

ಪಂಪ ಪ್ರಶಸ್ತಿಯೂ ಗಾಂಪ ಆಡಳಿತಗಾರರೂ!


ನಾಗಮಂಗಲ

ಜೆಡಿಎಸ್ ಟಿಕೆಟ್‌ಗೆ ಮಾಜಿ 'ಕೈ'ಗಳ ಕಸರತ್ತು!

ಯಲಬುರ್ಗಾ

ರಾಯರೆಡ್ಡಿ-ಪೂಜಾರಿಗೆ ಪರ್ಯಾಯ ಶಕ್ತಿ?

ಕರ್ನಾಟಕಕ್ಕೆ ಒಂದು ವಿಶೇಷ ಪ್ಯಾಕೇಜ್ ಬೇಕೇಬೇಕು




ನೋಟಿನ ಗದ್ದಲದಲ್ಲಿ ಇಡೀ ದೇಶ ಮುಳುಗಿದೆ. ಬರಗಾಲದಿಂದ ತತ್ತರಿಸಿರುವ ರೈತರೂ ಸಹ ತಾವು ಮಾಡಿರುವ 4-5 ಲಕ್ಷ ರೂ. ಸಾಲ ಹೇಗೆ ತೀರಿಸುವುದು ಎಂಬ ಚಿಂತೆಗಿಂತ ನಾಳೆಗೆ 200-300 ರೂ. ಚಿಲ್ಲರೆ ಹೊಂದಿಸಲು ಎಷ್ಟು ಹೊತ್ತು ಕ್ಯೂ ನಿಲ್ಲಬೇಕು ಎಂದೇ ಯೋಚಿಸುತ್ತಿರಬಹುದು. ಕಪ್ಪು ಹಣದ ಖೂಳರ ಕೂದಲೂ ಕೊಂಕಲಿಲ್ಲ ಎಂಬುದಕ್ಕೆ ಜನಾರ್ದನ ರೆಡ್ಡಿಯ ಮಗಳ ಮದುವೆಯೇ ಸಾಕ್ಷಿ. ನೋಟು ರದ್ದತಿಯು ಅಂತಹ ಯಾವ ದೀರ್ಘಕಾಲಿಕ ಅನುಕೂಲಗಳನ್ನೂ ತರುವುದಿಲ್ಲವೆಂಬುದನ್ನು ಹೇಳಲು ಹೆಚ್ಚಿನ ಅರ್ಥಶಾಸ್ತ್ರೀಯ ಪರಿಣಿತಿಯೇನೂ ಬೇಕಿಲ್ಲ. ತಕ್ಷಣದಲ್ಲಿ ಒಂದು ಅನುಕೂಲವಂತೂ ಸರ್ಕಾರಕ್ಕೆ ಆಗಿದೆ. ಬರಪರಿಸ್ಥಿತಿಯ ಕುರಿತು ನಡೆಯಬೇಕಿದ್ದ ಸಾರ್ವಜನಿಕ ಚರ್ಚೆಯನ್ನು ಯಶಸ್ವಿಯಾಗಿ ನೋಟುಗಳ ಕಡೆಗೆ ತಿರುಗಿಸಲಾಗಿದೆ. ಜನಸಾಮಾನ್ಯರು ತೀವ್ರ ಸಂಕಷ್ಟಕ್ಕೆ ಗುರಿಯಾಗಿರುವ ಸಂದರ್ಭದಲ್ಲಿ ಸಂಪಾದಕರೂ ಉಳಿದ ಭಾಗದಲ್ಲಿ ನೋಟಿನ ಸಮಸ್ಯೆಯ ಕುರಿತ ಲೇಖನಗಳಿಗೆ ಒತ್ತು ಕೊಟ್ಟಿರುತ್ತಾರೆ. ಹಾಗಾಗಿ ಈ ಅಂಕಣದಲ್ಲಿ ಇನ್ನೊಮ್ಮೆ ರೈತರ ಮತ್ತು ನಮ್ಮ ಸಮಸ್ತ ಗ್ರಾಮನಿವಾಸಿಗಳ ಸಮಸ್ಯೆಯ ಕುರಿತು ಗಮನ ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ.

ಮೊದಲನೆಯದಾಗಿ, ಬರದ ಹೊಡೆತದ ಅಂದಾಜು ಮಾಡಬೇಕಾದರೆ ತಪ್ಪದೇ ಗಮನಿಸಬೇಕಾದ ಒಂದು ಸಂಗತಿಯಿದೆ. ಕರ್ನಾಟಕದಲ್ಲಿ ಒಟ್ಟು 177 ತಾಲೂಕುಗಳಿವೆ. ಕಳೆದ 16 ವರ್ಷಗಳಿಂದ ಬರಪೀಡಿತ ತಾಲೂಕುಗಳೆಂದು ಪ್ರತೀವರ್ಷ ಎಷ್ಟು ತಾಲೂಕುಗಳನ್ನು ಘೋಷಿಸಲಾಗಿದೆ ಗೊತ್ತೇ? ಸ್ವತಃ ರಾಜ್ಯ ಸರ್ಕಾರವೇ ಕೇಂದ್ರಕ್ಕೆ ಸಲ್ಲಿಸಿರುವ ವರದಿಯ ಪ್ರಕಾರ 2001ರಿಂದ ಬರಪೀಡಿತವಾದ ತಾಲೂಕುಗಳ ಸಂಖ್ಯೆ ಹೀಗಿದೆ. 2001-33, 2002-159, 2003-162, 2004-80, 2006-129, 2008-84, 2009-86, 2011-123, 2012-157, 2013-125, 2014-35, 2015-136, 2016-110 (ನಂತರ ಘೋಷಿಸಲಾದ 29 ತಾಲೂಕುಗಳೂ ಸೇರಿದರೆ ಒಟ್ಟು 139). ಅಂದರೆ 2001ರಿಂದ ಇಲ್ಲಿಯವರೆಗೆ 3 ವರ್ಷ ಬಿಟ್ಟರೆ ಉಳಿದೆಲ್ಲಾ ವರ್ಷಗಳಲ್ಲೂ ಒಂದಲ್ಲ ಒಂದು ಕಡೆ ಬರ ಇದ್ದೇ ಇತ್ತು, ಕೆಲವು ಭಾಗಗಳಲ್ಲಿ ಪ್ರವಾಹ ಬಂದ ವರ್ಷಗಳಲ್ಲೂ ಇತರೆಡೆ ಬರ ಇತ್ತು! ಇನ್ನೆರಡು ವರ್ಷಗಳಲ್ಲಿ 40ಕ್ಕಿಂತ ಕಡಿಮೆ ತಾಲೂಕುಗಳಲ್ಲಿ ಬರ ಬಂದಿತ್ತು ಎಂಬುದನ್ನು ಬಿಟ್ಟರೆ ಹೆಚ್ಚು ಕಡಿಮೆ ಅರ್ಧದಷ್ಟು ತಾಲೂಕುಗಳು ಬರಪೀಡಿತವೆಂದು ಘೋಷಿತವಾಗಿದ್ದವು.

ಒಟ್ಟಾರೆಯಾಗಿ ಇದರ ಪರಿಣಾಮವೇನೆಂದು ಊಹಿಸಿ. ದೇಶದಲ್ಲೇ ಕರ್ನಾಟಕವು ಬರಪೀಡಿತ ಪ್ರದೇಶವನ್ನು ಹೆಚ್ಚಾಗಿ ಹೊಂದಿರುವ ರಾಜ್ಯಗಳಲ್ಲಿ ಎರಡನೆಯದಾಗಿದೆ. ಭೂಮಿ ಹೊಂದಿರುವ ರೈತರ ಜೊತೆ, ಅದನ್ನು ಪರೋಕ್ಷವಾಗಿ ಅವಲಂಬಿಸಿರುವ ಗ್ರಾಮೀಣ ಕೃಷಿ ಕಾರ್ಮಿಕರು, ಗ್ರಾಮೀಣ ಆರ್ಥಿಕತೆಯ ಭಾಗವಾಗಿರುವ ಇತರ ಸೇವಾವಲಯಗಳು ಮತ್ತು ಇವೆಲ್ಲದರ ಹೊರೆಯನ್ನು ಹೊರಬೇಕಾಗುವ ಮಹಿಳೆಯರು ಎಲ್ಲರೂ ಬರದ ಹೊಡೆತಕ್ಕೆ ಸಿಲುಕಿದ್ದಾರೆ. ಇದರ ಜೊತೆಗೆ ಇನ್ನೂ ಒಂದು ಅಂಶವನ್ನು ಗಮನಿಸಬೇಕು. ಅತಿವೃಷ್ಟಿ - ಅನಾವೃಷ್ಟಿಯ ಸಂಕಟವು ದೇಶದೆಲ್ಲೆಡೆ ಒಂದೇ ರೀತಿ ಇಲ್ಲ. ಒಳ್ಳೆಯ ಮಳೆಯನ್ನು ಕಂಡ ದೇಶದ ಇತರ ಭಾಗಗಳಲ್ಲಿ ಕೃಷಿ ಉತ್ಪಾದನೆ ಚೆನ್ನಾಗಿಯೇ ಆಗುತ್ತಿದೆ. ಸಾಮಾನ್ಯವಾಗಿ ದೇಶದ ಒಟ್ಟು ಆಹಾರ ಉತ್ಪಾದನೆ 250 ಮಿಲಿಯನ್ ಟನ್‌ಗಳಾಗಿದ್ದರೆ, ಈ ಸಾರಿ ಕರ್ನಾಟಕವು ತೀವ್ರ ಬರಗಾಲಕ್ಕೆ ಸಿಕ್ಕಿರುವಾಗಲೂ ಆಹಾರ ಉತ್ಪಾದನೆಯ ಪ್ರಮಾಣ 270 ಮಿಲಿಯನ್ ಟನ್‌ಗಳ ಆಸುಪಾಸಿನಲ್ಲೇ ಇದೆ. ಅಂದರೆ ವಾಸ್ತವದಲ್ಲಿ ಸ್ವಲ್ಪ ಹೆಚ್ಚೇ ಇದೆ. ಇದರ ಪರಿಣಾಮವೇನು? ಇದರ ಪರಿಣಾಮವೆಂದರೆ, ಮಾರುಕಟ್ಟೆಯಲ್ಲಿ ಆಹಾರ ಪದಾರ್ಥಗಳ ಬೆಲೆಯಲ್ಲಿ ಇಳಿಕೆಯಾಗಲಿದೆ!

ಅಂದರೆ ಕರ್ನಾಟಕವು ಸತತ ಎರಡನೇ ವರ್ಷದ ಬರಗಾಲದಿಂದ ಬೆಳೆ ನಷ್ಟದ ಡಬಲ್ ಸಂಕಷ್ಟದ ಜೊತೆಗೆ ಬೆಲೆ ನಷ್ಟದ ಸಂಕಟವನ್ನೂ ಎದುರಿಸಬೇಕಾಗುತ್ತದೆ. ಆಹಾರ ಪದಾರ್ಥದ ಉತ್ಪಾದನೆಯಲ್ಲಿ ಸ್ವಲ್ಪವೇ ಸ್ವಲ್ಪ ಹೆಚ್ಚಳವಾದರೂ, ಬೆಲೆಯಲ್ಲಿ ತೀವ್ರ ಕುಸಿತವಾಗುತ್ತದೆ. ಕಳೆದ ವರ್ಷ ಕಬ್ಬು ಮತ್ತು ರೇಷ್ಮೆಯಲ್ಲಿ ಉತ್ಪಾದನೆಯ ಪ್ರಮಾಣದಲ್ಲಿ ಭಾರೀ ಹೆಚ್ಚಳವಾಗದೇ ಇದ್ದರೂ, ಬೆಲೆ ಕುಸಿಯಿತು. ಅದಕ್ಕೆ ಕಾರಣ ಗಣನೀಯ ಪ್ರಮಾಣದಲ್ಲಿ ಸಕ್ಕರೆಯ ಆಮದು ಮತ್ತು ರೇಷ್ಮೆಯ ಆಮದು ಸುಂಕದಲ್ಲಿ ಇಳಿಕೆಯ ಕಾರಣದಿಂದ ರೇಷ್ಮೆ ಆಮದು ಹೆಚ್ಚಾಗಿ ಬೆಲೆ ಕುಸಿದದ್ದು. ಇವೆರಡೂ ಬೆಳೆಗಳು ಸೇರಿದರೆ ರಾಜ್ಯದ ಒಟ್ಟಾರೆ ಕೃಷಿ ಕ್ಷೇತ್ರದ ಶೇ. 10ರಷ್ಟನ್ನು ಆವರಿಸುತ್ತವೆ. ಬಾಳೆಹಣ್ಣನ್ನು ಕೆ.ಜಿ.ಗೆ 1 ರೂ.ನಂತೆ ಮಾರಬೇಕಾಗಿ ಬಂದಾಗ ರೈತರು ಸಿಟ್ಟಾಗಿ



ದಾವಣಗೆರೆಯ ಬೀದಿಗಳಲ್ಲಿ ಉಚಿತವಾಗಿ ಹಂಚಿದರು. ಹಾಲಿನ ಉತ್ಪಾದನೆಯೂ ಹೆಚ್ಚಾಗಿ, ಸೀಸನ್‌ನಲ್ಲಿ ಕೊಳ್ಳುವ ಬೆಲೆಯನ್ನು 2 ರೂ. ಇಳಿಸುತ್ತಿದ್ದ ಕೆಲವು ಜಿಲ್ಲಾ ಹಾಲು ಒಕ್ಕೂಟಗಳು 4 ರೂ. ಇಳಿಸಿದವು. ಬರಗಾಲದಲ್ಲೂ ಇಂತಹ ಕೆಲವು ಪದಾರ್ಥಗಳ ಉತ್ಪಾದನೆ ಹೆಚ್ಚಾಗಿದೆ ಎಂದರೆ, ಅಂತರ್ಜಲದ ಬಳಕೆ ಮತ್ತು ಅತೀ ಬಳಕೆಯೂ ಮತ್ತಷ್ಟು ಹೆಚ್ಚಾಗಿದೆ ಎಂದರ್ಥ. ಇಲ್ಲವೇ, ಪಶ್ಚಿಮಘಟ್ಟದ ಪ್ರದೇಶದಲ್ಲಿ ಸುರಿದ ಮಳೆಯ ಕಾರಣದಿಂದ ಅಣೆಕಟ್ಟುಗಳಲ್ಲಿ ನೀರಿತ್ತು ಎಂದರ್ಥವಾಗುತ್ತದೆ. ಈ ಸಾರಿ ಪಶ್ಚಿಮಘಟ್ಟದ ಪ್ರದೇಶವೂ ತೀವ್ರ ಬರಗಾಲವನ್ನು ಎದುರಿಸುತ್ತಿದೆ.

ಹೀಗಿರುವ ಸಂದರ್ಭದಲ್ಲಿ ಎರಡು ಅಂಶಗಳನ್ನು ಗಂಭೀರವಾಗಿ ಆಲೋಚಿಸಬೇಕಾಗುತ್ತದೆ. ಇಷ್ಟು ದೀರ್ಘಕಾಲ ಬರ ಆವರಿಸಿದೆ ಎಂದರೆ, ನಮ್ಮ 'ವಾಡಿಕೆಯ ಮಳೆ' ಎಂಬ ಮಾನದಂಡವನ್ನೇ ಬದಲಿಸಬೇಕು; ವಾತಾವರಣದಲ್ಲಿ ಇಂತಹ ವೈಪರೀತ್ಯ ತಲೆದೋರಲು ಕಾರಣವಾದ ಅಂಶಗಳನ್ನು ಗುರುತಿಸಿ ಆ ನಿಟ್ಟಿನಲ್ಲಿ ತಲೆ ಕೆಡಿಸಿಕೊಳ್ಳಬೇಕು. ನಮ್ಮ ಕೃಷಿ ವಿಧಾನ, ಬೆಳೆ ಸ್ವರೂಪ, ನೀರಿನ ಬಳಕೆಯ ರೀತಿನೀತಿಗಳಲ್ಲಿ ಭಾರೀ ದೊಡ್ಡ ಬದಲಾವಣೆ ತರುವ ಅಗತ್ಯವಿದೆ. ವಾಸ್ತವದಲ್ಲಿ ಏನಾಗುತ್ತಿದೆಯೆಂದರೆ, ಸಮಸ್ಯೆಯನ್ನು ಮತ್ತಷ್ಟು ತೀವ್ರಗೊಳಿಸುವ ಕಡೆಗೇ ನಮ್ಮ ಕೃಷಿ ವಿಧಾನ ನಡೆಯುತ್ತಿದೆ. 200 ಅಡಿಯವರೆಗೆ ಬೋರ್‌ವೆಲ್ ಕೊರೆಸುತ್ತಿದ್ದ ಬೆಂಗಳೂರು ಸುತ್ತಲಿನ ಜಿಲ್ಲೆಗಳ ರೈತರು ಕಳೆದ 20 ವರ್ಷಗಳಲ್ಲಿ 1,500 ಅಡಿಯವರೆಗೆ ತಲುಪಿದ್ದರೆ, ಮಂಡ್ಯದಂತಹ 'ಸಮೃದ್ಧ' ಜಿಲ್ಲೆಗಳ ರೈತರು ನಾಲ್ಕೇ ವರ್ಷಗಳಲ್ಲಿ 200 ಅಡಿಗಳಿಂದ 800 ಅಡಿ ಆಳಕ್ಕಿಳಿಯುತ್ತಿದ್ದಾರೆ! ಈ ರೈತರಿಗೆ ಬೋರ್‌ವೆಲ್ ಕೊರೆಸಬೇಡಿ ಎಂದು ಬೋಧನೆ ಮಾಡುವುದು ಅಥವಾ ಕಾನೂನು ತಂದು ನಿರ್ಬಂಧಿಸುವುದು ಪರಿಹಾರವಲ್ಲ. ಭರವಸೆ ಹುಟ್ಟಿಸುವ ಪರ್ಯಾಯದ ಮಾದರಿಯನ್ನು ತೋರಿಸುವುದು ಹಾಗೂ ಅದಕ್ಕೆ ಬೇಕಾದ ನೆರವನ್ನು ನೀಡಲು ಸರ್ಕಾರ ಸಾಂಸ್ಥಿಕ ಯಂತ್ರಾಂಗವನ್ನು ಕಟ್ಟುವುದು ಮಾತ್ರ ಪರಿಹಾರ. ಈ ಪರ್ಯಾಯ ಮಾದರಿಯು, ಸಂತರ ಜೀವನಶೈಲಿಯನ್ನು ಅನುಸರಿಸಿ ಸರಳ ಜೀವನ ಮಾಡಿ ಎಂದು ಕರೆ ನೀಡುವಂಥದ್ದಾದರೆ, ಅದು ಮೊದಲೇ ಸೋಲಲು ಸಿದ್ಧವಾಗಿರುವ ಮಾದರಿ ಎಂದೇ ಹೇಳಬೇಕಾಗುತ್ತದೆ. ಆದಾಯವನ್ನೂ ತರುವ ತಾಳಿಕೆಯ ಕೃಷಿಯ ಪರ್ಯಾಯದ ಮಾದರಿ ನಿರ್ಮಿಸುತ್ತಿರುವ ಹಲವರು ನಮ್ಮ ನಡುವೆಯೇ ಇದ್ದಾರೆ. ಅದನ್ನು ಸಾರ್ವತ್ರಿಕಗೊಳಿಸುವ ಆಂದೋಲನ ಮತ್ತು ಸರ್ಕಾರದ ಸಕ್ರಿಯ ನೆರವು ಎರಡೂ ಜೊತೆಯಾದರೆ ಮಾತ್ರ ಕಣ್ಣಿಗೆ ಕಾಣಿಸುವ ಬದಲಾವಣೆ ತರಲು ಸಾಧ್ಯ. ಸದ್ಯದ ತುರ್ತಿನ ಜೊತೆಗೆ ಶಾಶ್ವತ ಪರಿಹಾರದ ಕಡೆಗೂ ನಾವು ಆಲೋಚಿಸದೇ ಇದ್ದರೆ, ಶಾಶ್ವತ ಪರಿಹಾರವೆಂಬುದು ಮತ್ತೂ ದೂರ ಸಾಗುತ್ತಲೇ ಇರುತ್ತದೆ.

ಈಗ ಸದ್ಯದ ಪರಿಹಾರದ ಕಡೆಗೆ ನೋಡೋಣ. ಕರ್ನಾಟಕದ ರೈತರು ಡಬಲ್ ಡಬಲ್ ಸಂಕಷ್ಟ ಎದುರಿಸುತ್ತಿದ್ದಾರೆ ಎಂಬುದು ಮೇಲಿನ ಅಂಶಗಳಿಂದ ಸ್ಪಷ್ಟವಾಗಿದೆ. ಕಳೆದ ವರ್ಷ 1,433 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ವರ್ಷ ಜುಲೈ ಹೊತ್ತಿಗೆ 456 ರೈತರು ಜೀವ ಕಳೆದುಕೊಂಡಿದ್ದಾರೆ. ಈ ವಿದ್ಯಮಾನ ಏನನ್ನು ಸೂಚಿಸುತ್ತದೆ? ರೈತರಿಗೆ ಮಿಗುತಾಯ ಆಗುವುದಿರಲಿ, ಸಾಲದ ಮೇಲೆ ಸಾಲದ ಹೊರೆ ಬೀಳುತ್ತಿದೆಯೆಂಬುದು ಎದ್ದು ಕಾಣುತ್ತದೆ. ಸಹಕಾರೀ ಸಾಲವೊಂದೇ 12,700 ಕೋಟಿ ರೂ. ಇದೆ ಎಂದು ಹೇಳಲಾಗುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿರುವ ಸಾಲದ ಮೊತ್ತದ ಅಂದಾಜನ್ನು ಯಾರೂ ಸರಿಯಾಗಿ ಹೇಳುತ್ತಿಲ್ಲ. ಅದರ ಜೊತೆಗೆ ಮಧ್ಯಮ, ಸಣ್ಣ ಮತ್ತು ಅತೀಸಣ್ಣ ರೈತರ ಸಾಲವೆಷ್ಟು ಎಂಬುದೂ ಗೊತ್ತಾಗುತ್ತಿಲ್ಲ. ಆದರೂ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಸಾಲದ ಪ್ರಮಾಣವು ಸಹಕಾರೀ ಸಾಲಕ್ಕಿಂತ ಎರಡು ಪಟ್ಟಾದರೂ ಇದ್ದೇ ಇರುತ್ತದೆ. (35,000 ಕೋಟಿ ರೂ.ಗಳಷ್ಟಿದೆ ಎಂದು ಸಚಿವರೊಬ್ಬರು ಹೇಳಿಕೆ ನೀಡಿದ್ದರು). ಇದರ ಸಾಂಸ್ಥಿಕವಲ್ಲದ ಸಾಲದ ಪ್ರಮಾಣ ಇನ್ನೆಷ್ಟಿರಬ

ಒಟ್ಟಾರೆ ಸಾಲದ ಪ್ರಮಾಣ ಸುಮಾರು ಕೋಟಿ ರೂ.ಗಳಷ್ಟಿರಬಹುದು ಎಂಬುದು ಅಂದಾಜು ಲೆಕ್ಕ. ಕಳೆದ 3 ವರ್ಷಗಳಲ್ಲಿ ಈ ರಾಜ್ಯದಲ್ಲಿ ಅನಾವೃಷ್ಟಿ ಮತ್ತು ಅತಿವೃಷ್ಟಿಯಿಂ ಆಗಿರಬಹುದಾದ ಬೆಳೆ ನಷ್ಟವೂ ಸುಮಾರು 60,000 ಕೋಟಿಗಳಷ್ಟೇ ಇದೆ ಎಂತಲೂ ಅಂದಾಜು ಇದೆ. ಈ ವರ್ಷ 16,000 ಕೋ ರೂ.ಗಳ ಬೆಳೆ ನಷ್ಟದ ಪರಿಷ್ಕೃತ ಅಂದಾಜನ್ನು (ಮೊದಲು 12,000 ಕೋಟಿ ಎಂದು ಹೇಳ ರಾಜ್ಯ ಸರ್ಕಾರವು ಕೇಂದ್ರಕ್ಕೆ ಸಲ್ಲಿಸಿದೆ. ಇದರ ತೋಟಗಾರಿಕೆ, ತೆಂಗು, ಅಡಿಕೆ, ಕಾಫಿಯಂತಹ ಬೆಳೆಗಳ ಮೇಲೆ ಸತತ ಬರದಿಂದುಂಟಾಗಿರು ಅನಾಹುತದ ಅಂದಾಜು ಸರಿಯಾಗಿ ಇರುವು ಹೀಗಾಗಿ ಒಟ್ಟು ನಷ್ಟ 60,000 ಕೋಟಿ ರೂ ಎನ್ನಬಹುದು. ಈ ಲೆಕ್ಕಗಳೆಲ್ಲಾ ವಿಚಿತ್ರವಾಗಿ ತೋರುತ್ತವೆ. ಹಾಗೆ ನೋಡಿದರೆ, ಒಬ್ಬೊಬ್ಬರು ಒಂದೊಂದು ಅಂಧಾಜನ್ನು ಮುಂದಿಡುತ್ತಲೂ ಉಪಗ್ರಹದ ಮೂಲಕ ನಿಖರವಾದ ಬೆಳೆ ನಷ ಅಂದಾಜು ಮಾಡುವುದೂ, ಕ್ಯಾಲ್ಕುಲೇಟರ್ ಇಟ್ಟುಕೊಂಡು ಸಾಂಸ್ಥಿಕ ಸಾಲದ ಲೆಕ್ಕ ಹಾಕು ಕಷ್ಟವೇನಲ್ಲ. ಆದರೆ, ಬೆಳೆ ನಷ್ಟದ ಅಂದಾಜು ಅವೈಜ್ಞಾನಿಕವಾಗಿ ನಡೆಯುತ್ತದಾದರೆ, ಸಾಂಸ್ಥಿಕ ಲೆಕ್ಕ ಸುಲಭವಾಗಿ ಸಿಗದಂತೆ ಮಾಡಲಾಗಿದೆ. ಕಳೆದ 3 ವರ್ಷಗಳ ಬೆಳೆ ನಷ್ಟದಷ್ಟೇ ಸಾಲದ ಪ್ರಮಾಣವೂ ಇದೆ ಎಂದು ಸ್ಥೂಲವಾಗಿ ಹೇಳಬಹುದು ಅಷ್ಟೇ.

ಮೇಲಿಂದ ಮೇಲೆ ಬರುತ್ತಿರುವ ಬರ (ಕೆಲವು ಭಾಗಗಳಲ್ಲಿ ಅತಿವೃಷ್ಟಿ), ಏರುತ್ತಿರುವ ದಿನಕ್ಕೆ ಕನಿಷ್ಠ ಇಬ್ಬರು ರೈತರ ಆತ್ಮಹತ್ಯೆಗಳು ಇವೆಲ್ಲವೂ ಕರ್ನಾಟಕದ ಗ್ರಾಮೀಣ ಭಾಗದ ಸ್ಥಿತಿಯನ್ನು ನಮ್ಮೆದುರು ಬಿಚ್ಚಿಡುತ್ತದೆ. ಈ ಹಿ ಯಲ್ಲಿ ಕರ್ನಾಟಕದ ಗ್ರಾಮೀಣ ಭಾಗದ ಪುನ ಒಂದು ತುರ್ತಾದ ವಿಶೇಷ ಪ್ಯಾಕೇಜ್‌ನ ಅಗ ಇದರ ಜೊತೆಗೆ ಮೇಲೆ ಹೇಳಲಾದಂತೆ, ದೀ ಲೆಕ್ಕಾಚಾರದ ತಾಳಿಕೆಯ ಕೃಷಿವಿಧಾನಕ್ಕೆ ಹೊಂ ಕೊಳ್ಳಲು ಬೇಕಾದ ಆಂದೋಲನ ಮತ್ತು ನೆರ ಅಗತ್ಯವೂ ಇದೆ. ತುರ್ತು ವಿಶೇಷ ಪ್ಯಾಕೇಜ್ ಎಂಬುದು ಕಡ್ಡಾಯವಾಗಿ ಈ ಮೂರನ್ನು ಒಳಗೊಂಡಿರಲೇಬೇಕು. ಎಲ್ಲಾ ಗ್ರಾಮನಿವಾಸಿ ಭೂಮಿ ಹೊಂದಿರುವ ರೈತರ, ಕೃಷಿ ಕಾರ್ಮಿ ಮತ್ತು ಮಹಿಳಾ ಸ್ವಸಹಾಯ ಸಂಘಗಳ – ಸ ಸಾಂಸ್ಥಿಕ ಸಾಲಮನ್ನಾ ಹಾಗೂ ಹೊಸಸಾಲ ನಿ ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ಕೊಡಬೇಕು 2009ರ ಕೇಂದ್ರ ಬರನಿರ್ವಹಣಾ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇ ಇಷ್ಟನ್ನು ಮಾಡಬೇಕೆಂದರೆ ಕನಿಷ್ಠ ಒಂದು ಲಕ್ಷ ಕೋಟಿ ರೂ.ಗಳ ಪ್ಯಾಕೇಜ್‌ನ ಅಗತ್ಯವಿದೆ. ರಾ ಸರ್ಕಾರಕ್ಕೆ ಸೀಮಿತವಾದ ಸಂಪನ್ಮೂಲಗಳಿರುತ್ತ ಹಾಗಾಗಿ ರಾಜ್ಯ ಸರ್ಕಾರವು ಈ ಪ್ಯಾಕೇಜ್‌ನ ಶೇ.35ರಷ್ಟು ಹೊರೆ ಹೊತ್ತುಕೊಳ್ಳಬೇಕು ಮ ಕೇಂದ್ರ ಸರ್ಕಾರವು ಶೇ.65ರಷ್ಟು ಹೊರೆ ಹೊತ್ತುಕೊಳ್ಳಬೇಕು.

ಈ ಸಾರಿಯ ಬೆಳಗಾವಿ ಅಧಿವೇಶನದ ಕ ಚರ್ಚೆ ಇದಾಗಲೇಬೇಕು. ಅದಕ್ಕಾಗಿ ನವೆಂಬರ 3ರಂದು ರಾಜ್ಯದ ಶಾಸಕರುಗಳಿಗೆ ಮನವಿ ಪ ಸಲ್ಲಿಸಲಾಗಿದೆ. ರೈತಸಂಘದ ನಾಯಕರಾದ ಕೆ.ಎಸ್.ಪುಟ್ಟಣ್ಣಯ್ಯನವರು ಒಂದು ಖಾಸಗಿ ನಿರ್ಣಯವನ್ನೂ ಸ್ಪೀಕರ್‌ಗೆ ಸಲ್ಲಿಸಿದ್ದಾರೆ. ನವೆಂ 21ರಿಂದ ರೈತರು ರಾಜ್ಯಾದ್ಯಂತ ಜಿಲ್ಲಾ ಕೇಂದ್ರ ಧರಣಿ ಸತ್ಯಾಗ್ರಹ ಆರಂಭಿಸಲಾಗುತ್ತಿದೆ. ಇವೆಲ್ಲ ಏನಾದರೂ ಪರಿಣಾಮ ಬೀರುತ್ತದೆಯೇ ಕಾದು ನೋಡಬೇಕು. ನೋಟಿನ ಬದಲಾವಣೆಯ ಹು ಸಂಭ್ರಮದಲ್ಲಿ ಮುಳುಗಿರುವ ಕೇಂದ್ರ ಸರ್ಕಾರ ಎಚ್ಚರಿಸಬೇಕೆಂದರೆ, ರಾಜ್ಯ ವಿಧಾನಮಂಡಲದಲ್ಲಿ ಮೇಲಿನ ಪ್ಯಾಕೇಜ್‌ನ ಕುರಿತು ಸರ್ವಾನುಮತದ ನಿರ್ಣಯವಾಗಿ, ರಾಜ್ಯ ಸರ್ಕಾರವು ತನ್ನ ಪಾಲ ಕೊಡಲು ಮುಂದಾಗಬೇಕು. ಆ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸ್ಪಷ್ಟ ತೀ ತೆಗೆದುಕೊಳ್ಳಬೇಕು.

ತುಘಲಕ್ ಮೋದಿ




ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನರೇಂದ್ರ ಮೋದಿ ತನ್ನ ತುಘಲಕ್ ಬುದ್ಧಿಯನ್ನು ...ರಿದ್ದಾನೆ. ಕಪ್ಪು ಹಣದ ವಿರುದ್ಧ ತಾನು ಧೀರ ...ಧನಂತೆ ಸಮರ ಸಾರುತ್ತೇನೆ ಎಂದ ಮೋದಿ ಈ ...ದ ಬಹುಸಂಖ್ಯಾತ ಮಧ್ಯಮವರ್ಗ ಮತ್ತು ...ವರ ಮೇಲೆಯೇ ಯುದ್ಧ ಸಾರಿದ್ದಾನೆ. ಅಷ್ಟು ...ದಂಬಂತೆ ಐನೂರು ಮತ್ತು ಸಾವಿರ ...ಪಾಯಿಗಳ ನೋಟುಗಳನ್ನು ...ಣ್ಯೀಕರಣಗೊಳಿಸುವ ಮೂಲಕ ಅಸಹಾಯಕತೆಗೆ ...ಡಲ್ಪಟ್ಟಿರುವ ಸಾಮಾನ್ಯ ಜನರನ್ನೇ 'ದಗಾಕೋರರು' ...ದು ಮೂದಲಿಸಿದ್ದಾನೆ; ಹೊಟ್ಟೆಗೆ ಹಿಟ್ಟಿಲ್ಲದೆ ಹಸಿದ ...ವರನ್ನು 'ಲೂಟಿಕೋರರು' ಎಂದು ಜರಿದಿದ್ದಾನೆ.

ಅನಾಣ್ಯೀಕರಣದ ಹಿಂದಿರುವ ಹುಚ್ಚಾಟಗಳನ್ನು ಈ ...ಷ ಸಂಚಿಕೆಯಲ್ಲಿರುವ ಇತರೆ ಲೇಖನಗಳು ...ಟ್ಟಿವೆ.

ಹೋದವಾರ ಈ ಅನಾಣ್ಯೀಕರಣದ ಬೆನ್ನಿಗೆ ...ವು ವಿಚಿತ್ರ ಸುದ್ದಿಗಳು ಸಾಮಾಜಿಕ ...ತಾಣಗಳಲ್ಲಿ ಹಬ್ಬಿದವು. ಅವುಗಳಲ್ಲಿ



...ಖ್ಯವಾದದ್ದು "ಹೊಸದಾಗಿ ಬಿಡುಗಡೆ ಮಾಡುವ ...ಡು ಸಾವಿರ ರೂಪಾಯಿ ನೋಟುಗಳಲ್ಲಿ ನ್ಯಾನೋ ...ಪ್ ಇರುತ್ತದೆ. ಈ ಚಿಪ್ ಮೂಲಕ ಯಾರು ಎಲ್ಲಿ ...ಷ್ಟು ಹಣ ವೆಚ್ಚ ಮಾಡಿದರು ಎಂದು ಟ್ರ್ಯಾಕ್ ...ಡಲಾಗುವುದು. ಅಷ್ಟೇ ಅಲ್ಲ, ಇನ್ನು ಮುಂದೆ ...ರಾದರೂ ಅಕ್ರಮವಾಗಿ ಈ ಎರಡು ಸಾವಿರ ...ಪಾಯಿಗಳನ್ನು ಸಂಗ್ರಹಿಸಿಟ್ಟರೆ ಅದನ್ನು ಸ್ಯಾಟಲೈಟ್ ...ಮೂಲಕ ಪತ್ತೆಹಚ್ಚಿ ಆದಾಯ ತೆರಿಗೆ ಇಲಾಖೆಯವರು ...ಳಿ ಮಾಡುತ್ತಾರೆ. ಹಣವನ್ನು ಭೂಮಿಯಲ್ಲಿ 120 ...ಟರ್ ಅಡಿ ಹೂತಿಟ್ಟರೂ ನ್ಯಾನೊ ಚಿಪ್‌ನಿಂದಾಗಿ ...ನ್ನು ಪತ್ತೆ ಹಚ್ಚಬಹುದು" ಎಂಬ ಅತಿರಂಜನೆಯ ...ದ್ದಿ. ಹಿಂದಿಯ ಜೀಟಿವಿ ಮತ್ತು ಕನ್ನಡದ ಒಂದು ...ದ್ದಿ ಚಾನೆಲ್ ಈ ಕಪೋಲಕಲ್ಪಿತ ಸುದ್ದಿಯನ್ನು ...ಷ್ಟು ಉತ್ಸಾಹದಿಂದ ಪ್ರಚಾರ ಮಾಡಿದವೆಂದರೆ, ...ದ್ದಿ ನಿರೂಪಕ ಸಂತೋಷದಿಂದ ಪೇಜಾವರ ...ಗಳಂತೆ ತನ್ನ ಕುರ್ಚಿಯಲ್ಲೇ ಪುಟದೇಳುತ್ತಿದ್ದ! ...ಸ ಜೊತೆ ಪ್ರತಿನಿತ್ಯ ತಾಳ ಹಾಕುವ ಸುದ್ದಿ ...ವಾಹಿಯಂತೂ "ಎರಡು ಸಾವಿರ ರೂಪಾಯಿ ...ಟಿನಲ್ಲಿ ನ್ಯಾನೊ ಚಿಪ್ ಇರುವುದರಿಂದಲೇ ...ದರ ಮೇಲೆ ಮಂಗಳಯಾನದ ಚಿತ್ರವನ್ನು ...ದ್ರಿಸಲಾಗಿದೆ" ಎಂದು ಘೋಷಿಸಿದಳು!!

ವಾಟ್ಸ್‌ಪ್ ಮತ್ತು ಫೇಸ್‌ಬುಕ್‌ನಲ್ಲೂ ಇದು ...ಷ್ಟು ಚಾಲ್ತಿ ಪಡೆದಿತ್ತೆಂದರೆ ಕಳೆದ ವಾರ ಹುಬ್ಬಳ್ಳಿಗೆ ...ೀಗಲು ಟ್ರೈನ್ ಹತ್ತಿದಾಗ ನನ್ನ ಜೊತೆ ...ಗಿಯಲ್ಲಿದ್ದವರೆಲ್ಲ ಇದರ ಬಗ್ಗೆಯೇ ...ರ್ಚಿಸುತ್ತಿದ್ದರು. ಅವರ ಮುಗ್ಧತೆ ನೋಡಿ "ಅದೆಲ್ಲ ...ಳ್ಳು, ಅಂತಹ ಚಿಪ್ ಆ ನೋಟಿನಲ್ಲಿ ಇಲ್ಲ" ...ದೆ.

...ನನ್ನನ್ನು ನಂಬದ ಇಬ್ಬರು ಮಧ್ಯ ವಯಸ್ಕರು ...ವಿಯಲ್ಲಿ ಈ ಸುದ್ದಿ ಬಂತು ಮೇಡಂ" ಅಂದರು. ...ವಿಯಲ್ಲಿ ಬರೋದೆಲ್ಲ ಸತ್ಯ ಅಲ್ಲ" ಅಂದೆ. ...ಮೆರಿಕದಲ್ಲಿ ಅಂತಹದ್ದೇ ಚಿಪ್ ಇರುವ ...ಟ್‌ಗಳು ಇವೆಯಂತೆ" ಅಂದರು. "ಯಾರೀ ...ಗೆ ಅಂದದ್ದು? ಎಲ್ಲೂ ಆ ತರಹದ ...ಟ್‌ಗಳಿಲ್ಲ" ಅಂದೆ. "ಹಾಗಾದರೆ ಈ

ನೋಟ್‌ಗಳನ್ನು ರದ್ದು ಮಾಡಿ ಏನು ಪ್ರಯೋಜನ?" ಎಂದು ಕೇಳಿದರು. "ನೀವೇ ಯೋಚಿಸಿ" ಎಂದೆ. ಆಗ ಮೇಲಿನ ಬರ್ತ್‌ನಲ್ಲಿದ್ದ ಯುವಕನೊಬ್ಬ "ಏನು ಪ್ರಯೋಜನ ಗೊತ್ತಾ? ದೊಡ್ಡ ದೊಡ್ಡ ಉದ್ಯಮಿಗಳೆಲ್ಲ ಬ್ಯಾಂಕುಗಳಿಂದ ಸಾಲ ಪಡೆದು ಅವನ್ನು ಮರುಪಾವತಿಸಿಲ್ಲ. ಆದ್ದರಿಂದ ಬ್ಯಾಂಕ್‌ಗಳಲ್ಲಿ ಈಗ ದುಡ್ಡಿಲ್ಲ. ಹಾಗಾಗಿ, ಹೇಗಾದರು ಮಾಡಿ ಜನರೇ ತಮ್ಮ ಹಣವನ್ನು ಬ್ಯಾಂಕ್‌ಗಳಲ್ಲಿ ಭರ್ತಿ ಮಾಡುವಂತೆ ಮಾಡಬೇಕಿತ್ತು. ಈಗ ಜನ ತಮ್ಮ ಹಳೆ ನೋಟುಗಳಿಗೆ ಬೆಲೆ ಇಲ್ಲದಂತಾಗುತ್ತದೆ ಎಂದು ಅವನ್ನು ಬ್ಯಾಂಕ್‌ಗಳಿಗೆ ತುಂಬಿಸುತ್ತಿದ್ದಾರೆ" ಎಂದ.

"ಹಾಗಾದರೆ ಇದರಿಂದ ಕಪ್ಪುಹಣ ಸಮಸ್ಯೆ ಬಗೆಹರಿಯುವುದಿಲ್ಲವೇ?" ಎಂದು ಒಬ್ಬರು ಪ್ರಶ್ನಿಸಿದರು. "ಖೋಟಾನೋಟಿನ ಸಮಸ್ಯೆ ಕೆಲವು ಕಾಲ ಬಗೆಹರಿಯುತ್ತೆ. ಆದರೆ ಅದು ಅಷ್ಟು ದೊಡ್ಡ ಮೊತ್ತದಲ್ಲಿಲ್ಲ. ಹೊಸ ನೋಟು ಬಂದ ಕೆಲವೇ ದಿನಗಳಲ್ಲಿ ಅದರ ನಕಲನ್ನೂ ಮಾಡುತ್ತಾರೆ. ಇನ್ನು ಹೆಚ್ಚಿನ ಭ್ರಷ್ಟರು ತಮ್ಮ ಕಳ್ಳ ಆದಾಯವನ್ನೆಲ್ಲ ಆಸ್ತಿ ಚಿನ್ನ ಇತ್ಯಾದಿಗಳಲ್ಲಿ ಇಟ್ಟಿರುತ್ತಾರೆಯೇ ಹೊರತು ನಗದಿನ ರೂಪದಲ್ಲಿ ಇಟ್ಟಿರೋದು ತುಂಬಾ ಕಡಿಮೆ. ಅವು ಮಾತ್ರ ಅನಾಣ್ಯೀಕರಣಗೊಳ್ಳುತ್ತವೆ. ಎಷ್ಟೇ ಆದರೂ ಮೋದಿ ಹೇಳಿರುವಂತೆ ನಮ್ಮ ದೇಶದಲ್ಲಿರುವ ಕಪ್ಪು ಹಣವೆಲ್ಲ ಸಂಗ್ರಹವಾಗಿ ನಮ್ಮೆಲ್ಲರ ಬ್ಯಾಂಕ್ ಖಾತೆಗೆ 15 ಲಕ್ಷ ರೂಪಾಯಿಗಳಂತೂ ಖಂಡಿತವಾಗಿಯೂ ಬಂದು ಬೀಳುವುದಿಲ್ಲ" ಎಂದೆ. "ಹೌದಾ? ನಾನು ಈ ಮೋದಿ ಏನೋ ದೊಡ್ಡದು ಮಾಡಕ್ಕೆ ಹೊರಟಿದ್ದಾನೆ ಎಂದುಕೊಂಡಿದ್ದೆ. ನೋಡಿದರೆ ಆವನು ನಮ್ಮ ಜೇಬಿಗೇ ಕೈಹಾಕಿದ್ದಾನೆ ಕಳ್ಳ" ಅಂತ ಅವರಿಬ್ಬರು ನಿಟ್ಟುಸಿರುಬಿಟ್ಟರು.

ಇವತ್ತು ಬುಧವಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತನ್ನಿಂದ ಸಾಲ ಪಡೆದಿದ್ದ 63 ಕಂಪನಿಗಳಿಂದ ಹಣ ವಾಪಸ್ ಬರಲ್ಲ ಎಂದು ಅದನ್ನೆಲ್ಲ ಮನ್ನಾ ಮಾಡಿದೆ. ಆ 63 ಕಂಪನಿಗಳು ಕೊಡಬೇಕಿದ್ದದ್ದು ಎಷ್ಟು ಗೊತ್ತಾ? ಬರೋಬ್ಬರಿ 7,016 ಕೋಟಿ ರೂಪಾಯಿಗಳು. ಅದರಲ್ಲಿ ಹೆಂಡದ ದೊರೆ ವಿಜಯ್ ಮಲ್ಯ ಕೈಎತ್ತಿದ್ದ 1,201 ಕೋಟಿ ರೂಪಾಯಿಗಳೂ ಸೇರಿದೆ. ಇತ್ತ ಲಕ್ಷಾಂತರ ಜನರು ಕಷ್ಟಪಟ್ಟು ದುಡಿದು ಗಳಿಸಿದ್ದ ಆದರೆ ಈಗ ಅನಾಣ್ಯೀಕರಣಗೊಂಡಿರುವ ಹಣವನ್ನು ಗಂಟೆಗಟ್ಟಲೆ ಕ್ಯೂನಲ್ಲಿ ನಿಂತು ಬ್ಯಾಂಕುಗಳಲ್ಲಿ ಜಮೆ ಮಾಡುತ್ತಿದ್ದರೆ, ಅತ್ತ ಬ್ಯಾಂಕ್‌ಗಳು ವಿಜಯ್ ಮಲ್ಯ ತರಹದವರು ತಮ್ಮ ಶೀಟಿ ಮತ್ತು ಚೇಷ್ಟೆಗಳನ್ನು ಈಡೇರಿಸಿಕೊಳ್ಳಲು ಮಾಡಿದ್ದ ಸಾಲವನ್ನು ಮನ್ನಾ ಮಾಡುತ್ತವೆ ಎಂದರೆ ಮೋದಿ ಯಾರ ಪರ ಎಂದು ಸುಲಭವಾಗಿ ಗ್ರಹಿಸಬಹುದು.

ವಿದೇಶಗಳಲ್ಲಿ ಕೂಡಿಟ್ಟಿರುವ ಕಪ್ಪುಹಣವನ್ನು ವಾಪಸ್ ತರಲು ಮೋದಿ ಸಾಹೇಬನಿಂದ ಸಾಧ್ಯವಾಗಲಿಲ್ಲ, ಹೋಗಲಿ, ಅವರ ಹೆಸರುಗಳನ್ನು ಬಹಿರಂಗಪಡಿಸುವುದೂ ಆತನಿಂದ ಆಗಲಿಲ್ಲ, ಇನ್ನು ಚುನಾವಣೆ ವೇಳೆ ಮಾತು ಕೊಟ್ಟಂತೆ ಪ್ರತಿಯೊಬ್ಬರ ಬ್ಯಾಂಕು ಖಾತೆಗೆ 15 ಲಕ್ಷ ರೂಪಾಯಿಗಳನ್ನು ತಂದು ಸುರಿಯುವುದಂತೂ ಕನಸಿನ ಮಾತು. ಮೋದಿಯ ಇಂತಹ ಅಸಹ್ಯಕರ ಜುಮ್ಲಾಗಳನ್ನು ಸಹಿಸಬಹುದು. ಆದರೆ ಬಡ ಭಾರತೀಯರ ಮತ್ತು ಮಧ್ಯಮ ವರ್ಗದವರ ಹೊಟ್ಟೆ ಮೇಲೆ ಚಪ್ಪಡಿ ಕಲ್ಲನ್ನು ಹಾಕುವುದನ್ನು ಹೇಗೆ ಸಹಿಸಲಾದೀತು?

ಪಾಪ ಅದ್ಯಾರೋ ವಯೋವೃದ್ಧರು ದಿನದ ಖರ್ಚಿಗಾಗಿ ಹಣ ಪಡೆಯಲು ಸಾಲುಗಟ್ಟಿ ನಿಂತಿದ್ದಾಗಲೇ ಸಾವಿಗೀಡಾದರು. ಅದಕ್ಕೆ ಬಿಜೆಪಿಯ ಉಪಾಧ್ಯಕ್ಷನೊಬ್ಬ ಪ್ರತಿಕ್ರಿಯಿಸಿದ್ದು ಹೇಗೆ ಗೊತ್ತಾ? "ರೇಷನ್ ಅಂಗಡಿ ಮುಂದೆ ಸಾಲುಗಟ್ಟಿ ನಿಂತಾಗಲೂ ಜನ ಸಾಯುತ್ತಾರೆ. ಏನೀಗ?" ಎಂದು ಆತ ಮರುಪ್ರಶ್ನಿಸಿದ.

ತನ್ನ ಈ ಹುಚ್ಚು ಕ್ರಮದಿಂದಾಗಿ ದೇಶದ ಬಹುಸಂಖ್ಯಾತ ಜನ ರೋಸಿಹೋಗಿದ್ದಾರೆ ಎಂದು ಗೊತ್ತಾದಾಗ ಮೋದಿ "ಸ್ವಲ್ಪ ತಾಳ್ಮೆ ವಹಿಸಿ. ಹಲವು ದಿನಗಳಲ್ಲಿ ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತೇನೆ" ಎಂದು ವಿನಂತಿಸಿಕೊಳ್ಳಲಿಲ್ಲ. ಬದಲಾಗಿ "ನಾನು ದೇಶದ ಉದ್ಧಾರಕ್ಕಾಗಿ ಹೀಗೆಲ್ಲಾ ಮಾಡುತ್ತಿದ್ದೇನೆ. ಆದರೆ 70 ವರ್ಷ ಆಡಳಿತ ನಡೆಸಿದವರು ಬೇಕಂತಲೇ ನನ್ನ ವಿರುದ್ಧ ಪಿತೂರಿ ನಡೆಸಿದ್ದಾರೆ" ಎಂದು ಆರೋಪಿಸಿದ. "ಅಲ್ಲಾ ಮಾರಾಯಾ, ತಮ್ಮ ಹಣವನ್ನು ಪಡೆಯಲು ಕಷ್ಟ ಪಡುತ್ತಿರುವ ಜನ ಯಾವಾಗ 70 ವರ್ಷ ಅಧಿಕಾರ ಚಲಾಯಿಸಿದ್ದರು? ಅವರು ಹೇಗೆ ನಿನ್ನ ವಿರುದ್ಧ ಪಿತೂರಿ ಮಾಡಲು ಸಾಧ್ಯ?" ಎಂದು ಆತನಿಗೆ ವಿವೇಚನೆ ಹೇಳುವವರು ಆತನ ಪಕ್ಷದಲ್ಲೇ ಇಲ್ಲ.

ಮೋದಿ 500 ಮತ್ತು 1,000 ಮುಖಬೆಲೆಯ ನೋಟುಗಳನ್ನು ಅನಾಣ್ಯೀಕರಿಸಿದ್ದನ್ನು 'ಮಾಸ್ಟರ್ ಸ್ಟ್ರೋಕ್', 'ಟ್ರಂಪ್ ಕಾರ್ಡ್' ಎಂದೆಲ್ಲ ಹೊಗಳಿದ್ದ ಹಲವು ಮಾಧ್ಯಮಗಳಿಗೆ ಮತ್ತು ಮಧ್ಯಮ ವರ್ಗದ ಜನರಿಗೆ ಈಗ ಇದರ ಹಿಂದಿರುವ ಮಸಲತ್ತುಗಳು ನಿಧಾನವಾಗಿಯಾದರೂ ಅರ್ಥವಾಗುತ್ತಿವೆ. ಹೊಸ ನೋಟುಗಳಲ್ಲಿ ಯಾವ ಚಮತ್ಕಾರವೂ ಇಲ್ಲ, ಇದರಿಂದಾಗಿ ಕಪ್ಪುಹಣ ಮಾಯವಾಗುವುದೂ ಇಲ್ಲ, ತಾವು ಇಷ್ಟೆಲ್ಲ ಕಷ್ಟಪಡಬೇಕಾಗಿ ಬಂದದ್ದು ಮೋದಿಯ ಹುಚ್ಚಾಟದಿಂದ ಎಂಬುದೂ ಗೊತ್ತಾಗುತ್ತಿದೆ.

ಮೋದಿ ಈಗಲೂ "ದೇಶಕ್ಕಾಗಿ ಹಲವು ದಿನ ಇವನ್ನೆಲ್ಲ ಸಹಿಸಬೇಕಿದೆ" ಎನ್ನುತ್ತಿದ್ದರೂ ಇದು ಸದ್ಯದಲ್ಲೇ ಬಗೆಹರಿಯುವ ಸಮಸ್ಯೆ ಅಲ್ಲ. ಸಾಮಾನ್ಯ ಜನರು ಕನಿಷ್ಟವೆಂದರೂ ಇನ್ನು ನಾಲ್ಕು ತಿಂಗಳ ಕಾಲ ಚಿಕ್ಕಾಸಿಗೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಇದರಿಂದಾಗಿ ಹಲವಾರು ವಹಿವಾಟುಗಳ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಪಶ್ಚಿಮ ಬಂಗಾಳದಲ್ಲಿ ಮೀನು ಕೊಳ್ಳಲೂ ಜನ ಇಲ್ಲದೆ ಅಲ್ಲಿನ ಮೀನುಗಾರರೂ ಮತ್ತು ಖರೀದಿದಾರರೂ ಸಂಕಷ್ಟಕ್ಕೆ ಬಿದ್ದಿದ್ದಾರೆ. ಪಂಜಾಬ್ ರಾಜ್ಯದಲ್ಲಿ ಬಿತ್ತನೆ ಮಾಡಲು ಕಾಸಿಲ್ಲದೆ ರೈತಾಪಿಗಳು ಕಂಗಾಲಾಗಿದ್ದಾರೆ. ಬಿತ್ತನೆ ಸಾಧ್ಯವಾಗದಿದ್ದರೆ ಭತ್ತ ಮತ್ತು ಗೋದಿಯ ರೇಟು ಇನ್ನು ಕೆಲವೇ ದಿನಗಳಲ್ಲಿ ಗಗನಕ್ಕೇರುತ್ತದೆ. ಕೈಯಲ್ಲಿ ಕಾಸಿಲ್ಲ, ಹೊಟ್ಟೆಗೆ ಹಿಟ್ಟಿಲ್ಲ ಎಂಬ ಪರಿಸ್ಥಿತಿ ಈ ದೇಶದ ಲಕ್ಷಾಂತರ ಜನರ ಮುಂದೆ ನಿರ್ಮಾಣವಾಗಲಿದೆ. ಇದೆಲ್ಲ ಹುಚ್ಚ ಮೋದಿಯ ಕೊಡುಗೆ.

ಜನರ ಕೋಪ ಈಗಾಗಲೇ ಬಿಜೆಪಿಯವರನ್ನು ತಟ್ಟುತ್ತಿದೆ. ಆ ಪಕ್ಷದ ಅಧ್ಯಕ್ಷ ಅಮಿತ್ ಶಾ "ಕಪ್ಪು ಹಣದ ಮೇಲೆ ಮೋದಿಯವರು ಮಾಡಿರುವ ಸರ್ಜಿಕಲ್ ದಾಳಿಯನ್ನು ಮೆಚ್ಚಿ ನಿಮ್ಮ ಕ್ಷೇತ್ರಗಳಲ್ಲಿ ದೊಡ್ಡ ಫ್ಲೆಕ್ಸ್‌ಗಳನ್ನು ಹಾಕಿ" ಎಂದು ಎಲ್ಲಾ ಸಂಸದರಿಗೆ ಆದೇಶಿಸಿದ್ದಾನೆ. ಶಾ ಹೇಳುವುದನ್ನೆಲ್ಲ ಶಿರಸಾವಹಿಸಿ ಪಾಲಿಸುವ ಬಿಜೆಪಿ ಸಂಸದರು ಈ ಬಾರಿ ಆತನ ಆದೇಶಕ್ಕೆ ಕಿಮ್ಮತ್ತು ಮರ್ಯಾದೆಯನ್ನೂ ಕೊಟ್ಟಿಲ್ಲ. ಗುಜರಾತಿನ ಒಬ್ಬ ಸಂಸದನ ಹೊರತಾಗಿ ದೇಶದಾದ್ಯಂತ ಯಾವ ಸಂಸದನೂ ಅಂತಹ ಫ್ಲೆಕ್ಸ್ ಹಾಕುವ ಉಸಾಬರಿಗೇ ಹೋಗಿಲ್ಲ.

ಇನ್ನು ಗುಜರಾತ್ ರಾಜ್ಯದ ಜನರೇ ಮೋದಿ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅಲ್ಲಿ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯುತ್ತಿದ್ದು, ಬಿಜೆಪಿಯ ಕಾರ್ಯಕರ್ತರು ತಮ್ಮ ಪ್ರಚಾರಪತ್ರಗಳನ್ನು ನೀಡಲು ಬ್ಯಾಂಕ್ ಒಂದರ ಮುಂದೆ ಸಾಲುಗಟ್ಟಿನಿಂತಿದ್ದ ಜನರತ್ತ ಸಾಗಿದರು. ಅವರು ಜನರಿಂದ ಶಹಭಾಶ್‌ಗಿರಿಯನ್ನು ನಿರೀಕ್ಷಿಸಿದ್ದರು. ಆದರೆ ಅವರಿಗೆ ಜನರಿಂದ ಸಿಕ್ಕಿದ್ದು ಧರ್ಮದೇಟು!

ಬಿಜೆಪಿಯ ವಿರುದ್ಧ ಅದರ ಮಿತ್ರಪಕ್ಷಗಳಾದ ಪಂಜಾಬಿನ ಅಕಾಲಿ ದಳ ಮತ್ತು ಮಹಾರಾಷ್ಟ್ರದ ಶಿವಸೇನೆ ತಿರುಗಿ ಬಿದ್ದಿವೆ. ಹಾಗೆಯೇ ಬಿಜೆಪಿಯ ಹಲವಾರು ನಾಯಕರೇ ಮಾಧ್ಯಮಗಳ ಮುಂದೆ ತಮ್ಮ ಹೆಸರನ್ನು ಹೇಳಲಿಚ್ಛಿಸದೆ ಮೋದಿಯ ಕ್ರಮವನ್ನು ಟೀಕಿಸುತ್ತಿದ್ದಾರೆ. ಮೋದಿಗೂ ತಾನು ಮಾಡಿರುವ ಯಡವಟ್ಟಿನ ತೀವ್ರತೆ ಅರ್ಥವಾಗುತ್ತಿದೆ. ಆದ್ದರಿಂದಲೇ ಆತ ಹೋದಬಂದಲ್ಲಿ ವಿಚಿತ್ರವಾಗಿ ತಡಬಡಿಸುತ್ತಿದ್ದಾನೆ.

ಈಗಾಗಲೇ ಮೋದಿಯ ಈ ಕ್ರಮದಿಂದಾಗಿ ದೇಶಾದ್ಯಂತ 25ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಮಗಳ ಚಿಕಿತ್ಸೆಗೆಂದು ಹಳೆ ನೋಟುಗಳನ್ನು ಹಿಡಿದು ಆಸ್ಪತ್ರೆಗೆ ಹೋಗಿದ್ದ ತಂದೆತಾಯಿಯನ್ನು ಆಸ್ಪತ್ರೆಯವರು ಹೊರ ದೂಡಿದ್ದರಿಂದ ಅವರ ಕೂಸು ಕಣ್ಣುಮುಚ್ಚಿದೆ. ಗುಜರಾತಿನಲ್ಲಿ ಹಳೆ ನೋಟುಗಳನ್ನು ಮಾತ್ರ ಹೊಂದಿದ್ದ ತಾಯಿಯೊಬ್ಬಳು ತನ್ನ ಇಬ್ಬರು ಮಕ್ಕಳಿಗೆ ಊಟ ಕೊಡಲಾಗದೆ ಅಸಹಾಯಕತೆಯಿಂದ ನೇಣು ಹಾಕಿಕೊಂಡಿದ್ದಾಳೆ.


ಕಾನ್ಪುರದಲ್ಲಿ ಹಲವಾರು ತಿಂಗಳುಗಳಿಂದ ತನ್ನ ಭೂಮಿಯನ್ನು ಮಾರಲು ಒಬ್ಬ ಯುವಕ ಪ್ರಯತ್ನಿಸುತ್ತಿದ್ದ. ನವೆಂಬರ್ 8ರಂದು ಕೊನೆಗೂ ಯಶಸ್ವಿಯಾಗಿ 70 ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಪಡೆದಿದ್ದ. ಆದರೆ ಮಾರನೆ ದಿನವೇ ಮೋದಿ 500 ಮತ್ತು 1,000 ನೋಟುಗಳನ್ನು ಅನಾಣ್ಯೀಕರಣಗೊಳಿಸಿರುವುದಾಗಿ ಘೋಷಿಸಿದ್ದನ್ನು ಟಿವಿಯಲ್ಲಿ ಕೇಳುತ್ತಲೇ ಆತನಿಗೆ ಹೃದಯಾಘಾತವಾಗಿ ಸತ್ತು ಹೋದ.

ತೆಲಂಗಾಣದಲ್ಲಿ ತನ್ನ ಗಂಡನ ಚಿಕಿತ್ಸೆಗೆ ಮತ್ತು ಮಗಳ ಮದುವೆಗೆ ಎಂದು ತನ್ನ ಭೂಮಿಯನ್ನು ಮಾರಿದ್ದ ಮಹಿಳೆಯೊಬ್ಬರಿಗೆ ಆಕೆಯ ಬಳಿಯಿದ್ದ 54 ಲಕ್ಷ ರೂಪಾಯಿಗಳು ಈಗ ರದ್ದಿಗೆ ಸಮ ಎಂದಿದ್ದರಿಂದ ಆಕೆ ಆತಂಕಗೊಂಡು ಆತ್ಮಹತ್ಯೆ ಮಾಡಿಕೊಂಡಳು.

ಉಡುಪಿಯಲ್ಲಿ ಬ್ಯಾಂಕ್ ಬಾಗಿಲು ತೆಗೆಯುವ ಮುನ್ನವೇ ಉದ್ದನೆ ಸಾಲಿನಲ್ಲಿ ಕಾದು ನಿಂತಿದ್ದ ವ್ಯಕ್ತಿಯೊಬ್ಬರಿಗೆ ಹೃದಯಾಘಾತವಾಗಿ ಅಲ್ಲೇ ತೀರಿಕೊಂಡರು.

ಹೀಗೆ ಸತ್ತವರ್‍ಯಾರೂ ಕಳ್ಳಕಾಕರಲ್ಲ, ಕಪ್ಪುಹಣ ಹೊಂದಿದವರಲ್ಲ. ಅವರ್‍ಯಾರೂ ಅಂಬಾನಿ, ಅದಾನಿ, ಟಾಟಾ, ಬಿರ್ಲಾಗಳಲ್ಲ. ಅವರೆಲ್ಲ ಕಷ್ಟ ಪಟ್ಟು ಪ್ರಾಮಾಣಿಕವಾಗಿ ದುಡಿದು ಜೀವಿಸುತ್ತಿದ್ದ ಭಾರತದ ಸಾಮಾನ್ಯ ಪ್ರಜೆಗಳು, ಇಲ್ಲಿನ ರೈತರು, ಗೃಹಿಣಿಯರು, ಮಧ್ಯಮವರ್ಗದವರು. ತಾನು ಕಪ್ಪುಹಣದ ವಿರುದ್ಧ ಸಮರ ಸಾರುತ್ತೇನೆ ಎಂದು ಹೊರಟ ಮೋದಿ ಮಾಡಿದ ಯಡವಟ್ಟಿಗೆ ಬಲಿಯಾದ ಅಮಾಯಕರು ಅವರೆಲ್ಲರೂ. ಅವರ ಸಾವಿಗೆ ಮೋದಿಯೇ ನೇರ ಹೊಣೆ.

ಮೋದಿ ಮಾಡಿರುವುದು ಕಪ್ಪುಹಣದ ಮೇಲೆ 'ಸರ್ಜಿಕಲ್ ಸ್ಟ್ರೈಕ್' ಅಲ್ಲ, ಆತ ಸಾವಿಗೆ ದೂಡಿರುವುದು ಈ ದೇಶದ ಅಸಹಾಯಕ ಜನರನ್ನು. ಮೋದಿಯ ತುಘಲಕ್ ದರ್ಬಾರಿನಲ್ಲಿ ಇದಕ್ಕಿಂತ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ? •


ಡಾ. ಬಿ.ಎ. ಸನದಿ

ದಾದಾ ಸಾಹೇಬ್ ಅಹ್ಮದ್ ಸಾಹೇಬ್ ಸನದಿ ಅ
ಕನ್ನಡದ ಮಹತ್ವದ ಕವಿ ಸಾನೆಟ್ ಸಾಮ್ರಾಟ ಡಾ. ಕನಿಷ್ಠ ಪ್ರಜ್ಞೆಯೂ
ಘೋಷಣೆಯಾಗಿರುವ ಪ್ರತಿಷ್ಠಿತ 'ಪಂಪ ಪ್ರಶಸ್ತಿ' ಗೌರವಯುತವಾಗಿ ಕೊಡಬೇಕೆಂಬ ಇಲ್ಲದಿರು
ಸಂಸ್ಕೃತಿ ಇಲಾಖೆ ಮಂತ್ರಿಣಿ ಉಮಾಶ್ರೀ ಮತ್ತಾಕೆಯ ಇಲಾಖೆಯ ಅಧಿಕಾರಿಗಳಿಗ್ಯಾರಿಗೂ "
ಖಂಡನೀಯ! 83ರ ಇಳಿವಯಸ್ಸಿನ ಸನದಿಗೆ ಕನ್ನಡ ಸಂಸ್ಕೃತಿ ಇಲಾಖೆಯ ಅಧಿಕಪ್ರಸಂಗಿ ಅಧಿಕಾರಿಗಳು ಮ
ಕೊಡ್ತೇವೆ ಕಾಗಿನೆಲೆಗೆ ಬನ್ನಿ.... ಬೆಂಗಳೂರಿಗೆ ಬನ್ನಿ... ಅಲ್ಲಿಗೆ ಬನ್ನಿ.... ಇಲ್ಲಿಗೆ ಬನ್ನಿ...." ಎಂದು ಪ್ರ
ಬಂದಂತೆ ಬಡಬಡಿಸುತ್ತಿರುವುದು ಆಡಳಿತ ವ್ಯವಸ್ಥೆಯ ದುರ್ಗತಿಗೆ ಸಂಕೇತದಂತಿದೆ!! ಪಂಪ ಪ್ರಶಸ್ತಿ
ಬನವಾಸಿ ಕದಂಬೋತ್ಸವದ ಪ್ರಧಾನ ಕಾರ್ಯಕ್ರಮ. ಆದರೆ ಇದನ್ನು ಬುದ್ಧಿಪೂರ್ವಕವಾಗೇ ಕಡೆಗಣಿ-
ಅಧಿಕಾರಸ್ಥರು ಎಲ್ಲಾದರೂ ಪ್ರಶಸ್ತಿ ಕೊಟ್ಟು ಕೈ ತೊಳೆದುಕೊಳ್ಳುವ ತರಾತುರಿಯಲ್ಲಿದ್ದಾರೆ. ಬನವಾಸಿ ಬಿಟ್ಟು ಬ
ಪಂಪ ಪ್ರಶಸ್ತಿ ನೀಡುವುದೇ ಮೂರ್ಖತನ; ಪ್ರಶಸ್ತಿಯ ಘನತೆಗೂ ಕುಂದು. ಉತ್ತರ ಕನ್ನಡದಲ್ಲಿ ನೆಲೆಸಿರುವ ಸನ
ಬನವಾಸಿ ಹತ್ತಿರ; ಬೇರೆ ಕಡೆ ಪ್ರಶಸ್ತಿ ಸ್ವೀಕರಿಸುವುದು ಸನದಿಗೆ ಬೇಸರದ ಸಂಗತಿಯೇ! ವಯೋ ಸಹಜ ಕಾಯಿಲೆ
ಸುಸ್ತಾಗಿ ಆಸ್ಪತ್ರೆ ಸೇರಿರುವ ಸನದಿಯನ್ನು ಈವರೆಗೆ ಕನ್ನಡ ಸಂಸ್ಕೃತಿ ಇಲಾಖೆಯ ಪ್ರಭೃತಿಗಳಾಗಲಿ, ಜಿಲ್ಲಾ
ದೋಷಪಾಂಡೆಯಾಗಲಿ ಅಥವಾ ಜಿಲ್ಲಾಡಳಿತವಾಗಲಿ ಕಂಡು ನಾಲ್ಕು ಸಾಂತ್ವನದ ಮಾತಾಡಿಲ್ಲ. ಇಂಥ ಭ
ಕನ್ನಡ-ಸಂಸ್ಕೃತಿ-ಸಾಹಿತ್ಯ-ಪಂಪ ಪ್ರಶಸ್ತಿ-ಸನದಿಯ ಘನತೆ-ಗೌರವ -ಮಹತ್ವ ಅದ್ಹೇಗೆ ಅರ್ಥವಾದೀತು?

ಪಂಪ ಪ್ರಶಸ್ತಿಯೂ ಗಾಂಪ ಆಡಳಿತಗಾರರೂ!

ಆರಂಕುಶ ವಿಟ್ಟೊಡೆಂ
ನೆನೆವುದೆನ್ನ ಮನಂ
ಬನವಾಸಿ ದೇಶಂ

- ಹಾಗೆಂದು ಎದೆ ತುಂಬಿ ಹಾಡಿದವನು ಪಂಪ ಮಹಾಕವಿ. ಆತನಿಗೆ ಉತ್ತರ ಕನ್ನಡದ ನಿತ್ಯ ಹರಿದ್ವರ್ಣದ ಶುಕ-ಪಿಕಗಳ ಬನವಾಸಿ ಬಗೆಗಿದ್ದ ವ್ಯಾಮೋಹ ಯಾರು ಅಂಕುಶ ಇಟ್ಟರೂ ಬಿಡದಂಥದ್ದಾಗಿತ್ತು! ಇಂಥ ಉದ್ದಾಮ ಕವಿ ಪುಂಗವನ ಹೆಸರಲ್ಲಿ ರಾಜ್ಯ ಸರ್ಕಾರ 1987ರಿಂದ ನಾಡಿನ ಶ್ರೇಷ್ಠ ಕವಿ-ಸಾಹಿತಿಗೆ ಕೊಡುತ್ತಿರುವ ಪ್ರತಿಷ್ಠಿತ ಪ್ರಶಸ್ತಿ ಅದ್ಯಾಕೋ ಇತ್ತೀಚಿನ ವರ್ಷದಲ್ಲಿ ಒಂದಲ್ಲ ಒಂದು ಗೊಂದಲ-ಗಲಾಟೆಗೆ ತುತ್ತಾಗುತ್ತಿದೆ. ಕನ್ನಡನಾಡಿನ ನೋಬಲ್ ಪ್ರಶಸ್ತಿ ಅಥವಾ ಕರ್ನಾಟಕದ ಜ್ಞಾನಪೀಠ ಪುರಸ್ಕಾರ ಎಂಬಷ್ಟು ವಜನಿನ ಈ ಪ್ರಶಸ್ತಿಯ ಪ್ರದಾನ ಸಮಾರಂಭ ಆಳುವವರ ಅವಜ್ಞೆ, ಕನ್ನಡ-ಸಂಸ್ಕೃತಿ ಇಲಾಖೆಯ ಅಧಿಕಾರಿಗಳ ಅಧಿಕ ಪ್ರಸಂಗದಿಂದ ಸಲ್ಲದ ವಿವಾದಕ್ಕೆ ಎಡೆಯಾಗುತ್ತಿದೆ!


ಈ ಬಾರಿಯ ಪಂಪ ಪ್ರಶಸ್ತಿಗೆ ಭಾಜನರಾಗಿರುವುದು ಮಾನವ್ಯ ಕವಿ-ಸಾನೆಟ್ ಸಾಮ್ರಾಟ ಡಾ. ಬಿ.ಎ.ಸನದಿ. ಬೆಳಗಾವಿ ಜಿಲ್ಲೆಯ ಮೂಲದವರಾದ ಸನದಿ ತಮ್ಮ ಜೀವಿತದ ಬಹುಕಾಲ ಹೊರನಾಡು-ಮುಂಬೈನಲ್ಲಿ ಕಳೆದಿದ್ದಾರೆ. ಅಲ್ಲಿಯ ಆಕಾಶವಾಣಿ ಕೇಂದ್ರದಲ್ಲಿ ಹೊಟ್ಟೆಪಾಡಿನ ಚಾಕರಿ ಮಾಡುತ್ತಿದ್ದ ಸನದಿಯ ಹೃದಯ ಮಾತ್ರ ಕನ್ನಡಕ್ಕಾಗಿ ಸದಾ ತುಡಿಯುತ್ತಲೇ ಇರುತ್ತಿತ್ತು. ಅಲ್ಲವರು ಕನ್ನಡ ಕಾರ್ಯಕ್ರಮಗಳನ್ನು ಅರ್ಪಣಾಭಾವದಿಂದ ನಡೆಸಿದರು; ಕನ್ನಡದಲ್ಲಿ ಕವಿತೆಗಳನ್ನು ಬರೆದರು; ಗದ್ಯ ರಚನೆ ಮಾಡಿದರು. ಮುಂಬೈ ಸನದಿಯವರ ಕರ್ಮಭೂಮಿ ಆಗಿತ್ತು. ಆದರೆ ಕನ್ನಡ ಮಣ್ಣಿನ ಸೆಳೆತ ಸದಾ ಸತಾಯಿಸುತ್ತಲೇ ಇತ್ತು.

ನಿವೃತ್ತಿಯಾಗುವುದನ್ನೇ ಕಾಯುತ್ತಿದ್ದ ಸನದಿ ನೇರವಾಗಿ ಬಂದಿದ್ದು ಪಂಪನ ಬನವಾಸಿಯ ಸರಹದ್ದಿನಲ್ಲಿದ್ದ ಉತ್ತರ ಕನ್ನಡದ ಕುಮಟಾಕ್ಕೆ! ಅದವರ ಹೆಂಡತಿಯ ತವರೂರು. ಬೆಳಗಾವಿ ಜಿಲ್ಲೆಯವರಾದ ಸನದಿ ಪಂಪನ ನಾಡಿನ ಮಣ್ಣ ಕಣ್ಣಿನ ಸೆಳೆತಕ್ಕೆ ಸಿಲುಕಿದ್ದರು. ಕನ್ನಡ ಕೃಷಿ ಮಾಡುತ್ತ ಸನದಿ ಉತ್ತರ ಕನ್ನಡಿಗರೇ ಆಗಿಹೋದರು; ಪಂಪನ ಪಿಂಪಿನ ಬನವಾಸಿ ಬಳಿಯೇ ನೆಲೆಯೂರಿದರು. ಕನ್ನಡದ ರಾಜ ಮಯೂರವರ್ಮನ ಕದಂಬರ ಬೀಡಿನಲ್ಲಿ ಕನ್ನಡ ಕಟ್ಟುವ ಕೆಲಸ ಮುಂದುವರಿಸಿದರು.

ಈ ಬಾರಿಯ ಪಂಪ ಪ್ರಶಸ್ತಿ ಸನದಿಯವರಿಗೆ ಸಿಕ್ಕಾಗ ಉತ್ತರ ಕನ್ನಡದ ಸಾಹಿತ್ಯ-ಸಾಂಸ್ಕೃತಿಕ ವಲಯದಲ್ಲಷ್ಟೇ ಅಲ್ಲ ಸಾಮಾಜಿಕ ಪರಿಸರದಲ್ಲೂ ಸಂಭ್ರಮದ ಸಂಚಲನ ಉಂಟಾಗಿತ್ತು. ಅರ್ಹರಿಗೆ ಪಂಪ ಪ್ರಶಸ್ತಿ ಸಿಕ್ಕಿದೆ ಎಂಬ ಉದ್ಗಾರ ಎದ್ದಿತ್ತು. ಆದರೆ ಸಾಹಿತ್ಯ-ಸಂಸ್ಕೃತಿಯ ಗಂಧವೇ ಇಲ್ಲದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಭಂಡ ಅಧಿಕಾರಿಗಳು ಡಾ. ಸನದಿಯವರನ್ನು ನಡೆಸಿಕೊಳ್ಳುತ್ತಿರುವ ರೀತಿ ಆಘಾತಕಾರಿಯಾಗಿದೆ! "ನಿಮಗೆ ಪಂಪ ಪ್ರಶಸ್ತಿ ಕಾಗಿನೆಲೆಯಲ್ಲಿ ಕೊಡ್ತೇವೆ.... ಬೆಂಗಳೂರಲ್ಲಿ ಕೊಡ್ತೇವೆ... ಅಲ್ಲಿ ಬನ್ನಿ... ಇಲ್ಲಿ ಬನ್ನಿ..." ಎಂದು ಸಂಸ್ಕೃತಿ ಇಲ್ಲದ ಕನ್ನಡ ಇಲಾಖೆಯ ಭಂಡ ಅಧಿಕಾರಿಗಳು ದಿಸಕ್ಕೊಂದರಂತೆ ಮೆಸೇಜು ಸನದಿಯವರಿಗೆ ರವಾನಿಸುತ್ತಿದ್ದಾರೆ. ಮೃದು ಸ್ವಭಾವದ ಸನದಿ ಅಧಿಕಾರಿವರ್ಗದ ಮಂಗಾಟವನ್ನೆಲ್ಲ ನಿರ್ವಿಕಾರ ಭಾವದಿಂದ ಎದುರಿಸುತ್ತಲೇ ಹೋದರು.

ಈಗ ಸನದಿ ಸಾಹೇಬರಿಗೆ ಬರೋಬ್ಬರಿ 83 ವರ್ಷದ ಇಳಿಪ್ರಾಯ! ಬೆಂಗಳೂರಿಗಲ್ಲ, ಕಾಗಿನೆಲೆಗೂ ಅಲ್ಲ, ಬನವಾಸಿಗೆ ಬನ್ನಿ ಎಂದರೂ ತಕ್ಷಣಕ್ಕೆ "ಹುಂ" ಗುಟ್ಟುವಂಥ ಆರೋಗ್ಯಸ್ಥಿತಿಯವರದಲ್ಲ. ಇದನ್ನು ಅರ್ಥ ಮಾಡಿಕೊಳ್ಳಲಾಗದ ಕನ್ನಡ-ಸಂಸ್ಕೃತಿ ಇಲಾಖೆಯ ಮಂತ್ರಿಣಿ ಉಮಾಶ್ರೀ, ಜಿಲ್ಲಾ ಉಸ್ತುವಾರಿ ಸಚಿವ ದೋಷಪಾಂಡೆ, ಕನ್ನಡ ಇಲಾಖೆಯ ಅಧಿಕಾರಿಗಳ ಹುಚ್ಚಾಟ ಕಂಡೂಕಾಣದಂತಿದ್ದಾರೆ. ರಂಗಭೂಮಿ ಹಿನ್ನೆಲೆಯ ಕಲಾವಿದೆ ಉಮಾಶ್ರೀಗೂ ತನ್ನ ಇಲಾಖೆಯ ಅಡ್ನಾಡಿ ಅಧಿಕಾರಿಯ ಅವಾಂತರ ಅರ್ಥವಾಗದಿರುವುದು ವಿಚಿತ್ರವಾದರೂ ಸತ್ಯ! ಸನದಿಯಂಥ ಹಿರಿಯ-ಮಹತ್ವದ ಕವಿಯ ಆರೋಗ್ಯದ ಬಗ್ಗೆಯೂ ಗಮನ ಹರಿಸದೆ ಕನ್ನಡ ಇಲಾಖೆಯ ಅಧಿಕಾರಿಗಳು ಹಾಗೇ ಹೇಳಿದ್ದರು. ದಿನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಗಡಿನಾಡ ಸಾಹಿತ್ಯ ಪ್ರಶಸ್ತಿ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಜತೆಯಲ್ಲೇ ಈ ಪಂಪ ಪ್ರಶಸ್ತಿಯನ್ನೂ ಕೊಟ್ಟು ಮೋಕಳಿಕ್ ಆಗುವ ಇರಾದೆ ಕನ್ನಡ ಇಲಾಖೆಯ ಸಂಸ್ಕೃತಿ ಹೀನ ಅಧಿಕಾರಿ ಗಣದಾಗಿತ್ತು. ಇದಕ್ಕೆ ಕನ್ನಡ-ಸಂಸ್ಕೃತಿ ಇಲಾಖೆಯ ಪೆದ್ದು ಮಂತ್ರಿಣಿಯೂ ಗೋಣಾಡಿಸಿದ್ದರು! ಸನದಿಯವರಿಗೆ ಕನ್ನಡ ಇಲಾಖೆಯ ಅಧಿಕಾರಿಗಳು ಫೋನಾಯಿಸಿ ಕಾಗಿನೆಲೆಗೆ ಬರುವಂತೆ ಹೇಳಿದ್ದರು. ಹಾಗಂತ ಅಧಿಕೃತ ಪತ್ರವೇನೂ ಕಳಿಸಿರಲಿಲ್ಲ.

ಹೀಗಾಗಿ ಕಾರ್ಯಕ್ರಮಕ್ಕೆ ಎರಡು ದಿನ ಮೊದಲು ಸನದಿಯವರು ಸಂಸ್ಕೃತಿ ಇಲಾಖೆಗೆ ಫೋನ್


ಆರ್.ವಿ. ದೇಶಪಾಂಡೆ

ಯಃಕಶ್ಚಿತ್ ಅಧಿಕಾರಿಗಳು ಮನಸೋ ಇಚ್ಛೆ ಮಾತಾಡುತ್ತಾರೆಂದರೆ ಏನರ್ಥ? ಪಂಪ ಪ್ರಶಸ್ತಿಗೆ ಕಿಮ್ಮತ್ತಿಲ್ಲವಾ? ಸನದಿ ಪ್ರತಿಭೆಗೆ ಬೆಲೆಯಿಲ್ಲವಾ? ಕನ್ನಡದ ಕತೆ ಇಷ್ಟೇನಾ?

ಸನದಿಯವರಿಗೆ ದೂರದೂರುಗಳಿಗೆ ಹೋಗಿ ಪ್ರಶಸ್ತಿ ಪಡೆಯುವಂಥ ಆರೋಗ್ಯವೂ ಇಲ್ಲ, ಪಂಪನ ಬನವಾಸಿ ದೇಶವ್ಯಾಪಿಯಲ್ಲಿರುವ ಸನದಿಗೆ ಬೇರೆಡೆ ಹೋಗಿ ಪ್ರಶಸ್ತಿ ಪಡೆಯುವ ಇರಾದೆಯೂ ಇಲ್ಲ! ಪಂಪ ಬಣ್ಣಿಸಿದ ನಾಡಿಂದ ಹೊರಗೆ ಪ್ರಶಸ್ತಿ ಸ್ವೀಕರಿಸುವ ಮನಸ್ಸೂ ಅವರಿಗಿಲ್ಲ. ಪಂಪ ಪ್ರಶಸ್ತಿ ಬನವಾಸಿಯಲ್ಲಿ ಜರುಗುವ 'ಕದಂಬೋತ್ಸವ'ದಲ್ಲಿ ಪ್ರದಾನ ಮಾಡೋದು ಪರಿಪಾಠ. ಕದಂಬೋತ್ಸವದ ಮುಖ್ಯ ಕಾರ್ಯಕ್ರಮವೂ ಅದೇ! ಹೀಗಿರುವಾಗ ಇದೇ ನವೆಂಬರ್ 15ರಂದು ಬೆಂಗಳೂರಲ್ಲಿ ನಡೆಯುವ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸನದಿಯವರಿಗೂ ಪ್ರಶಸ್ತಿ ಕೊಟ್ಟು ಕೈತೊಳೆದು ಕೊಳ್ಳಲು 'ಕಲ್ಚರ್' ಇಲ್ಲದ ಸಂಸ್ಕೃತಿ ಇಲಾಖೆಯ ಪ್ರಭೃತಿಗಳು ಸ್ಕೆಚ್ ಹಾಕಿದ್ದರು.

ಇದಕ್ಕೂ ಮೊದಲು ಕಾಗಿನೆಲೆಯಲ್ಲಿ ಪ್ರಶಸ್ತಿ ಕೊಡುವ ಕಾರ್ಯಕ್ರಮ ಎಂದು ಹೇಳಲಾಗಿತ್ತು. ಸನದಿಯವರಿಗೂ ಸಂಸ್ಕೃತಿ ಇಲಾಖೆಯ ಅಧಿಕ ಪ್ರಸಂಗಿ ಮಾಡಿದಾಗ ಬಂದ ಉತ್ತರವೇನು ಗೊತ್ತಾ? "ಅಯ್ಯೋ ಆ ಕಾರ್ಯಕ್ರಮ ಮುಂದಕ್ಕೆ ಹೋಗಿದೆ" ಅಂದರಂತೆ ಕನ್ನಡ ಇಲಾಖೆಯ ಕಾಗೆಗಳು! ಕವಿ ಪಂಪ, ಆತನ ಹೆಸರಿನ ಪ್ರಶಸ್ತಿ ಮತ್ತು ಸನದಿ ಬಗ್ಗೆ ಸರ್ಕಾರಿ ಪ್ರಭೃತಿಗಳಿಗೆ ಇರುವ ಗೌರವವಿದು!! ಛೇ, ಎಂಥ ಅಸಹ್ಯ?! ಕನ್ನಡ ಸಂಸ್ಕೃತಿ ಮಂತ್ರಿಣಿ ಉಮಾಶ್ರೀಗೂ ತನ್ನ ಇಲಾಖೆಯ ಅಧಿಕಪ್ರಸಂಗಿ ಅಧಿಕಾರಿಗಳ ಮೇಲೆ ಹಿಡಿತ ಇಲ್ಲದಿರುವುದು ವಿಚಿತ್ರವಾದರೂ ಸತ್ಯ!

ಈಗ ಸನದಿಯವರಿಗೆ ಪ್ರಶಸ್ತಿ ಪಡೆಯಲು ಬೆಂಗಳೂರಿಗೆ ಬನ್ನಿ ಎಂಬ ಫೋನ್ ಕರೆ ಬಂದಿದೆ. ಆದರೆ ವಯೋಸಹಜ ದೌರ್ಬಲ್ಯದಿಂದ ಸನದಿಯವರು ಕುಮಟೆಯ ಆಸ್ಪತ್ರೆಯೊಂದರಲ್ಲಿ ಮಲಗಿದ್ದಾರೆ. ಅವರಿಗೆ ನರಗಳ ಸೆಳೆತ, ಉಸಿರಾಟದ ತೊಂದರೆ, ತೀವ್ರ ರಕ್ತದೊತ್ತಡ, ಮೂತ್ರಕೋಶದ ಸಮಸ್ಯೆ ಬಾಧಿಸುತ್ತಿವೆ. ಪಂಪ ಪ್ರಶಸ್ತಿಯಂಥ ಪ್ರತಿಷ್ಠಿತ ಗೌರವಕ್ಕೆ ಪಾತ್ರವಾಗಿರುವ ನಾಡಿನ ಹೆಮ್ಮೆಯ ಸಾಹಿತಿಯೊಬ್ಬ ಆಸ್ಪತ್ರೆಯಲ್ಲಿದ್ದರೂ ಜಿಲ್ಲಾಡಳಿತವಾಗಲಿ, ಜಿಲ್ಲೆಯ ಉಸ್ತುವಾರಿ ಮಂತ್ರಿ ದೋಷಪಾಂಡೆಯಾಗಲಿ ಖಬರೇ ಇಲ್ಲದೆ ಹಾಯಾಗಿದ್ದಾರೆ.

ಕನ್ನಡ ಸಂಸ್ಕೃತಿ ಇಲಾಖೆಗಾಗಲಿ, ಜಿಲ್ಲಾ ಉಸ್ತುವಾರಿ


ಉ


ಮಂತ್ರಿ ದೇಶಪಾಂಡೆಗಾಗಲಿ ಶಿಷ್ಟಾಚಾರದ ಗಂಧಗಾಳಿಯೇ ಇದ್ದಂತಿಲ್ಲ. ಪ್ರಶಸ್ತಿಗೆ ಆಯ್ಕೆಯಾದವರಿಗೆ ಕನ್ನಡ-ಸಂಸ್ಕೃತಿ ಮಂತ್ರಿ ಗೌರವಪೂರ್ವಕ ಪತ್ರ ಬರೆದು ಅಭಿನಂದನೆ ಹೇಳಬೇಕು; ಆ ಪತ್ರವನ್ನು ತನ್ನ ಇಲಾಖೆಯ ಮಟ್ಟದ ಅಧಿಕಾರಿ ಮೂಲಕ ತಲುಪಿಸಬೇಕು. ಪ್ರಶಸ್ತಿ ವಿಜೇತರ ಆರೋಗ್ಯ ಇನ್ನಿತರ ಸಮಸ್ಯೆ ವಿಚಾರಿಸಿ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪ ಬಗ್ಗೆ ಸಮಾಲೋಚಿಸಬೇಕು. ಸಮಾರಂಭದಲ್ಲಿ ಪಾಲ್ಗೊಂಡು ಪ್ರಶಸ್ತಿ ಪಡೆಯುವಂತೆ ಅಧಿಕೃತ ಕೊಡಬೇಕು. ಇದು ಶಿಷ್ಟಾಚಾರ. ಇದನ್ನೆಲ್ಲ ಜಿ ಮಂತ್ರಿಯಿಂದ ಹಿಡಿದು ಜಿಲ್ಲಾಡಳಿತ, ಅಲ್ಲಿಂದ ಸಂಸ್ಕೃತಿ ಇಲಾಖೆಯವರ್‍ಯಾರೂ ಮಾಡಿಲ್ಲ. ಪ್ರತಿ ಪ್ರಶಸ್ತಿ ವಿಜೇತ ಸನದಿಯವರ ಅನಾರೋಗ್ಯಪೀ ಸ್ಥಿತಿಯನ್ನು ಕನ್ನಡ ಇಲಾಖೆ, ಜಿಲ್ಲಾಡಳಿತ ಮತ್ತ ಮಂತ್ರಿ ಹಾಗು ಕನ್ನಡ-ಸಂಸ್ಕೃತಿ ಮಂತ್ರಿ ಬುದ್ಧಿಪೂರ್ವಕವಾಗೇ ಉಪೇಕ್ಷಿಸುತ್ತಿದ್ದಾರೆ. ಇದು ತಾಯ್ನಾಡಿಗೆ ಅಧಿಕಾರಸ್ಥರು ಮಾಡುತ್ತಿರುವ ಅವಮಾನವೇ ಸರಿ!!

ಪಂಪ ಪ್ರಶಸ್ತಿಯನ್ನು ಬನವಾಸಿಯಲ್ಲಿ ನಡೆಸಲಾಗುವ ಕದಂಬೋತ್ಸವದಲ್ಲೇ ನೀಡಲಾಗ ಎಂದು ಕೆಲವು ತಿಂಗಳ ಹಿಂದೆ ಜಿಲ್ಲಾ ಮಂತ್ರಿ ಆರ್.ವಿ. ದೋಷಪಾಂಡೆ ಸಾಹೇಬರು ಬಡಬ ಅದು ಬಹುಶಃ ಆತನಿಗೇ ಮರೆತುಹೋಗಿದೆ!! ರಾಜಕಾರಣ ಮತ್ತು ಮಗನಿಗೆ ಅಧಿಕಾರಸ್ಥ ಪ್ರ ಮಾಡುವ ಮುತುವರ್ಜಿಗೆ ಮಂತ್ರಿಗಿರಿ ಮೀಸಲಿಟ್ಟಿರುವ ದೇಶಪಾಂಡೆಗೆ ಕಲೆ-ಸಂಗೀತ- ಸಂಸ್ಕೃತಿಗಳೆಲ್ಲ ಅರ್ಥವಾಗೋದೇ ಕಷ್ಟ-ಕಷ್ಟ! ಜೀವಮಾನವಿಡೀ ಕನ್ನಡ ಕಟ್ಟುವ ಕೆಲಸ ಮಾ ಪಂಪ ಪ್ರಶಸ್ತಿಯಂಥ ಮಹತ್ವದ ಗೌರವಕ್ಕೆ ಪಾತ್ರರಾಗಿರುವ ಸನದಿ ಆಸ್ಪತ್ರೆಯಲ್ಲಿದ್ದರೂ ನೋ ಹೋಗದ, ತನ್ನ ಜಿಲ್ಲಾಡಳಿತಕ್ಕೂ ಎಚ್ಚರಿಸದ ದೇಶಪಾಂಡೆ ಕಾರ್ಯವೈಖರಿ ಆಘಾತಕಾರಿಯೇ

ಅನಾರೋಗ್ಯದಲ್ಲಿರುವ ತಾನು ಪಂಪ ಪ್ರಶ ಸ್ವೀಕಾರಕ್ಕೆ ಬೆಂಗಳೂರಿಗೆ ಬಿಡಿ, ಬನವಾಸಿಗೂ ಹೋಗದ ಸ್ಥಿತಿಯಲ್ಲಿದ್ದೇನೆಂದು ಡಾ. ಬಾಬಾ ಅಹ್ಮದ್ ಸಾಹೇಬ್ ಸನದಿ ಉದ್ಗರಿಸಿರುವುದು ಆಡಳಿತ ವ್ಯವಸ್ಥೆಯ ದುರ್ಗತಿಗೆ ಸಂಕೇತದಂತಿ ಸನದಿ ಬೇಗ ಗುಣಮುಖರಾಗಲಿ; ನಾಡು-ನುಡಿ ಬಗೆಗಿನ ಕಳಕಳಿ-ಕಾಳಜಿಗೆ ಸ್ಫೂರ್ತಿ-ಪ್ರೇರಣೆಯಾ ಎಂಬುದೇ 'ಪತ್ರಿಕೆ'ಯ ಹಾರೈಕೆ!

■ ನ

ನಾಗಮಂಗಲ: ಜೆಡಿಎಸ್ ಟಿಕೆಟ್‌ಗೆ ಮಾಜಿ 'ಕೈ'ಗಳ ಕಸರತ್ತು!



2018ರ ವಿಧಾನಸಭೆ ಚುನಾವಣೆಗಿನ್ನೂ ಒಂದೂವರೆ ... ಬಾಕಿಯಿದೆ. ಆದರೆ ನಾಗಮಂಗಲ ಕ್ಷೇತ್ರದ ...ಸ್-ಜೆಡಿಎಸ್ ಟಿಕೆಟ್‌ಗಾಗಿ ಆಗಲೇ ಮಾಜಿ ...ರಿಬ್ಬರು ಅಖಾಡಕ್ಕಿಳಿದು ತೊಡೆತಟ್ಟುತ್ತಿದ್ದಾರೆ. ...ಶ್‌ಗೌಡ ಹಾಗೂ ಶಿವರಾಮೇಗೌಡ ಟಿಕೆಟ್‌ಗಾಗಿ ... ಫೈಟ್ ಮಾಡುತ್ತಿರೋದು ಜನರಿಗೆ ಭರ್ತಿ ...ರಂಜನೆ ನೀಡುತ್ತಿದೆ. ಸದ್ಯ ಕಾಂಗ್ರೆಸ್‌ನಲ್ಲಿರುವ ...ಬ್ಬರೂ ಇತ್ತೀಚಿಗೆ ಪ್ರತ್ಯೇಕವಾಗಿ ಸಭೆ ನಡೆಸಿ ಕಾಂಗ್ರೆಸ್ ...ಟ್ ನನಗೇ ಕೊಡಬೇಕು ಇಲ್ಲದಿದ್ದರೆ ಬೇರೆ ಪಕ್ಷಕ್ಕೆ ...ಗಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ರವಾನಿಸಿದ್ದರು.

...ಇವರಿಬ್ಬರ ಈ ಆತಂಕಕ್ಕೆ ಕಾರಣವುಂಟು. ಜೆಡಿಎಸ್ ...ಯ ಆಂತರಿಕ ಸುನಾಮಿಯು ಹಾಲಿ ಶಾಸಕ ...ವಣ್ಣನ ಎತ್ತಿತಂದು ಕಾಂಗ್ರೆಸ್ ಬಾಗಿಲ ಬಳಿ ಎಸೆದಿದೆ. ...ದಾಗ್ಗೆ ಸಿದ್ದರಾಮಯ್ಯನವರ ಜೊತೆ ಕಾಣಿಸಿಕೊಳ್ಳುತ್ತಿರುವ ...ವಣ್ಣನೇ ಮುಂಬರುವ ಎಲೆಕ್ಷನ್‌ನಲ್ಲಿ ನಾಗಮಂಗಲದ ...ಸ್ ಟಿಕೆಟ್ ಎತ್ತಿಕೊಳ್ಳುತ್ತಾರೆ ಅನ್ನೋ ಮಾತುಗಳು ...ರುತ್ತಿರೋದರಿಂದ ಇವರಿಬ್ಬರು ಅಬ್ಬರಿಸಲು ಶುರು ...ದ್ದಾರೆ. ಮಾಜಿ ಶಾಸಕರಿಬ್ಬರ ಕಣ್ಣು ಸದ್ಯಕ್ಕೆ ಜೆಡಿಎಸ್ ...ತ್ತ ನೆಟ್ಟಿವೆ ಎಂಬ ಮಾತುಗಳೂ ಕೇಳಿಬಂದಿವೆ. ...ವರಾಯಸ್ವಾಮಿ ವಿರುದ್ಧ ಗರಂ ಆಗಿರುವ ದೇವೇಗೌಡ ...ೂ ಕುಮಾರಸ್ವಾಮಿ ಕೃಪೆಗಾಗಿ ಕಳ್ಳ-ಮಳ್ಳರಿಬ್ಬರೂ ...ಗಿಳಿದಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿದ್ದರೂ ಜೆಡಿಎಸ್ ...ಗಾಗಿ ಹಪಾಹಪಿಸುತ್ತಿರುವ ಇವರ ಧಾವಂತ ಕಂಡು ...ಮಂಗಲದ ಜನ ಹೇಸಿಗೆ ಪಟ್ಟುಕೊಳ್ಳುತ್ತಿದ್ದಾರೆ.

...ಎಸ್ ಟಿಕೆಟ್‌ನತ್ತ ಮಾಜಿಗಳ ಕಣ್ಣು

...ಕ್ಕಲಿಗರ ಪಾಳೇಪಟ್ಟಿನ ನಾಗಮಂಗಲ ವಿಧಾನಸಭಾ ...ದ ಮೇಲೆ ದೇವೇಗೌಡ ಹಾಗೂ ಕುಮಾರಸ್ವಾಮಿಯ ...ವಿದೆ. ದೊಡ್ಡಗೌಡರ ಮೇಲಿರುವ ಅಭಿಮಾನದಿಂದಲೇ ...ಲೂಕಿನಲ್ಲಿ ಜೆಡಿಎಸ್ ಪಕ್ಷಕ್ಕೆ ಸಾಲಿಡ್ಡಾದ ಮತ ಬ್ಯಾಂಕ್ ... ಈ ಮತ ಬ್ಯಾಂಕ್ ಕೈಹಿಡಿದಿದ್ದರಿಂದಲೇ ...ವರಾಯಸ್ವಾಮಿ ಜಿ.ಪಂ. ಸದಸ್ಯನಾಗಿ, ಉಪಾಧ್ಯಕ್ಷನಾಗಿ, ...ರು ಬಾರಿ ಶಾಸಕನಾಗಿ, ಎರಡೆರಡು ಬಾರಿ ...ತ್ರಿಯಾಗಿ, ಲೋಕಸಭಾ ಸದಸ್ಯನಾಗಿ ಮೆರೆದು ...ರ್‌ದಸ್ತಾಗಿ ಚಿಗುರೊಡೆದದ್ದು. ಆದರೆ ಲಾಭಕೋರ ...ುರಾದ ಜಮೀರ್, ಬಾಲಕೃಷ್ಣರ ಜೊತೆ ಸೇರಿ ...ಮಗನಿಗೆ ಜಾಪಾಳ ಮಾತ್ರೆ ಕೊಟ್ಟ ಚೆಲುವಣ್ಣ ...ೊಳಗೆ ಕಾಂಗ್ರೆಸ್ ಜೊತೆ ಕಳ್ಳ ವ್ಯವಹಾರ ಶುರು ...ೊಂಡ. ಇವರೆಲ್ಲಾ ಕಾಂಗ್ರೆಸ್ ಜೊತೆ ಕದ್ದು-ಮುಚ್ಚಿ ...ಾರ ಮಾರುತ್ತಿರುವುದನ್ನು ತಿಳಿದ ದೊಡ್ಡಗೌಡರು ...ಮಂಡಲರಾಗಿದ್ದರು. ಆದರೆ ಸರಿಯಾದ ಸಮಯಕ್ಕಾಗಿ ...ದ್ದರು. ಕಳೆದ ವಿಧಾನಪರಿಷತ್ ಚುನಾವಣೆ ಆ ಅವಕಾಶ ...ಒದಗಿಬರುವಂತೆ ಮಾಡಿತ್ತು, ಮಂಡ್ಯದಿಂದ ತನ್ನ ಶಿಷ್ಯ ... ಜಗದೀಶನಿಗೆ ಟಿಕೆಟ್ ಕೊಡಿ ಎಂದ ಚೆಲುವನಿಗೆ ... ಎಂದ ದೇವೇಗೌಡರು ಚಲುವಣ್ಣನಿಗೆ ಖೆಡ್ಡಾ ...ತೋಡಿಲೆಂದೇ ನಾಗಮಂಗಲದ ರೊಕ್ಕಸ್ಥ ಕುಳ ಅಪ್ಪಾಜಿ ...ಗೆ ಟಿಕೆಟ್ ಕರುಣಿಸಿದ್ದರು. ಆಗ ಚಲುವರಾಯಸ್ವಾಮಿ ...ಜಿ ಗೌಡನ ವಿರುದ್ಧ ಬಹಿರಂಗ ಪ್ರಚಾರಕ್ಕೆ ನಿಂತರೂ ...ಜಿಗೌಡ ಹರಿಸಿದ ಹಣದ ಹೊಳೆಯ ಮುಂದೆ ...ಸ್‌ನ ಎಲ್.ಆರ್.ಶಿವರಾಮೇಗೌಡ ಕೊಚ್ಚಿಹೋದ. ...ಜಿಗೌಡನ ಗೆಲುವು ಚಲುವರಾಯಸ್ವಾಮಿಗೆ ಭಾರೀ ...ಭಂಗ ಮಾಡಿತು. ಇದಾದನಂತರ ರಾಜ್ಯಸಭೆ ...ಣೆಯಲ್ಲಿ ಚಲುವರಾಯಸ್ವಾಮಿ ಅಪ್ಪ-ಮಗನ ಮೇಲೆ ...ಾಗೇ ಸೇಡು ತೀರಿಸಿಕೊಂಡ. ಎಂಟು ಶಾಸಕರ ...ತ ಕಾಂಗ್ರೆಸ್‌ಗೆ ಬುಕ್ಕಾದ ಚಲುವಣ್ಣ, ಕಾಂಗ್ರೆಸ್ ...ನ ಬಿ. ರಾಮಮೂರ್ತಿಯ ಕೋಟಿಕೋಟಿ ಹಣಕ್ಕೆ, ...ಗೊಂಡು ಜೆಡಿಎಸ್‌ನ ಬಿ.ಎಂ.ಫಾರೂಕ್ ಸೋಲಿಗೆ ...ಾದ. ಇದರಿಂದ ಕುದ್ಧರಾದ ಗೌಡರು ಈ 8 ...ಯನ್ನು ಅಮಾನತು ಮಾಡಿದ್ದಾರೆ. ಹಾಗಾಗಿಯೇ ಚಲುವರಾಯಸ್ವಾಮಿಯ ಕಣ್ಣು ಸದ್ಯ ಕಾಂಗ್ರೆಸ್‌ನತ್ತ ನೆಟ್ಟಿದೆ.

ಹೇಗಾದರೂ ಸರಿಯೇ ಮುಂದಿನ ಚುನಾವಣೆಯಲ್ಲಿ ಚಲುವನನ್ನು ಸೋಲಿಸಿ ಮನೆಗೆ ಕಳುಹಿಸಬೇಕೆಂದು ಹಾತೊರೆಯುತ್ತಿರುವ ಅಪ್ಪ-ಮಗನಿಗೆ ನಾಗಮಂಗಲದಲ್ಲಿ ಚಲುವಣ್ಣನ ವಿರುದ್ಧ ಸಮಾ ದುಡ್ಡು ಸುರಿಯುವ ರೊಕ್ಕಸ್ಥ ಮಿಕ ಬೇಕಾಗಿದೆ. ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಎಲ್.ಆರ್.ಶಿವರಾಮೇಗೌಡನಿಗೆ ಕಾಂಗ್ರೆಸ್ ಟಿಕೆಟ್ ಸಿಗುವುದು 100% ಡೌಟು. ಹಾಗಾಗಿ ಆತ ಜೆಡಿಎಸ್‌ಗೆ ಟವೆಲ್ ಹಾಸಿದ್ದಾನೆ. ಹತ್ತಾರು ಶಿಕ್ಷಣ ಸಂಸ್ಥೆಗಳ ಮೂಲಕ ನೂರಾರು ಕೋಟಿ ಕ್ಯಾಪಿಟೇಷನ್ ರೊಕ್ಕ ಬಾಚುತ್ತಿರುವ ಶಿವರಾಮೇಗೌಡ ತನ್ನಲ್ಲಿರುವ ದುಡ್ಡನ್ನು ತೋರಿಸಿಯೇ ಅಪ್ಪ-ಮಗನ ಮೇಲೆ ಬ್ರಹ್ಮಾಸ್ತ್ರ ಬಿಡಲು ಹೊಂಚು ಹಾಕುತ್ತಿದ್ದಾನೆ.

ಅದರ ಭಾಗವಾಗಿಯೇ ಕಳೆದ ಭಾನುವಾರ ಕುಮಾರಸ್ವಾಮಿ ನಾಗಮಂಗಲದ ಹೆತ್ತಗೋನಹಳ್ಳಿ ಗ್ರಾಮದ ಪಟ್ಟಲದಮ್ಮ ದೇವಾಲಯದ ಶಿಲಾನ್ಯಾಸ ಕಾರ್ಯಕ್ರಮಕ್ಕೆ ಬರುತ್ತಾರೆಂದು ತಿಳಿದ ಹರಕು ಬಾಯಿ ಶಿವರಾಮೇಗೌಡ ತನ್ನ ನೂರಾರು ಬೆಂಬಲಿಗರ ಜೊತೆ ನೆಲ್ಲಿಗೆರೆ ಕ್ರಾಸ್ ಬಳಿ ಕಾದು ನಿಂತಿದ್ದ. ಕುಮಾರಸ್ವಾಮಿ ಬಂದೊಡನೆ ಹಾರ-ತುರಾಯಿ ಹಾಕಿ ಭರ್ಜರಿ ಸ್ವಾಗತ ಕೋರಿದ. ಇದನ್ನ ತಿಳಿದ ಸುರೇಶ್‌ಗೌಡ ನೇರವಾಗಿ ಬರದೆ ತನ್ನ ನೂರಾರು ಅಭಿಮಾನಿಗಳನ್ನು ಕಳುಹಿಸಿ ಕುಮಾರಸ್ವಾಮಿಗೆ ಅದ್ದೂರಿ ಸ್ವಾಗತ ಕೋರುವಂತೆ ನೋಡಿಕೊಂಡ. ನಂತರ ಕುಮಾರಸ್ವಾಮಿ ಜೊತೆ ಕಾರಿನಲ್ಲೇ ಬಂದು ವೇದಿಕೆ ಏರಿದ ಶಿವರಾಮೇಗೌಡ 'ರಾಜ್ಯದ ನೆಲ, ಜಲ, ಭಾಷೆ ಸೇರಿದಂತೆ ರಾಜ್ಯದ ಅಭಿವೃದ್ಧಿಗೆ ರಾಷ್ಟ್ರೀಯ ಪಕ್ಷಗಳಿಗಿಂತ ಪ್ರಾದೇಶಿಕ ಪಕ್ಷವೇ ಅಧಿಕಾರಕ್ಕೆ ಬರಬೇಕು; ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ, ತಮಿಳುನಾಡಿನಲ್ಲಿ ಜಯಲಲಿತಾ ನೇತೃತ್ವದಲ್ಲಿ ಪ್ರಾದೇಶಿಕ ಪಕ್ಷಗಳಿರುವಂತೆ ರಾಜ್ಯದಲ್ಲೂ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತಂದು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಎಲ್ಲರೂ ಕೈಜೋಡಿಸಬೇಕು' ಅಂತೆಲ್ಲ ಹೊಗಳಿ ಅಟ್ಟಕ್ಕೇರಿಸಿದ್ದ. ಅವನ ಭಾಷಣದುದ್ದಕ್ಕೂ ಟಿಕೆಟ್ ಜೊಲ್ಲು ತೊಟ್ಟಿಕ್ಕುತ್ತಲೇ ಇತ್ತು. ಇತ್ತ ಸುರೇಶ್‌ಗೌಡ ನೇರವಾಗಿ ಕುಮಾರಸ್ವಾಮಿಯನ್ನ ಭೇಟಿಯಾಗದೆ ಬೆಂಬಲಿಗರನ್ನು ಬಿಟ್ಟು ಜೆಡಿಎಸ್ ಟಿಕೆಟ್‌ಗೆ ದುಂಬಾಲು ಬಿದ್ದಿದ್ದಾನೆ. ಸುಳ್ಳ ಸುರೇಶ್‌ಗೌಡ- ಮಳ್ಳ ಶಿವರಾಮೇಗೌಡ ಇಬ್ಬರೂ ಕುಮಾರಸ್ವಾಮಿ ಸ್ವಾಗತಕ್ಕೆ ನಿಂತಿದ್ದನ್ನು ನೋಡಿದರೆ ಇಬ್ಬರೂ ಜೆಡಿಎಸ್‌ಗೆ ಹಾರಿ ಟಿಕೆಟ್ ಪಡೆಯಲು ಗುದ್ದಾಡುತ್ತಿದ್ದಾರೆ ಎಂಬ ಸಂದೇಶ ಕ್ಷೇತ್ರದ ಜನರಿಗೆ ಸಿಕ್ಕಿದೆ.

ಸದ್ಯ ಕಾಂಗ್ರೆಸ್‌ನಲ್ಲಿರುವ ಈ ಮಾಜಿ ಶಾಸಕದ್ವಯರು ಜೆಡಿಎಸ್ ಟಿಕೆಟ್ ಸಿಕ್ಕರೆ ಚಲುವಣ್ಣನ ವಿರುದ್ಧ ಗೆಲ್ಲುವುದು ಸಲೀಸು ಎಂಬ ಹುಕಿಗೆ ಬಿದ್ದಂತಿದೆ. ಚಾಣಾಕ್ಷ ತಂತ್ರಗಾರಿಕೆಯ ಗೌಡರು ಈ ಬೆದರುಬೊಂಬೆಗಳಿಗೆ ಮಣೆ ಹಾಕುತ್ತಾರಾ ಅಥವಾ ಇಬ್ಬರನ್ನೂ ಕೈಬಿಟ್ಟು ಹೊಸ ಮುಖವನ್ನು ಅಖಾಡಕ್ಕಿಳಿಸುತ್ತಾರಾ ಎನ್ನುವುದು ನಿಗೂಢವಾಗಿದೆ.

ಸ್ವಿಚ್ಡ್ ಆಫ್ ಸುರೇಶ!

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ನ ಚಲುವರಾಯಸ್ವಾಮಿ ಎದುರು ಸೋತ ನಂತರ ಸುರೇಶ್‌ಗೌಡ ಕ್ಷೇತ್ರದಿಂದಲೇ ಕಣ್ಮರೆಯಾಗಿದ್ದ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಸುರೇಶ್‌ಗೌಡ ಸ್ವತಃ ಕಾಂಗ್ರೆಸ್ ಕಾರ್ಯಕರ್ತರ ಕೈಗೂ ಸಿಗದೆ ಓಡಾಡಿದ. ಕಾರ್ಯಕರ್ತರ ಪಾಲಿಗೆ ಆತನ ಫೋನೂ ಸ್ವಿಚ್ಡ್‌ಆಫ್! ಆದ್ದರಿಂದಲೇ ಜನ ಇವನನ್ನು ಸ್ವಿಚ್ಡ್ ಆಫ್ ಸುರೇಶ್‌ಗೌಡ ಅಂತಲೇ ಮೂದಲಿಸಲು ಶುರು ಮಾಡಿದ್ದಾರೆ. ಆಗೊಮ್ಮೆ-ಈಗೊಮ್ಮೆ ನಾಗಮಂಗಲಕ್ಕೆ ಬಂದರೆ ಯಾರಿಗೂ ಸಿಗದೆ ವಾಪಾಸ್ ಬೆಂಗಳೂರು ಸೇರಿಕೊಳ್ಳುತ್ತಿದ್ದ ಸುರೇಶ್‌ಗೌಡನ ಕಂಡರೆ ಕಾಂಗ್ರೆಸ್ ಕಾರ್ಯಕರ್ತರಿಗೂ ವಾಕರಿಕೆ. ಬೆರಳೆಣಿಕೆಯ ಬೆಂಬಲಿಗರನ್ನು ಬಿಟ್ಟರೆ ಆತನ ಜೊತೆ ಬೇರೆ ಯಾರೂ ಇಲ್ಲ.

ಇವನ ತಾಕತ್ತು ಎಂತದ್ದೆಂದರೆ, ಸ್ವತಃ ಕಾಂಗ್ರೆಸ್ ಪಾರ್ಟಿಯೇ ರಾಜ್ಯದ ಚುಕ್ಕಾಣಿ ಹಿಡಿದಿದ್ದರೂ ಕಳೆದ ಜಿ.ಪಂ. ಚುನಾವಣೆಯಲ್ಲಿ ಒಂದೇಒಂದು ಸೀಟು ಗೆಲ್ಲಿಸಿಕೊಳ್ಳಲಾಗಲಿಲ್ಲ. ಇನ್ನು ತಾ.ಪಂ. ಮತ್ತು ಗ್ರಾ.ಪಂ. ಚುನಾವಣೆಯಲ್ಲೂ ಈತ ಕಾರ್ಯಕರ್ತರಿಗೆ ಆರ್ಥಿಕವಾಗಿ ಸಹಾಯ ಮಾಡಲಿಲ್ಲ. ಈತನ ವರ್ತನೆಯಿಂದ ಬೇಸತ್ತ ಕೆಲ ಕಾಂಗ್ರೆಸ್ ಕಾರ್ಯಕರ್ತರು ಅದಾಗಲೇ ಚಲುವರಾಯಸ್ವಾಮಿಯ ಜೊತೆ ಗುರುತಿಸಿಕೊಳ್ಳುತ್ತಿದ್ದಾರೆ. ಯಾವುದೇ ಚುನಾವಣೆಯಲ್ಲಿ ಕಾರ್ಯಕರ್ತರ ಬೆಂಬಲಕ್ಕೆ ನಿಲ್ಲದ ಸುರೇಶ್‌ಗೌಡನ ವಿರುದ್ಧ ಕಾಂಗ್ರೆಸ್ಸಿಗರ ಸಿಟ್ಟು ಎಷ್ಟಿದೆಯೆಂದರೆ ಮುಂದಿನ ಚುನಾವಣೆಯಲ್ಲಿ ಈತನಿಗೆ ಟಿಕೆಟ್ ಕೊಟ್ಟರೆ ಕಾಂಗ್ರೆಸ್ ಪಕ್ಷ ಸರ್ವನಾಶವಾಗಲಿದೆ ಅಂತ ಬಹಿರಂಗವಾಗಿ ಮಾತಾಡಿಕೊಳ್ಳುತ್ತಿದ್ದಾರೆ.


ಚಲುವರಾಯಸ್ವಾಮಿ ಕಾಂಗ್ರೆಸ್‌ನತ್ತ ಕಣ್ಣು ಹಾಕುತ್ತಿದ್ದಂತೆಯೇ ಸುರೇಶ್‌ಗೌಡ ಆತಂಕಕ್ಕೆ ಬಿದ್ದಿದ್ದಾನೆ. ಚಲುವರಾಯಸ್ವಾಮಿ ಕಾಂಗ್ರೆಸ್‌ಗೆ ಬಂದರೆ ತನ್ನ ರಾಜಕೀಯ ಖತಂ ಎಂಬುದನ್ನು ಚೆನ್ನಾಗಿಯೇ ಮನದಟ್ಟು ಮಾಡಿಕೊಂಡಿರುವ ಈತ ಈಗೊಂದು 15 ದಿನಗಳ ಹಿಂದೆ ನಾಗಮಂಗಲದಲ್ಲಿ ತನ್ನ ಬೆಂಬಲಿಗರ ಸಭೆ ನಡೆಸಿ 'ನನಗೇ ಕಾಂಗ್ರೆಸ್ ಟಿಕೆಟ್ ಕೊಡಬೇಕು. ಇಲ್ಲದಿದ್ದರೆ ನಾನು ಬೇರೆ ದಾರಿ ಹಿಡಿಯಬೇಕಾಗುತ್ತದೆ' ಎಂದು ಗುಟುರು ಹಾಕಿದ್ದ. ಸುರೇಶ್‌ಗೌಡ ಯಾವುದಕ್ಕೂ ಇರಲಿ ಎಂದು ಜೆಡಿಎಸ್‌ನತ್ತ ಕೈ ಚಾಚುತ್ತಿದ್ದಾನೆ.


ಮಳ್ಳ ಶಿವರಾಮೇಗೌಡ


ಕೊಟ್ಟ ಕುದುರೆ ಏರದವನು ವೀರನೂ ಅಲ್ಲ, ಶೂರನೂ ಅಲ್ಲ ಎಂಬ ಮಾತಿನಂತೆ ಸತತ ನಾಲ್ಕು ಚುನಾವಣೆಗಳಲ್ಲಿ ಭೀಕರವಾಗಿ ಸೋತ ಶಿವರಾಮೇಗೌಡನಿಗೆ ಯಥಾಪ್ರಕಾರ ಮತ್ತೆ ಎಂಎಲ್‌ಎ ಆಗುವ ಚಪಲ ಕಾಣಿಸಿಕೊಂಡಿದೆ. ಕಳೆದ 18 ವರ್ಷಗಳಿಂದ ಅಧಿಕಾರವಂಚಿತನಾಗಿದ್ದೇನೆ ದಯವಿಟ್ಟು ನನಗೊಂದು ಅವಕಾಶ ಕೊಡಿ ಎಂಬುದೇ ಶಿವರಾಮೇಗೌಡನ ಒನ್‌ಲೈನ್ ಅಜೆಂಡಾ. ಕಾಣ್‌ಕಾರ್ಡ್ ಎಂಬ ಕಾಸು ಗೆಬರುವ ಶಿಕ್ಷಣ ಸಂಸ್ಥೆಯ ಮಾಲೀಕ ಶಿವರಾಮೇಗೌಡನಲ್ಲಿ ಕೋಟ್ಯಾಂತರ ದುಡ್ಡಿದೆ. ಇದನ್ನ ತೋರಿಸಿಯೇ ಅಪ್ಪಾಜಿಗೌಡನನ್ನು ಎದುರಿಸಲು ನಾನೇ ಸಮರ್ಥ ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಂಬಿಸಿ ವಿಧಾನಪರಿಷತ್ ಟಿಕೆಟ್ ತಂದಿದ್ದ. ಆದರೆ ಅಪ್ಪಾಜಿಗೌಡನ ಹಣದ ಹೊಳೆಯಲ್ಲಿ ಈಜಲಾಗದೆ ಮುಳುಗೇಬಿಟ್ಟ. ಹಾಗೆ ನೋಡಿದರೆ ಅಪ್ಪಾಜಿಗೌಡನಿಗಿಂತ ಶಿವರಾಮೇಗೌಡನೇ ಹೆಚ್ಚು ರೊಕ್ಕಸ್ಥ. ಆದರೆ ಸರಿಯಾಗಿ ದುಡ್ಡು ಬಿಚ್ಚದೆ ಹೀನಾಯವಾಗಿ ಸೋತುಹೋದ. ಈ ಕಾರಣಕ್ಕಾಗಿ ಕಾಂಗ್ರೆಸ್ ಕಾರ್ಯಕರ್ತರು ಶಿವರಾಮೇಗೌಡನಿಗೆ ಮಳ್ಳ ಎಂದು ನಾಮಕರಣ ಮಾಡಿದ್ದಾರೆ. ತನ್ನ ಹರಕು ಬಾಯಿಯನ್ನು ಎಗ್ಗಿಲ್ಲದೆ ಹರಿಯಬಿಡುವ ಶಿವರಾಮೇಗೌಡ ಈಗ ಮುಂದಿನ ವಿಧಾನಸಭೆ ಚುನಾವಣೆಯಲ್ಲೂ ಸ್ಪರ್ಧಿಸುತ್ತೇನೆ ನನಗೆ ಕಾಂಗ್ರೆಸ್ ಟಿಕೆಟ್ ಕೊಡಬೇಕು ಎಂದು ಕೂಗಾಡುತ್ತಿದ್ದಾನೆ. ಸುರೇಶ್‌ಗೌಡ ಸಭೆ ನಡೆಸಿದ ವಾರದಲ್ಲೇ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ತನ್ನ ಬೆಂಬಲಿಗರ ಸಭೆ ನಡೆಸಿದ ಶಿವರಾಮೇಗೌಡ 'ಕಾಂಗ್ರೆಸ್ ಟಿಕೆಟ್ ನನಗೆ ಕೊಡಿ, ನಾನು ಕಾಂಗ್ರೆಸ್ ಕಾರ್ಯಕರ್ತರ ಕಣ್ಣಾಗುತ್ತೇನೆ' ಎಂದಿದ್ದ. ಹಾಗೆ ಹೇಳಿ ವಾರವೂ ಕಳೆದಿಲ್ಲ, ಆಗಲೇ ಜೆಡಿಎಸ್ ನಾಯಕ ಕುಮಾರಸ್ವಾಮಿಯೇ ಮುಂದಿನ ಮುಖ್ಯಮಂತ್ರಿಯಾಗಬೇಕು ಅಂತ ಬಡಬಡಿಸುವ ಮೂಲಕ ತನ್ನದೆಂತಹ ಹರಕುಬಾಯಿ ಅನ್ನೋದನ್ನು ಅವನೇ ಸಾಬೀತುಮಾಡಿದ್ದಾನೆ.

ಅದೇನೇ ಇರಲಿ, ಚೆಲುವಣ್ಣ ಕಾಂಗ್ರೆಸ್‌ಗೆ ಬಂದು ಈ ಸುಳ್ಳ-ಮಳ್ಳ ಜೋಡಿ ನಿರಾಶ್ರಿತ ಶಿಬಿರ ಸೇರಿಕೊಂಡರೆ ಸಾಕು ಅಂತ ಕೈ ಕಾರ್ಯಕರ್ತರು ತುದಿಗಾಲ ಮೇಲೆ ನಿಂತು ಕಾಯುತ್ತಿದ್ದಾರೆ. ಅದಕ್ಕೆ ತಕ್ಕಂತೆ ಚಲುವರಾಯಸ್ವಾಮಿ ವಾರದಲ್ಲಿ 3-4 ದಿನ ಕ್ಷೇತ್ರದಲ್ಲಿದ್ದು ಗರಗರನೆ ಸುತ್ತುತ್ತಿದ್ದಾರೆ. ನಾಗಮಂಗಲದಲ್ಲಿ ಅಪ್ಪ-ಮಗನ ಪ್ರಭಾವ ಕಡಿಮೆ ಮಾಡಲು ನಿಂತಿರುವ ಚಲುವಣ್ಣ ಈ ತಂತ್ರಗಾರಿಕೆಯ ಭಾಗವಾಗಿ ಮದುವೆ, ಮುಂಜಿ, ತಿಥಿ, ದೇವಸ್ಥಾನ ಎಂದೆಲ್ಲಾ ಜನರನ್ನು ಎಡತಾಕುತ್ತಿದ್ದಾರೆ. ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್‌ಗೆ ಕೈಕೊಟ್ಟಿದ್ದಕ್ಕೆ ಸಿಕ್ಕ ಕಾಂಗ್ರೆಸ್ ಕಾಸನ್ನೆಲ್ಲ ಚೆಲ್ಲಾಡಿ ನಾಗಮಂಗಲದ ಜನರ ವಿಶ್ವಾಸ ಗಟ್ಟಿಮಾಡಿಕೊಳ್ಳಲು ಚೆಲುವಣ್ಣ ಹೆಣಗಾಡುತ್ತಿದ್ದರೆ, ಸುರೇಶ್‌ಗೌಡ-ಶಿವರಾಮೇಗೌಡ ಒಮ್ಮೆ ಅತ್ತ ಮಗದೊಮ್ಮೆ ಇತ್ತ ಜೀಕು ಜೋಕಾಲಿ ತೂಗುತ್ತ ಜನರ ಪಾಲಿಗೆ ಜೋಕರ್‌ಗಳಾಗಿದ್ದಾರೆ.


■ ವರದಿಗಾರ


ಚಲುವರಾಯಸ್ವಾಮಿ


ಶಿವರಾಮೇಗೌಡ


ಸುರೇಶ್ ಗೌಡ

ದುಬಾರಿ ಮದುವೆ: ರೆಡ್ಡಿ ಮೈಮೇಲೆ ಶ್ರೀ ಕೃಷ್ಣದೇವರಾಯ



'ಮೇರಾ ಭಾರತ್ ಮಹಾನ್....!'

ಒಂದು ಕಡೆ ಚಿಲ್ಲರೆ ಕಾಸಿಗಾಗಿ ಮನೆಮಠ ಮರೆತವರಂತೆ ದಿನಗಟ್ಟಲೆ ಕ್ಯೂ ನಿಂತ ಜನ, ಮತ್ತೊಂದೆಡೆ ರೆಡ್ಡಿ ಮಗಳ ಮದುವೆ ನೆಪದಲ್ಲಿ ಸಿಲಿಕಾನ್ ಸಿಟಿಯ ಅರಮನೆ ಮೈದಾನದಲ್ಲಿ ಮಾಧ್ಯಮಗಳ ಪೌರೋಹಿತ್ಯದಲ್ಲಿ ನಡೆಯುತ್ತಿರುವ ಪ್ರಜಾಪ್ರಭುತ್ವದ ರಣಬಲಿ; ಇಂತಹ ವೈಪರೀತ್ಯ ಕಂಡ ನಂತರ ಮೇಲಿನಂತೆ ಉದ್ಗರಿಸದೆ ನಮ್ಮಂತ ಕಾಮನ್‌ಮ್ಯಾನ್‌ಗಳು ಇನ್ನೇನು ಮಾಡಲು ಸಾಧ್ಯ!

ಒಂದಲ್ಲ, ಎರಡಲ್ಲ ಬರೋಬ್ಬರಿ ಐದು ನೂರು ಕೋಟಿ. ಅದೂ ಭಕ್ತ ಗಣದ ವೀರಾಗ್ರೇಸರ ಮೋದಿ ಮಹಾತ್ಮ ಬ್ಲ್ಯಾಕ್ ಮನಿಯ ಮೇಲೆ ಸರ್ಜಿಕಲ್ ದಾಳಿ (!) ನಡೆಸಿ, ಸಾಮಾನ್ಯ ಜನರ ಬೆವರಿನ ದುಡಿಮೆಯನ್ನೇ 'ಬ್ಲ್ಯಾಕ್'ಮನಿ (ರದ್ದಾದ ಹಣ) ಮಾಡಿಟ್ಟಿರುವ ಇಂತಹ ಸಂದಿಗ್ಧತೆಯಲ್ಲಿ ಆಜಮಾಸು 40 ತಿಂಗಳು ಜೈಲಲ್ಲಿ ಕೂತು ಬಂದ ವ್ಯಕ್ತಿಯೊಬ್ಬ ಆಡಂಬರಕ್ಕೆ ಕೋಟ್ಯಂತರ ಹಣ ಚೆಲ್ಲಾಡುತ್ತಾನೆಂದರೆ ಆ ಸರ್ಜಿಕಲ್ ದಾಳಿಯ ಪಾವಿತ್ರ್ಯತೆ ಎಂಥದ್ದು; ಪರಿಣಾಮ ಯಾರ ಮೇಲೆ?

ಜನಾರ್ದನ್ ರೆಡ್ಡಿಯ ಅತಿರೇಕಗಳು ಇಂದು ನಿನ್ನೆಯವಲ್ಲ, ಆತ ಮಂತ್ರಿ ಆಗಿದ್ದಾಗಿನಿಂದ ಮತ್ತು ಅದಕ್ಕೂ ಮುಂಚಿನಿಂದ ಗಣಿ ರೆಡ್ಡಿಗಳ ಅಬ್ಬರ, ಆರ್ಭಟ, ದುರುಳತೆಗೆ ಈ ನಾಡು ಕನಲಿಹೋಗಿತ್ತು, ಕರ್ನಾಟಕವೆಂಬ ಏಕೀಕರಣ ನೆಲದ ಗಡಿಗೇ ಮುಕ್ಕರಿಸಿ ಗಣಿಧೂಳು ಎಬ್ಬಿಸಿದ ಭೂಪರಿವರು. ಅದ್ಯಾವನೋ ತಲೆಕೆಟ್ಟ ಜ್ಯೋತಿಷಿ 'ತಾವು ಹೋದ ಜನ್ಮದಲ್ಲಿ ವಿಜಯನಗರ ಸಾಮ್ರಾಜ್ಯಾಧೀಶರಾಗಿದ್ದಿರಿ, ಖಾವಂದರೆ' ಅಂತ ಬಡಬಡಿಸಿದ್ದನ್ನೇ ನಿಜ ಎಂದುಕೊಂಡು ಈ ಜನಾರ್ದನ ರೆಡ್ಡಿ ಪ್ರದರ್ಶನಕ್ಕಿಟ್ಟ 'ಕಾಮಿಡಿ' ಸೀನುಗಳು ಒಂದೇ ಎರಡೇ. ಹದಿನಾರನೇ ಶತಮಾನದ ಶ್ರೀ ಕೃಷ್ಣದೇವರಾಯ ತಿರುಪತಿ ತಿಮ್ಮಪ್ಪನ ಪರಮಭಕ್ತನಾಗಿದ್ದ, ತನ್ನ ಮಡದಿಯರಾದ ತಿರುಮಲ ದೇವಿ ಮತ್ತು ಚಿನ್ನಮ್ಮ ದೇವಿಯರ ಜೊತೆಗೂಡಿ ತಿಮ್ಮಪ್ಪನಿಗೆ ಚಿನ್ನದ ಕಿರೀಟ ಅರ್ಪಿಸಿದ್ದ ಎನ್ನುವ ಕಾರಣಕ್ಕೆ ಬಂಗಾರದ ರೇಟು ಗಗನಕ್ಕೇರಿದ ಈ ಯುಗದಲ್ಲೂ ಬರೋಬ್ಬರಿ 45 ಕೋಟಿ ರುಪಾಯಿಯ ವಜ್ರಖಚಿತ ಚಿನ್ನದ ಕಿರೀಟವನ್ನು ತಿಮ್ಮಪ್ಪನ ಪಾದಾರವಿಂದಕ್ಕೆ ಅರ್ಪಿಸಿ ತನ್ನ ಮುಖದ ಮೇಲೆ ಕೃಷ್ಣದೇವರಾಯನ ಕುರುಹುಗಳಿಗಾಗಿ ತಾನೇ ಹುಡುಕಾಡಿದ್ದ. ಅವತ್ತು ಅವನ ಭಂಡತನಕ್ಕೆ ಕ್ಯಾಕರಿಸಿ ಉಗಿಯಬೇಕಿದ್ದ ಮಾಧ್ಯಮಗಳು ತಿಮ್ಮಪ್ಪನ ಭಕ್ತಖ್ಯಾತಿಯನ್ನೂ, ರೆಡ್ಡಿಯ ಸಿರಿವಂತಿಕೆಯನ್ನೂ ಎಲ್ಲಾ ಆ್ಯಂಗಲ್‌ನಿಂದ ಕವರ್ ಮಾಡಿ ಸಾರ್ಥಕವಾಗಿದ್ದವು!

ಇನ್ನು ಜನಾರ್ದನ್ ರೆಡ್ಡಿಯ ನಸೀಬು ಮಕಾಡೆ ಮಲಗಿಕೊಂಡು, ಸಿಬಿಐನವರು ಆಟಕಾಯಿಸಿಕೊಂಡಾಗ ಆತನ ಇನ್ನೊಂದು ಚೇಷ್ಟೆ ಬೆಳಕಿಗೆ ಬಂದಿತ್ತು, ಆತನಿಂದ ಮುಟ್ಟುಗೋಲು ಹಾಕಿಕೊಂಡ ಆಸ್ತಿಯಲ್ಲಿ ಐತಿಹಾಸಿಕ ಸಿಂಹಾಸನ ಹೋಲುವ ಚಿನ್ನಲೇಪಿತ ಕುರ್ಚಿಯೂ ಒಂದಿತ್ತು, ತನ್ನನ್ನು ತಾನು ಶ್ರೀ ಕೃಷ್ಣದೇವರಾಯ ಅಂತ ಆತ ಅದೆಷ್ಟು ಸೀರಿಯಸ್ಸಾಗಿ ಮನಸ್ಸಿಗೆ ತೆಗೆದುಕೊಂಡಿದ್ದಾನೆ ಅನ್ನೋದಕ್ಕೆ ಅದು ಮಗದೊಂದು ಪುರಾವೆ ಒದಗಿಸಿತ್ತು, ಇತಿಹಾಸಕಾರನ ಉಲ್ಲೇಖವೇ ಇಲ್ಲದೆ 'ರಸ್ತೆಯ ಎರಡೂ ಬದಿ ವಜ್ರ, ವೈಢೂರ್ಯ ಗುಡ್ಡೆ ಹಾಕಿಕೊಂಡು ಮಾರಾಟ ಮಾಡಲಾಗುತ್ತಿತ್ತು' ಎನ್ನಲಾಗುವ ಸುವರ್ಣಯುಗದ ಅಭಿನವ ಕೃಷ್ಣದೇವರಾಯ ಮಾಮೂಲಿ ಕುರ್ಚಿಯಲ್ಲಿ ಕೂತರೆ ಏನು ಚೆನ್ನ. ಅದಕ್ಕೇ ಆ ಸಿಂಹಾಸನ ಮಾಡಿಸಿಕೊಂಡಿದ್ದ. ಅದೆಲ್ಲ ಬಯಲಾಗಿ ರೆಡ್ಡಿ ಜೈಲು ಸೇರಿದಾಗಲೂ ನಮ್ಮ ಮಾಧ್ಯಮಗಳು 'ರೆಡ್ಡಿ ಎಷ್ಟೊತ್ತಿಗೆ ಎದ್ದ, ಆತನಿಗೆ ಕೊಟ್ಟ ಕೈದಿ ನಂಬರ್ ಎಷ್ಟು, ರೆಡ್ಡಿ ಇವತ್ತು ಬೆಳಗ್ಗೆ ಏನು ತಿಂದ, ಆತನಿಗೆ ಮಧ್ಯಾಹ್ನದ ಊಟ ಎಲ್ಲಿಂದ ಬಂತು, ಸ್ನಾನ ಎಷ್ಟೊತ್ತಿಗೆ ಮಾಡಿದ, ಬಳಸಿದ್ದು ತಣ್ಣೀರೊ, ಬಿಸಿನೀರೊ, ಫ್ರೀ ಟೈಮಲ್ಲಿ ರೆಡ್ಡಿ ಏನು ಮಾಡ್ತಾನೆ' ಅಂತ ಜೈಲ್ ಡೈರಿ ಬಿತ್ತರಿಸಿ ಕೃತಾರ್ಥವಾಗಿದ್ದವು!!


ಈಗ ಮತ್ತೆ ಮಗಳ ಮದುವೆಯಲ್ಲಿ ರೆಡ್ಡಿಯ ಪುನರ್ಜನ್ಮದ ಹುಚ್ಚಾಟ; ಮಾಧ್ಯಮಗಳ ಹೇಸಿಗೆ ಭಂಡಾಟಗಳು ರಿಪೀಟ್ ಆಗುತ್ತಿವೆ. ಇಪ್ಪತ್ತೊಂದು ವರ್ಷದ ಮಗಳು ಬ್ರಹ್ಮಣಿಯ ಮದುವೆ ಹೈದ್ರಾಬಾದ್ ಮೂಲದ ಉದ್ಯಮಿ ವಿಕ್ರಮ್ ದೇವ ರೆಡ್ಡಿಯ ಮಗ ಇಪ್ಪತ್ತೈದರ ಹರೆಯದ ರಾಜೀವ್‌ರೆಡ್ಡಿ ಜೊತೆ ನಿಕ್ಕಿಯಾದ ದಿನದಿಂದಲೇ ಜನಾರ್ದನ್ ರೆಡ್ಡಿಯ ಮೈಮೇಲೆ ಶ್ರೀ ಕೃಷ್ಣದೇವರಾಯ ಆವಾಹಿಸಿಕೊಳ್ಳಲು ಶುರು ಮಾಡಿದ್ದ. ಜನಾರ್ದನ್ ರೆಡ್ಡಿಯಂತೆ ವಿಕ್ರಮ್ ರೆಡ್ಡಿಯೂ ಭಾರೀ ರೊಕ್ಕಸ್ಥ ಕುಳ. ವಿದೇಶಗಳಲ್ಲೆಲ್ಲ ಅವನ ವಹಿವಾಟುಗಳು ಹರಡಿಕೊಂಡಿವೆ. ಮಗ ರಾಜೀವ್ ರೆಡ್ಡಿ ತಂದೆಯ ಆಫ್ರಿಕಾದ ಗಣಿ ವ್ಯವಹಾರ ನೋಡಿಕೊಳ್ಳುತ್ತಿದ್ದಾನೆ ಅನ್ನೋ ಗಾಳಿಸುದ್ದಿ ಇದೆ. ಬಹುಶಃ ಈ ಗಣಿ ಲಿಂಕೇ ನಮ್ಮ ಬಳ್ಳಾರಿ ರೆಡ್ಡಿಯನ್ನೂ ಆಂಧ್ರದ ರೆಡ್ಡಿಯನ್ನೂ ಬೆಸೆದಿರಬಹುದು. ಸಾಮಾಜಿಕ ಪರಿಕಲ್ಪನೆ ಬಗ್ಗೆ ಕಿಂಚಿತ್ತೂ ಕಾಮನ್‌ಸೆನ್ಸ್ ಇರದ ಈ ಪರಿ ಬಂಡವಾಳಶಾಹಿ ಧನಿಕರ ಮದುವೆ ಎಂದಮೇಲೆ ಅದ್ದೂರಿಯಾಗಿಯೇ ಇರುತ್ತೆ ಅನ್ನೋದು ಇಂಡಿಯಾದ ಮಟ್ಟಿಗೆ ಜನರಲ್ ನಾಲೆಡ್ಜು, ಆದರೂ ಆದಾಯ ತೆರಿಗೆ ಇಲಾಖೆಯ ರೇಡು, ಸಿಬಿಐ ಅರೆಸ್ಟು, ಜಡ್ಜ್‌ಗೆ ಲಂಚಕೊಟ್ಟು ಇಕ್ಕಿಸಿಕೊಂಡ ನ್ಯಾಯಾಂಗದ ಏಟು, ಇವುಗಳಿಂದ ಅಪ್ಪಚ್ಚಿಯಾಗಿ ಹೋಗಿರುವ ಜನಾರ್ದನ್ ರೆಡ್ಡಿ ಈ ಮಟ್ಟದ ರಿಸ್ಕಿಗೆ ಕೈಹಾಕಲಾರ, ಇದ್ದುದರಲ್ಲೇ ಸಿಂಪಲ್ 'ಅದ್ದೂರಿ' ಮದುವೆ ಮಾಡಬಹುದೆನ್ನುವ ಲೆಕ್ಕಾಚಾರ ಎಲ್ಲರದಾಗಿತ್ತು. ಪಾಪ, ಜನಾರ್ದನ್ ರೆಡ್ಡಿಯೂ ಅಂತದೇ ನಿರ್ಧಾರಕ್ಕೆ ಬಂದಿದ್ದರೂ ಬಂದಿರಬಹುದು; ಆದರೆ, ಆತನೊಳಗೆ ಆವಾಹನೆಗೈದಿದ್ದ ವಿಜಯನಗರ ಸಾಮ್ರಾಜ್ಯಾಧೀಶ ಶ್ರೀ ಕೃಷ್ಣದೇವರಾಯ ಬಿಡಬೇಕಲ್ಲ!

ಈ ರಾಜಕಾರಣದಲ್ಲಿರೋರು ತಮ್ಮ ಪೊಲಿಟಿಕಲ್ ವರ್ಚಸ್ಸನ್ನು ಎತ್ತಿ ನಿಲ್ಲಿಸಲು ಮದುವೆ ಸಮಾರಂಭಗಳನ್ನು ಬಳಸಿಕೊಳ್ಳುತ್ತಾ ಬಂದಿರೋದು ಹೊಸ ಸಂಗತಿಯೇನೂ ಅಲ್ಲ, ಏನಿಲ್ಲವೆಂದರೂ ಅರ್ಧಕೋಟಿ ಬೆಲೆಬಾಳುವ ಆಡಿ ಕಾರನ್ನೇ ಗಿಫ್ಟಾಗಿ ಕೊಟ್ಟು ಒಂದೂವರೆ ಕೋಟಿಯ ಪೆಂಡಾಲ್ ಹಾಕಿಸಿ ಮಗನ ಮದುವೆ ಮಾಡಿದ ಸದಾನಂದಗೌಡರಿಂದ ಹಿಡಿದು ಶೆಟ್ಟರ್-ಶಾಮನೂರು ನೆಂಟಸ್ತಿಕೆಯ ಮದುವೆ, ನಿತಿನ್ ಗಡ್ಕರಿ ಮಗನ ಮದುವೆ, ಅಷ್ಟೇ ಏಕೆ ಚೆನ್ನೈನ ಅಪೊಲೊ ಆಸ್ಪತ್ರೆಯಲ್ಲಿ ಈಗಷ್ಟೇ ಚೇತರಿಸಿಕೊಳ್ಳುತ್ತಿರುವ ಜಯಕ್ಕ ತನ್ನ ದತ್ತು ಮಗನಿಗೆ ಮಾಡಿದ ರಾಜಗಾಂಭೀರ್ಯದ ಮದುವೆ ಇವೆಲ್ಲವೂ ತಮ್ಮ ಸಾಂಪ್ರದಾಯಿಕ ಛಾಯೆಗಿಂತ ಅವರವರ ಪೊಲಿಟಿಕಲ್ ಗ್ರಾಫಿನ ಜೀವಂತಿಕೆಗೆ ಬಳಕೆಗೊಂಡಿದ್ದೇ ಹೆಚ್ಚು, ಇದಕ್ಕೆ ಜನಾರ್ದನ್ ರೆಡ್ಡಿಯೂ ಹೊರತಲ್ಲ, ಅದರಲ್ಲೂ ಜೈಲಿಗೆ ಹೋಗಿಬಂದ ಮೇಲೆ ರೆಡ್ಡಿಯ ರಾಜಕಾರಣ ಸಾಮ... ಧೂಳೀಪಟವಾಗಿತ್ತು, ಸ್ವತಃ ಅವನದೇ ಪಾಟ... ಮೇಲ್ನೋಟದ ರಾಜಕೀಯ ಅಸ್ಪೃಶ್ಯನಂತಾಗಿದ... ವೈಭವವನ್ನು ಮರುಗಿಟ್ಟಿಸಿಕೊಳ್ಳಲು, ತಾನು ... ಆರ್ಥಿಕವಾಗಿ ಬಲಿಷ್ಠನಾಗೇ ಇದ್ದೀನಿ ಅನ್ನೋ ಸಂದ... ಪಾರ್ಟಿ ಫಂಡಿನ ಸಮಿತಿಗೆ ರವಾನಿಸಲು ಮದು... ಈ ಪರಿ ಅದ್ದೂರಿಗೊಳಿಸಿದ್ದಾನೆ. ಹೇಗೂ ಕೇ... 'ಮಾತೃ'ಪಕ್ಷವೇ ಅಧಿಕಾರದಲ್ಲಿರೋದರಿಂದ ಇ... ಟ್ಯಾಕ್ಸ್ ದಾಳಿ, ಸಿಬಿಐ ಕೆಂಗಣ್ಣು ಇವೆಲ್ಲವ... ಬಚಾವಾಗುವುದು ಕಷ್ಟವೇನೂ ಅಲ್ಲ ಅಂತ ಲೆ... ರೆಡ್ಡಿ ಭರ್ಜರಿಯಾಗೇ ಖರ್ಚು ಮಾಡಿದ್ದಾನೆ.

ಇಂಡಿಯಾಕ್ಕೆ ಇಂಥಾ ಕರ್ಮವೇನು ಹೊಸದು... ಮಗಳ ಮದುವೆಗೆ ದುಡ್ಡು ಹೊಂದಿಸಲಾಗದೆ ... ಹಾಕಿಕೊಂಡೊ, ವಿಷ ಕುಡಿದೋ ಅಥವಾ ... ಹಪಾಹಪಿಗೆ ಎದೆಯೊಡೆದೂ ಸತ್ತ ಅಸಹಾಯಕ ... ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಜೊತೆಗೆ, ಲಕ್ಷಾಂತರ ಸಮಾಧಿಗಳ ಮೇಲೆ ಇಂತಹದ್ದೊಂದು ಮದುವೆ ನಡೆದು ನಾಗರಿಕ ಸಮಾಜವನ್ನು ಅಣಕಿಸುವ ನಿದರ್ಶನಗಳೂ ಸಾಕಷ್ಟು ಸಿಗುತ್ತವೆ... ಈ ರೆಡ್ಡಿ ಖರ್ಚು ಮಾಡುತ್ತಿರುವ ಪರಿ ಇದೆಯಲ... ಅವನ ಸಿರಿವಂತಿಕೆಗಿಂತ ಮಾನಸಿಕ ಅಸ್ವಸ್ಥತೆಯನ್ನೇ ... ತಾನು (ಶ್ರೀ ಕೃಷ್ಣದೇವರಾಯ ಎಂದುಕೊಂಡ) ತೆರೆ...

ಈ ಮದುವೆಗೆಂದು ಅರಮನೆ ಮೈ... ಮೂವತ್ತಾರು ಎಕರೆ ಜಾಗವನ್ನು ಬಳಸಿದ್ದಾನೆ. ಜಾಗ ಜೈಲ್ ಜನಾರ್ದನ್‌ನನ್ನು ನೆನಪಿಸುವುದಕ್ಕಿಂ... ಕೃಷ್ಣದೇವರಾಯನ ರೀಕ್ರಿಯೇಷನ್ನಿಗೇ ಹೆಚ್ಚು ಖ... ಮದುವೆಯ ಪ್ರವೇಶದ್ವಾರವೇ ತಿರುಪತಿಯ ಸಪ್ತ... ಮುಖಗೋಪುರವನ್ನು ನೆನಪಿಸುವಂತಿದೆ.. ಕೃಷ್ಣದೇವರಾಯ ಇದೇ ತಿಮ್ಮಪ್ಪನ ಪರಮಭಕ್... ಅನ್ನೋದು ಯಾವುದಕ್ಕೂ ನಿಮಗೆ ನೆನಪಿರಲಿ.. ಕನ್ನಡ ಸಿನಿಮಾದ ಕಲಾ ನಿರ್ದೇಶಕ ಶಶಿಧರ್ ಅಡ... ಬಳಸಿಕೊಂಡ ರೆಡ್ಡಿ ಕೃಷ್ಣದೇವರಾಯನ ಕಾಲದ ಬದುಕನ್ನು ಮರುಸೃಷ್ಟಿಸುವುದಕ್ಕೆಂದೇ ಕೋ... ರೂಪಾಯಿ ಖರ್ಚು ಮಾಡಿದ್ದಾನೆ. ಅದನ್ನು ಸೃ... ಪಾಪ ಅಡಪನ ಟೀಮಿಗೆ ಹಲವು ವಾರಗಳೇ ಬೇಕ... ಇನ್ನು ಆಗಿನ ಕಾಲದಲ್ಲಿ ಜನರು ಉಡುತ್ತಿದ್ದ ಶೈಲಿ... ಬಟ್ಟೆಗಳನ್ನು ಒಂದಷ್ಟು ಪೋಷಕ ನಟರಿಗೆ ತೊ... ಜೀವನವನ್ನೂ ಮತ್ತೆ ಧರೆಗಿಳಿಸುವ ಅರ್ಥವಿಲ್ಲದ ಕ... ನಡೆಸಲಾಗಿದೆ. ಅಲ್ಲದೇ ತನ್ನ ಈ ಘನಂದಾರಿ ಕೃಷ್ಣದೇ... ಸಾಮ್ರಾಜ್ಯವನ್ನು ಬಂದವರಿಗೆ ಸುತ್ತಾಡಿಸಲು ಅ... ಮೈದಾನದೊಳಗೇ ಎತ್ತಿನಗಾಡಿ ವ್ಯವಸ್ಥೆಯ... ಮಾಡಿದ್ದಾನಂತೆ. ಇನ್ನು ಹಂಪಿಯ ವಿರೂಪಾಕ್ಷ,

ಯಲಬುರ್ಗಾ: ರಾಯರೆಡ್ಡಿ-ಪೂಜಾರಿಗೆ ಪರ್ಯಾಯ ಶಕ್ತಿ


ರಾಯರೆಡ್ಡಿ


ಯಲಬುರ್ಗಾ ರಾಜಕಾರಣ ಕಾಂಗ್ರೆಸ್, ಬಿಜೆಪಿಗಳ ನಡುವೆಯೇ ಜಖಂ ಆಗಿಹೋಗಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಕಾಂಗ್ರೆಸ್ ಅನ್ನೋ ಶತಮಾನದ ಪಕ್ಷ ಇಲ್ಲಿ ಬಸವರಾಜ ರಾಯರೆಡ್ಡಿಯ ಕೈಗೊಂಬೆಯಂತಾಗಿದ್ದರೆ, ಬಿಜೆಪಿ ಅಕ್ಷರಶಃ ಹಾಲಪ್ಪ ಪೂಜಾರಿಯ ಬಂದಿಖಾನೆ ಸೇರಿಕೊಂಡಿದೆ. ಇವರಿಬ್ಬರೂ ಲಿಂಗಾಯತ ರೆಡ್ಡಿ ಪಂಗಡಕ್ಕೆ ಸೇರಿದವರು. ತಾಲ್ಲೂಕಿನಲ್ಲಿ ಇವರಿಬ್ಬರದೇ ಅಬ್ಬರ. ಇವರಿಗೆ ಸರಿಸಾಟಿಯಾಗುವ ತೃತೀಯ ಶಕ್ತಿಯ ಆಸರೆಯಿಲ್ಲದ ಯಲಬುರ್ಗಾದ ಮಂದಿ ಅತ್ತ ದರಿ ಇತ್ತ ಪುಲಿ ಎಂಬಂತೆ ಸಂದಿಗ್ಧತೆಗೆ ಸಿಲುಕಿದ್ದಾರೆ.

ಸದ್ಯದ ರಾಜಕಾರಣವನ್ನು ನೋಡಿದರೆ ಬಹುಶಃ ಹಾಲಪ್ಪ ಮತ್ತು ರಾಯರೆಡ್ಡಿ ಬಿಟ್ಟು ಮೂರನೇ ಶಕ್ತಿ ಉದಯಿಸುವುದು ಕನಸಿನ ಮಾತಾಗಿದೆ. ಹಾಗಂತ ರಾಜಕಾರಣ ನಿಂತ ನೀರಲ್ಲವಲ್ಲ, ಚುನಾವಣೆಯ ವೇಳೆಗೆ ಜನರ ನಿರೀಕ್ಷೆಗಳು ಅಚ್ಚರಿಯ ಫಲಿತ ಕೊಟ್ಟರೂ ಕೊಡಬಹುದು. ಆ ನಿಟ್ಟಿನಲ್ಲಿ ನೋಡುವುದಾದರೆ ಯಲಬುರ್ಗದಲ್ಲಿ ಅಂತಹ ಸಾಧ್ಯತೆ ಇರುವುದು ಕೆಲವರಿಗೆ ಮಾತ್ರ. ಆ ಪಟ್ಟಿಯಲ್ಲಿ ಸಿ.ಎಚ್.ಪಾಟೀಲರ ಹೆಸರು ಮೊದಲ ಸಾಲಿನಲ್ಲಿ ನಿಲ್ಲುತ್ತದೆ.

ಕಳೆದ 20 ವರ್ಷಗಳಿಂದ ರಾಜಕಾರಣ ಮಾಡುತ್ತಾ ಬಂದಿರುವ ಸಿ.ಎಚ್.ಪಾಟೀಲ್ ಕಾಂಗ್ರೆಸ್‌ನಿಂದ ರಾಜಕೀಯ ಶುರು ಮಾಡಿದರೂ ಆನಂತರ ಕಾಂಗ್ರೆಸ್‌ನ ಮಾಜಿ ಶಾಸಕ ಶಿವಶರಣಪ್ಪಗೌಡ ಪಾಟೀಲ್‌ರ ಕುತಂತ್ರ ರಾಜಕಾರಣಕ್ಕೆ ಬೇಸತ್ತು 2004ರಲ್ಲಿ ಜೆ.ಡಿ.ಎಸ್. ಪಕ್ಷದಿಂದ ಸ್ಪರ್ಧಿಸಿ ಸೋತಿದ್ದರು. 2008ರಲ್ಲಿ ಈ ಪಾಟೀಲ್ ಮತ್ತೊಮ್ಮೆ ಜೆ.ಡಿ.ಎಸ್‌ನಿಂದ ಸ್ಪರ್ಧಿಸಲು ಯತ್ನ ನಡೆಸಿ ವಿಫಲರಾದರು. ತದನಂತರ ಭರ್ತಿ 5 ವರ್ಷ ಜಿ.ಪಂ. ಸದಸ್ಯನಾಗಿ ಗಮನ ಸೆಳೆದಿದ್ದಲ್ಲದೆ ಮತ್ತೈದು ವರ್ಷ ಜೆ.ಡಿ.ಎಸ್ ಪಕ್ಷದ ತಾಲೂಕು ಅಧ್ಯಕ್ಷನಾಗಿ ಆ ತೆನೆ ಹೊತ್ತ ಮಹಿಳೆಗೆ ಮಣ್ಣು ಹೊತ್ತರು.


2013ರ ವೇಳೆಗೆ ದುಡುಕಿನ ನಿರ್ಧಾರ ತೆಗೆದುಕೊಂಡ ಪಾಟೀಲ್ ಹೋಗಿಹೋಗಿ ಹಾಳುಬಾವಿಗೆ ಬಿದ್ದಂತೆ ಯಡ್ಡಿಯ ಕೆ.ಜೆ.ಪಿ ಹೊಕ್ಕು ವಿಧಾನಸೌಧದ ಹಾದಿಯಲ್ಲಿ ಮಗದೊಮ್ಮೆ ಸೋಲುಂಡರು. ಪಾಟೀಲ್ ಜನಸಾಮಾನ್ಯರ ಮಧ್ಯ ಹೋರಾಟ ನಡೆಸಿದಾತ. ಆದರೆ ಈ ಪಾಟೀಲ್‌ಗೆ ಚುನಾವಣೆಯಲ್ಲಿ ಸಿಕ್ಕಿದ್ದು ಕೇವಲ 10000 ಮತಗಳು ಮಾತ್ರ. ಮಾತುಮಾತಿಗೆ ಯಲಬುರ್ಗಾ ತಾಲೂಕಿನಲ್ಲಿ ನಮ್ಮವು 40,000 ಮತಗಳಿವೆ ಅಂತ ಬಡಾಯಿ ಕೊಚ್ಚಿಕೊಳ್ಳುವ ಪಂಚಮಸಾಲಿಗಳೇ ತಮ್ಮ ಕುಲಬಾಂಧವ ಪಾಟೀಲನಿಗೆ ಮತ ಹಾಕಲಿಲ್ಲ, ಅಷ್ಟಾದರು ಪಾಟೀಲ್‌ನ ರಾಜಕಾರಣದ ಮುಲುಕಾಟಗಳು ಮುಗಿದಿಲ್ಲ, ಮುಂಬರುವ 2018ರಲ್ಲಿ ಈ ಹಾಲಪ್ಪ ಆಚಾರ ಹಾಗೂ ಬಸವರಾಜ ರಾಯರೆಡ್ಡಿ ವಿರುದ್ಧ ಸೆಡ್ಡು ಹೊಡೆಯಲು ಸಜ್ಜಾಗುತ್ತಿದ್ದಾನೆ. "ನಾನು ಇನ್ನು ಒಂದು ವರ್ಷ ಬಿಟ್ಟು ತಾಲೂಕಿನಲ್ಲಿ ಮತ್ತೆ ತೃತೀಯ ಶಕ್ತಿ ಕಟ್ಟುತ್ತೇನೆ" ಎಂದು ಹೇಳಿಕೊಂಡು ತಿರುಗಾಡುತ್ತಿರೋದನ್ನು ಏಕ್‌ದಂ ನಿರ್ಲಕ್ಷಿಸುವುದಕ್ಕೆ ಸಾಧ್ಯವಿಲ್ಲ.


ಇನ್ನೂ ತಾಲೂಕಿನಲ್ಲಿ ತೃತೀಯ ಶಕ್ತಿಯಾಗಿ ಬೆಳೆಯಬಹುದಾಗಿದ್ದ ಬಿ.ಜೆ.ಪಿ.ಯ ನವೀನ ಕುಮಾರ ಗುಳಗಣ್ಣ ತನ್ನ ರಾಜಕೀಯ ಅಪ್ರಬುದ್ಧ ನಿರ್ಧಾರಗಳಿಂದಾಗಿ ಇಂದು ರಾಜಕೀಯ ವನವಾಸ ಅನುಭವಿಸುವಂತಾಗಿದೆ. ಈತ ಒಂದುವೇಳೆ ಬಿ.ಜೆ.ಪಿ.ಯಲ್ಲೇ ಇದ್ದಿದ್ದರೆ ಇಷ್ಟೊತ್ತಿಗಾಗಲೇ ಪಾರ್ಟಿಯನ್ನು ಬಿಗಿಹಿಡಿತಕ್ಕೆ ಪಡೆಯಬಹುದಿತ್ತು. ಆದರೆ ತನ್ನ ತಂದೆ ಈಶಣ್ಣ ಅನಾರೋಗ್ಯಕ್ಕೀಡಾದ ನಂತರ ಹೇಳಿಕೆ ಮಾತು ಕೇಳಿ




ಗಣಿ ಧಿಮಾಕಿನಲ್ಲಿ ರಾಮುಲು ಕಟ್ಟಿದ್ದ ಬಿ.ಎಸ... ಕಾಂಗ್ರೆಸ್ ಸೇರಿ ಇಂದು ಬಿ.ಜೆ.ಪಿಯಲ್ಲಿ ಆಟಕ... ಲೆಕ್ಕಕ್ಕಿಲ್ಲ ಎಂಬ ಹೀನಾಯ ಸ್ಥಿತಿ ತಲುಪಿದ್ದಾನೆ.

ಅದೇರೀತಿ ಮಾಜಿ ಶಾಸಕ ಲಿಂಗಾ...


ಶ್ರೀಪಾದಪ್ಪ


ಸಿ.ಎಚ್. ಪಾಟೀಲ್


ಶಿವಶಂಕರ್


ನವೀನ್

ಶಿವ, ಗಣೇಶ ದೇವಾಲಯಗಳ ಸೆಟ್‌ಗಳನ್ನೂ ಹಾಕಿಸಿಕೊಂಡಿರುವ ರೆಡ್ಡಿ ಅವುಗಳ ನಡುವೆ ರಾಜಪೋಷಾಕು ಧರಿಸಿನಲ್ಲಿ ಮೈಮೇಲೆ ಆಭರಣ ಹೇರಿಕೊಂಡು ನಡೆಯುವಾಗ ತಾನೇ ಶ್ರೀ ಕೃಷ್ಣದೇವರಾಯನಾದಂತೆ ವಿಕೃತ ಖುಷಿ ಪಟ್ಟುಕೊಳ್ಳುತ್ತಿದ್ದಾನೆ. ಇನ್ನು ಸ್ವಲ್ಪ ದಿನದಲ್ಲಿ ಈ ಕಾಯಿಲೆ ಉಲ್ಬಣಿಸಿ ಆಪ್ತಮಿತ್ರ ಸಿನಿಮಾದ ಸ್ಪ್ಲಿಟ್ ಪರ್ಸನಾಲಿಟಿ ಹಂತ ತಲುಪಿ, ಒಮ್ಮೆ ರೆಡ್ಡಿಯಾಗಿಯೂ ಇನ್ನೊಮ್ಮೆ ಶ್ರೀ ಕೃಷ್ಣದೇವರಾಯನಾಗಿಯೂ ಗಣಿಧಣಿ ಮಾತಿಗಿಳಿದರೆ ಅಚ್ಚರಿಯಿಲ್ಲ.

ರೆಡ್ಡಿಯ ಹುಚ್ಚಾಟಕ್ಕಿಂತ ದುರಂತವೆಂದರೆ ಮಾಧ್ಯಮಗಳ ದುರ್ವರ್ತನೆ. ಒನ್ಸ್ ಎಗೇನ್, ನಮ್ಮ ಮೀಡಿಯಾಗಳು ಇಡೀ ದಿನ ಬೆಳಗ್ಗಿನಿಂದ ಸಂಜೆವರೆಗೆ ಮದುವೆ ಸಮಾರಂಭವನ್ನೇ ಬಿತ್ತರಿಸಿ ಕೃತಾರ್ಥವಾಗಿವೆ. ಯಾವ ಚಾನೆಲ್ ಬದಲಾಯಿಸಿದರೂ ರೆಡ್ಡಿ ಮಗಳ ಮದುವೆ ಸಂಭ್ರಮ ಬದಲಾಗುತ್ತಿಲ್ಲ. ಅಷ್ಟರಮಟ್ಟಿಗೆ ಮಾಧ್ಯಮಗಳೆಲ್ಲ ಇವತ್ತು ಸತ್ತುಹೋಗಿವೆ. ಐನೂರು, ಸಾವಿರ ಮುಖಬೆಲೆಯ ನೋಟುಗಳನ್ನು ಮೋದಿ ರದ್ದು ಮಾಡಿದಾಗ ಅದನ್ನು ಕಪ್ಪುಹಣದ ಮೇಲಿನ ಸರ್ಜಿಕಲ್ ದಾಳಿ, ಕಾಳದಂಧೆಯವರೆಲ್ಲ ಬೀದಿಗೆ ಬೀಳುತ್ತಾರೆ ಅಂತೆಲ್ಲ ಬೊಬ್ಬೆ ಹೊಡೆದು 'ಆರ್ಥಿಕ' ವಿಶ್ಲೇಷಣೆ ಮಾಡಿದ್ದ ಚಾನೆಲ್‌ಗಳಿಗೆ ಇದೀಗ ಆ ಸರ್ಜಿಕಲ್ ದಾಳಿಯಿಂದ ನೇರವಾಗಿ ಬೀದಿಗೆ ಬಂದುಬಿದ್ದಿರುವ ಸಾಮಾನ್ಯ ಜನರ ಬಗ್ಗೆ ವರದಿ ಮಾಡುವ ಇಕ್ಕಟ್ಟಿನಿಂದ ಬಿಡುಗಡೆ ಹೊಂದಲು ಒಂದು ನೆಪ ಬೇಕಿತ್ತು. ರೆಡ್ಡಿ ಮಗಳ ಅದ್ದೂರಿ ಮದುವೆ ಅದಕ್ಕೊಂದು ದಾರಿಯಾಯ್ತು. ನಾಲ್ಕಾರು ದಿನವಾದರು ನಿಂತ ಕ್ಯೂ ಸವೆಯದೆ, ನಾಲ್ಕು ಸಾವಿರ ರೂಪಾಯಿ ಎಕ್ಸ್‌ಚೇಂಜ್‌ಗಾಗಿ ಬ್ಯಾಂಕು, ಪೋಸ್ಟಾಫೀಸಿನ ಮುಂದೆ ಕಳೆಗುಂದಿದ ಮುಖಹೊತ್ತು ನಿಂತ ಜನರ ಸಂಕಷ್ಟಗಳು ಬಿತ್ತರವಾಗಬೇಕಿದ್ದ ಟೀವಿ ಪರದೆಯಲ್ಲಿ ಮೇಕಪ್ ಮೆತ್ತಿದ ರೆಡ್ಡಿ ಕುಟುಂಬಸ್ಥರ ಮುಖಗಳು, ಅವರ ಆಡಂಬರಗಳು, ಸಂಭ್ರಮ ಖುಷಿಗಳು ನಿರಾತಂಕವಾಗಿ ಬಿತ್ತರಗೊಳ್ಳುತ್ತಿದ್ದವು. ಸದ್ಯ ಟಿಆರ್‌ಪಿಗೋಸ್ಕರ 'ಲೈವ್ ಕವರೇಜ್' ನೆಪದಲ್ಲಿ ಈ ಮಾಧ್ಯಮ ಮಹಾಶಯರು ಪ್ರಸ್ಥದ ಕೋಣೆಗೂ ಕ್ಯಾಮೆರಾ ಇಡದಿದ್ದರೆ ಅದೇ ನಮ್ಮ ಪುಣ್ಯ!

ಅಂದಹಾಗೆ, ರೆಡ್ಡಿ ತನ್ನ ಮಗಳ ಮದುವೆಗಾಗಿ ಖರ್ಚು ಮಾಡುತ್ತಿರುವ ಮೊತ್ತದ ಬಗ್ಗೆ ಒಂದಿಷ್ಟು ಭಿನ್ನಾಭಿಪ್ರಾಯಗಳಿವೆ. ಕೆಲವರು 200-300 ಕೋಟಿ ಅಷ್ಟೇ ಅಂದರೆ, ಮತ್ತೆ ಕೆಲವರು 500 ಕೋಟಿಯ ಲೆಕ್ಕ ತೋರಿಸುತ್ತಾರೆ, ಇನ್ನು ಕೆಲವರು 550 ಕೋಟಿ ರೂಪಾಯಿ ಅಂತ ಖಡಾಖಂಡಿತವಾಗಿ ಹೇಳುತ್ತಾರೆ. ನೆನಪಿರಲಿ, ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗೆ ಅಂತ ಸರ್ಕಾರ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಹಣ ಕೇವಲ 148 ಕೋಟಿ ರೂಪಾಯಿ. ಇದು ಮೇಲ್ಕಂಡ ಯಾವ ಕಲ್ಪಿತ ಸಂಖ್ಯೆಗಿಂತಲೂ ದೊಡ್ಡದಲ್ಲ. ಇದನ್ನೆಲ್ಲಾ ಗಮನಿಸಿದ ಮೇಲೆ ನಾವೆಲ್ಲರೂ ಒಕ್ಕೊರಲಿನಿಂದ ಒಂದು ಮಾತು ಹೇಳಲೇಬೇಕು..

..... ಮೇರಾ ಭಾರತ್ ಮಹಾನ್!!!!!

■ ಗಿರೀಶ್ ತಾಳಿಕಟ್ಟೆ

ದೇಸಾಯಿಯವರ ಪುತ್ರ ಶಿವಶಂಕರ ದೇಸಾಯಿ ಒಮ್ಮೆ ತಂದೆಯ ನಾಮಬಲದಿಂದ ಜಿ.ಪಂ ಉಪಾಧ್ಯಕ್ಷನಾಗಿ ಗಮನ ಸೆಳೆದಿದ್ದ. ಈತನೂ ಎಂ.ಎಲ್.ಎ ಕ್ಯಾಂಡಿಡೇಟಾಗಿ ಹೊರಹೊಮ್ಮುವ ಅವಕಾಶವಿತ್ತು, ಆದರೆ ರಾಯರೆಡ್ಡಿ ಕಾಂಗ್ರೆಸ್‌ಗೆ ಎಂಟ್ರಿ ಕೊಟ್ಟ ಮೇಲೆ ಅದೇನಾಯಿತೋ ಏನೊ ಆಗ ಬಂಗಾರಪ್ಪ ಏರಿದ್ದ ಸಮಾಜವಾದಿ ಪಕ್ಷದ ಸೈಕಲ್ ತುಳಿದು, ನಂತರ ಜೆ.ಡಿ.ಎಸ್ ಸೇರಿ ನಿರಾಶ್ರಿತನಂತಾಗಿದ್ದಾನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆ.ಡಿ.ಎಸ್‌ನಿಂದ ಎಂ.ಎಲ್.ಎ ಟಿಕೆಟ್‌ಗೆ ಯತ್ನಿಸಿದನಾದರು ಅದು ದಕ್ಕಲಿಲ್ಲ. ಈತನೂ ತೃತೀಯ ರಾಜಕೀಯ ಶಕ್ತಿಯ ಕನವರಿಕೆ ಮಾಡುತ್ತಾನಾದರೂ ಆರ್ಥಿಕ ಸಂಕಷ್ಟ ಕಾಡುತ್ತಿದೆ.

ಇನ್ನು ಹಿರಿಯ ರಾಜಕಾರಣಿ ಶ್ರೀಪಾದಪ್ಪ ಅಧಿಕಾರಿ ಕಳೆದ 40 ವರ್ಷಗಳಿಂದ ತಾಲೂಕಿನಲ್ಲಿ ರೆಡ್ಡಿ ಮತ್ತು ಗಾಣಿಗ ರಾಜಕೀಯ ಕದಂಬ ಬಾಹುವನ್ನು ಭಸ್ಮ ಮಾಡಲು ಇನ್ನಿಲ್ಲದ ರಣತಂತ್ರ ಹೆಣೆದು ಸುಸ್ತಾಗಿ ಹೋಗಿದ್ದಾರೆ. ಶ್ರೀಪಾದಪ್ಪ ಹುಟ್ಟು ಹೋರಾಟಗಾರ, ಅಷ್ಟೇ ಧಾಡಸಿ ರಾಜಕಾರಣಿ. ಆದರೆ ಬಸವರಾಜ ರಾಯರೆಡ್ಡಿ ಹಾಗೂ ಶಿವಶರಣಪ್ಪಗೌಡ ಪಾಟೀಲರಂತಹ ರಾಜಕಾರಣಿಗಳ ಶಕುನಿ ತಂತ್ರಗಾರಿಕೆಗೆ ಬಲಿಯಾದ ಅಧಿಕಾರಿ ಹಲವಾರು ನೋವುಗಳನ್ನುಂಡಿದ್ದಾರೆ. ಶ್ರೀಪಾದಪ್ಪನವರ ಈ ಹಿನ್ನಡೆಗೆ ಅವರ ಪಕ್ಷಾಂತರ ರಾಜಕಾರಣ ಮೊದಲನೇ ಕಾರಣವಾದರೆ, ಅವರ ಕೆಲ ಹಿಂಬಾಲಕರ ಪಾತ್ರವೂ ಇದೆ. ಇಂತಹ ಸಂದರ್ಭದಲ್ಲಿ ಬಿ.ಜೆ.ಪಿ, ಕಾಂಗ್ರೆಸ್‌ಗೆ ಎದಿರೇಟು ನೀಡಲು ಇತ್ತೀಚೆಗಷ್ಟೆ ಜೆ.ಡಿ.ಎಸ್ ಪಕ್ಷದೊಳಕ್ಕೆ ಗೃಹಪ್ರವೇಶಗೈದಿರುವ ಅಧಿಕಾರಿ ತನ್ನ ಜೀವಮಾನದ ಕೊನೆಯ ಹೋರಾಟ ಈ ಚುನಾವಣೆ ಅಂತ ಘರ್ಜಿಸುತ್ತಿದ್ದಾರೆ. ಇವರು ತಾಲೂಕಿನ ಬಹುಸಂಖ್ಯಾತ ಪಂಚಮಸಾಲಿ ಸಮಾಜಕ್ಕೆ ಸೇರಿದವರಾಗಿದ್ದು ಯಲಬುರ್ಗಾದ ರಾಜಕೀಯ ಇತಿಹಾಸದಲ್ಲಿ ಇಲ್ಲಿಯವರೆಗೆ ಯಾವೊಬ್ಬ ಪಂಚಮಸಾಲಿ ನಾಯಕ ಶಾಸಕನಾಗಿಲ್ಲ, ಈ ಒಂದು ಕಾರಣವನ್ನಿಟ್ಟುಕೊಂಡು ಮತಗಳ ಧ್ರುವೀಕರಣಕ್ಕೆ ಅಧಿಕಾರಿ ಕೈಹಾಕುವ ಸಾಧ್ಯತೆ ಇದೆ.

■ ಶರಣಪ್ಪ ಪಾಟೀಲ್

ಕೊಡಗು: ಕಾಂಗ್ರೆಸ್ ಮನೆ ಮುರಿದ ಟಿಪ್ಪು

ಎಲ್ಲರೂ ಬಯಸಿದಂತೆ ಮುಗಿದಿತ್ತು ಟಿಪ್ಪು ಜಯಂತಿ ರಾಜ್ಯ ಸರಕಾರದ ಕಾರ್ಯಕ್ರಮ. ಹಾಗಾಗಿ ಕಾಟಾಚಾರಕ್ಕಾಗಿ ಮುಗಿಸಬೇಕು ಎಂಬುದು ಜಿಲ್ಲಾಡಳಿತದ ಬಯಕೆ. ಬಿಜೆಪಿಯನ್ನು ವಿರೋಧಿಸಿ, ನಾವು ಕಾರ್ಯಕ್ರಮವನ್ನು ಮಾಡುವುದು ಬೇಡ ಎಂಬುದು ಕೊಡಗು ಜಿಲ್ಲಾ ಕಾಂಗ್ರೆಸಿಗರ ಚಿಂತನೆ. ತಾವು ವಿರೋಧಿಸಿದರೂ ಕಾರ್ಯಕ್ರಮ ನಡೆದೇ ನಡೆಯುತ್ತದೆ. ಹಾಗಾಗಿ ಸಾಂಕೇತಿಕವಾಗಿ ಪ್ರತಿಭಟಿಸಿ, ತಮ್ಮದೇ ಗೆಲುವು ಎಂಬುದನ್ನು ಪ್ರತಿಬಿಂಬಿಸುವ ಎಂಬುದು ಬಿಜೆಪಿಯವರ ಧೋರಣೆ. ಹೀಗಾಗಿ ಕೊಡಗಿನಲ್ಲಿ ಬಹಳ ಕೆಟ್ಟದಾಗಿ ಟಿಪ್ಪು ಜಯಂತಿ ಆಚರಣೆಯಾಯಿತು. ಮಡಿಕೇರಿಯಲ್ಲಿ ಕೇವಲ 30ರಿಂದ 40 ಸಾರ್ವಜನಿಕರು, ವಿರಾಜಪೇಟೆಯಲ್ಲಿ 10ರಿಂದ 15 ಹಾಗೂ ಸೋಮವಾರ ಪೇಟೆಯಲ್ಲಿ ಕೇವಲ 6 ಮಂದಿ ಭಾಗವಹಿಸಿ, ಅಧಿಕಾರಿಗಳ ಟಿಪ್ಪು ಜಯಂತಿಯನ್ನು ಆಚರಿಸಿದರು. ಯಾರಿಗೂ ಆಮಂತ್ರಣ ಪತ್ರವೇ ಇರಲಿಲ್ಲ, ಸ್ವತಃ ಕಾಂಗ್ರೆಸ್ ನಾಯಕರುಗಳಿಗೂ ಸಿಗಲಿಲ್ಲ. ಆಮಂತ್ರಣ ಪತ್ರದಲ್ಲಿ ಕಾರ್ಯಕ್ರಮಕ್ಕೆ ಬರುವವರು ಕಡ್ಡಾಯವಾಗಿ ಆಮಂತ್ರಣ ಪತ್ರ ತರಬೇಕು ಎಂದು ಮುದ್ರಿಸಿದ್ದಲ್ಲದೆ, ಅದಕ್ಕೆ ಕ್ರಮ ಸಂಖ್ಯೆಯನ್ನೂ ನೀಡಿ, ಕಾರ್ಯಕ್ರಮಕ್ಕೆ ಬರುವವರು ಗುರುತು ಚೀಟಿಯ ಜೊತೆಯಲ್ಲಿ ಬರುವಂತೆ ಸೂಚಿಸಲಾಗಿತ್ತು. ಕಾಂಗ್ರೆಸಿಗರು ತಪ್ಪಿ ಕೂಡ ಜಿಲ್ಲಾಡಳಿತದ ಜೊತೆಯಲ್ಲಿ ತಮಗೆ ಹೆಚ್ಚು ಆಮಂತ್ರಣ ಪತ್ರ ಬೇಕು; ತಮ್ಮ ಸರಕಾರದ ಕಾರ್ಯಕ್ರಮ; ಅದು ಜನಪರವಾಗಿರಬೇಕಾದರೆ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಹೇಳಲಿಲ್ಲ.

ಗೈರುಹಾಜರಾದ ಉಸ್ತುವಾರಿ ಸಚಿವರು-ವಿಧಾನ ಪರಿಷತ್ ಸದಸ್ಯರು

ಕಾರ್ಯಕ್ರಮದ ಒಂದು ದಿನ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಸಭೆ ನಡೆಸಿ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಟಿಪ್ಪು ಜಯಂತಿ ಯಶಸ್ವಿಯಾಗಿ ನಡೆಸುವುದು ಆಯಾ ಜಿಲ್ಲಾ ಉಸ್ತುವಾರಿ ಸಚಿವರ ಹೊಣೆಗಾರಿಕೆ ಎಂದು ಹೇಳಿ, ಪ್ರತಿಯೊಬ್ಬರು ಭಾಗವಹಿಸುವಂತೆ ಸೂಚಿಸಿದ್ದರು. ಆದರೆ ಕೊಡಗಿನವರಲ್ಲದ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್.ಸೀತಾರಾಂ ಈ ಸೂಚನೆ ತನಗೆ ಅನ್ವಯ ಇಲ್ಲ; ತಾನೇನಿದ್ದರೂ ರಾಮಯ್ಯ ಮೆಡಿಕಲ್ ಕಾಲೇಜಿಗೆ ಸೀಮಿತ ಎಂದು ಭಾವಿಸಿ ಕಾರ್ಯಕ್ರಮಕ್ಕೆ ಬರಲಿಲ್ಲ. ಇನ್ನು ಕೊಡಗಿನವರೇ ಆದರೂ ಟಿಪ್ಪು ಜಯಂತಿಗೆ ವಿರೋಧವನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಿದ್ದ ಇತ್ತೀಚೆಗಷ್ಟೇ ವಿಧಾನಪರಿಷತ್ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರ ಶಿಷ್ಯೆ ಶ್ರೀಮತಿ ವೀಣಾ ಅಚ್ಚಯ್ಯ ಕೂಡ ಭಾಗವಹಿಸಲಿಲ್ಲ. ಕೆಲವೇ ದಿನಗಳ ಹಿಂದೆ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾಗಿ ನೇಮಕಗೊಂಡ ಪದ್ಮಿನಿ ಪೊನ್ನಪ್ಪ ಕೂಡ ಭಾಗವಹಿಸಲಿಲ್ಲ. ನಾಯಕರುಗಳೇ ಭಾಗವಹಿಸದ ಮೇಲೆ, ಪುಡಿ ನಾಯಕರು ಹಾಗೂ ಕಾರ್ಯಕರ್ತರು ಭಾಗವಹಿಸದಿದ್ದರೆ ಅದು ತಪ್ಪಾಗುವುದಿಲ್ಲ.


ಲಜ್ಜೆಗೆಟ್ಟ ಕಾಂಗ್ರೆಸಿಗರು

ಕಾಂಗ್ರೆಸಿಗರು ಟಿಪ್ಪು ಜಯಂತಿ ಕಾರ್ಯಕ್ರಮದ ಯಶಸ್ವಿಗೆ ಪ್ರಯತ್ನಿಸಲಿಲ್ಲ. ಆದರೆ ಕಾರ್ಯಕ್ರಮ ಮುಗಿದನಂತರ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯು, ಜಿಲ್ಲಾಧಿಕಾರಿ ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ರಾಜೇಂದ್ರ ಪ್ರಸಾದ್‌ರವರನ್ನು, ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿ, ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾರೆ. ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷ ಎಂತಹ ಹೀನಾಯ ಸ್ಥಿತಿಯಲ್ಲಿದೆ ಎಂಬುದನ್ನು ಇದರಿಂದ ಮನಗಾಣಬಹುದಾಗಿದೆ.

ತಮಾಷೆ ಎಂದರೆ ಈಗಷ್ಟೇ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷರಾಗಿ ನೇಮಕವಾಗಿರುವ ಕೆ.ಡಿ.ಸಿ.ಸಿ.ಯ ಪ್ರಭಾರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಟಿ.ಪಿ. ರಮೇಶ್‌ರವರು, ಜಿಲ್ಲಾ ಉಸ್ತುವಾರಿ ಸಚಿವರ ಮತ್ತು ವಿಧಾನ ಪರಿಷತ್ ಸದಸ್ಯರ ಗೈರುಹಾಜರಿಗೆ ಕಾರಣವನ್ನು ಕೇಳುತ್ತೇವೆ ಎಂದು ಹೇಳಿದ್ದಾರೆ. ಇದು 2016ರ ಒಂದು ದೊಡ್ಡ ಜೋಕ್. ಸಾರ್ವಜನಿಕರು ಮಾತ್ರವಲ್ಲ, ಕಾಂಗ್ರೆಸ್ ಕಾರ್ಯಕರ್ತರು ಕೂಡ ಈ ಹೇಳಿಕೆಯನ್ನು ನೋಡಿ ಮುಸಿಮುಸಿ ನಗುತ್ತಿದ್ದಾರೆ.


ಕಾಂಗ್ರೆಸ್ ಸಮಿತಿಯಲ್ಲಿ ವಿಪ್ಲವ

ಟಿಪ್ಪು ಜಯಂತಿ ಆಚರಣೆಗೂ ಮುನ್ನ ಮಂಡಳಿಗಳ ಅಧ್ಯಕ್ಷರ ನೇಮಕಾತಿ ಆಗಿತ್ತು, ಹಾಗಾಗಿ ಕೆ.ಡಿ.ಸಿ.ಸಿ.ಯ ಟಿ.ಪಿ. ರಮೇಶ್ ಅಧ್ಯಕ್ಷರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಪುನರ್‌ರಚನೆ ಆಗುತ್ತದೆ ಎಂಬ ಲೆಕ್ಕಾಚಾರ ಶುರುವಾಗಿತ್ತು, ಇದರ ಬೆನ್ನಿಗೆ ನಡೆದ ಟಿಪ್ಪು ಜಯಂತಿಯ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ನಡೆದುಕೊಂಡ ರೀತಿ ಅಲ್ಪಸಂಖ್ಯಾತರನ್ನು ಕೆರಳಿಸಿತ್ತು, ಹಾಗಾಗಿ ಕೊಡಗಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿ




ಆರಂಭವಾಗಿದ್ದು, ಇಲ್ಲಿಯವರೆಗೆ ಕೊಡವ ಜನಾಂಗದವರು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷ ಸ್ಥಾನವನ್ನು ಅನುಭವಿಸುತ್ತಾ ಬಂದಿದ್ದು, ಈ ಬಾರಿ ಅಲ್ಪಸಂಖ್ಯಾತರಿಗೆ ನೀಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ.


ಕೊಡಗು ಜಿಲ್ಲೆಯಲ್ಲಿ ಒಂದು ವಿಚಿತ್ರ ಪರಿಸ್ಥಿತಿ ಇದೆ. ಕೊಡವರು ಕಾಂಗ್ರೆಸ್‌ನ ಮತದಾರರಲ್ಲ. ಅವರು ಬಿಜೆಪಿಯ ಮತದಾರರು. ಆದರೆ ಕೊಡವ ಜನಾಂಗದವರು ಕಾಂಗ್ರೆಸಿನ ಯಜಮಾನಿಕೆಯನ್ನು ಬಹಳ ವರ್ಷಗಳಿಂದ ನಡೆಸುತ್ತಾ














ಬಂದಿದ್ದಾರೆ. ಕಳೆದ ಬಾರಿ ಕೊಡವ ಜನಾಂಗದ ಬಿ.ಟಿ.ಪ್ರದೀಪ್‌ರನ್ನು ವಿಧಾನಸಭೆಗೆ ಅಭ್ಯರ್ಥಿಯಾಗಿಸಿದ್ದರೂ ಅವರು ಗೆಲ್ಲಲಿಲ್ಲ, ಕಾರಣ ಕೊಡವ ಜನಾಂಗದವರು ಬಿಜೆಪಿಗೆ ಮತ ನೀಡಿದ್ದರು. ಈ ಹಿನ್ನೆಲೆಯಲ್ಲಿ ಕೊಡವ ಜನಾಂಗದವರಿಗೆ ಅಧ್ಯಕ್ಷ ಸ್ಥಾನ ನೀಡಬಾರದು ಎಂಬ ವಿಚಾರವನ್ನು ಈಗ ಕೇವಲ ಮುಸ್ಲಿಮರು ಮಾತ್ರವಲ್ಲ, ಕೊಡವೇತರ ಇತರ ಜನಾಂಗದವರೆಲ್ಲರೂ ಮುಂದಿಟ್ಟಿದ್ದಾರೆ.

ಈ ಲೆಕ್ಕಾಚಾರಗಳು ಕೇವಲ ಅಧ್ಯಕ್ಷ ಸ್ಥಾನಕ್ಕೆ ಸೀಮಿತವಾಗಿಲ್ಲ, ಮುಂದೆ ಬರುವ ವಿಧಾನಸಭೆಯ ಅಭ್ಯರ್ಥಿಯ ಆಯ್ಕೆಯಲ್ಲಿಯೂ ಆಗಬೇಕು ಎಂಬ ವಿಚಾರವನ್ನು ಮುಂದಿಟ್ಟುಕೊಂಡು ಬಹಳಷ್ಟು ಸಭೆಗಳು ಕೊಡಗಿನಲ್ಲಿ ನಡೆಯುತ್ತಿವೆ. ಈ ನಿಟ್ಟಿನಲ್ಲಿ ಮುಸ್ಲಿಮರು ಹಲವಾರು ಸಭೆಗಳನ್ನು ನಡೆಸಿದ್ದಾರೆ. ಟಿಪ್ಪು ಜಯಂತಿಗೆ ಕೊಡವ ಜನಾಂಗದವರು ವಿರೋಧ ವ್ಯಕ್ತಪಡಿಸಿರುವುದು, ದೇವಟ್‌ಪರಂಬು ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಿ.ಎನ್.ಸಿ. ಸಂಘಟನೆಯ ಜೊತೆಯಲ್ಲಿ ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ ಗುರುತಿಸಿಕೊಂಡಿರುವುದು, ಅವರ ಕಾರ್ಯಕ್ರಮದಲ್ಲಿ ಎ.ಐ.ಸಿ.ಸಿ.ಯ ವಕ್ತಾರ ಬ್ರಿಜೇಶ್ ಕಾಳಪ್ಪ ಭಾಗವಹಿಸಿದ್ದು ಮತ್ತು ದೆಹಲಿಯಲ್ಲಿ ನವೆಂಬರ್ 1ರಂದು ಸಿ.ಎನ್.ಸಿ. ಸಂಘಟನೆ ಕರಾಳ ದಿನಾಚರಣೆಯನ್ನು ಆಚರಿಸಿದಾಗ ಅದರಲ್ಲೂ ಬ್ರಿಜೇಶ್ ಕಾಳಪ್ಪ ಭಾಗವಹಿಸಿದ್ದು ಪ್ರಮುಖವಾಗಿ ಚರ್ಚೆಯಾಗುತ್ತಿದೆ. ಈ ಎಲ್ಲರದ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರನ್ನು ಕಡೆಗಣಿಸುವ ವ್ಯಕ್ತಿಗಳಿಗೆ ಮತ್ತು ಜನಾಂಗದವರಿಗೆ ಅವಕಾಶ ನೀಡಬಾರದು ಎಂದು ವಾದಿಸುತ್ತಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಸೀತಾರಾಂ ಕೊಡಗಿನ ಜವಾಬ್ದಾರಿಯನ್ನು ತನ್ನ ಆಪ್ತ ಕಾರ್ಯದರ್ಶಿ ಹರೀಶ್ ಬೋಪಣ್ಣ ಎಂಬಾತನಿಗೆ ಜಿಲ್ಲೆಯ ಕಾರುಬಾರುಗಳನ್ನು ವಹಿಸಿದ್ದಾರೆ. ಆತನನ್ನು ಬಿ.ಬಿ.ಎಂ.ಪಿ.ಗೆ ತರಲು ಪ್ರಯತ್ನಿಸಿ ವಿಫಲರಾಗಿದ್ದ ಸೀತಾರಾಂ, ಈಗ ವಿಧಾನಸಭೆಗೆ ತರಲು ಪ್ರಯತ್ನಿಸುತ್ತಿದ್ದಾರೆ. ಆದರೆ ನೇರವಾಗಿ ತರಲು ಸಾಧ್ಯವಿಲ್ಲ ಎಂಬ ಅರಿವಿನಿಂದಾಗಿ ಬಿ.ಟಿ. ಪ್ರದೀಪ್‌ರವರಿಗೆ ಅವಕಾಶ ಎಂದು ಹೇಳುತ್ತಾ, ಅರುಣ್ ಮಾಚಯ್ಯನವರ ಹೆಸರೂ ಪ್ರಸ್ತಾಪವಾಗುವಂತೆ ನೋಡಿಕೊಳ್ಳುತ್ತಿದ್ದಾರೆ. ಈ ಎರಡೂ ಹೆಸರು ಚರ್ಚೆಗೆ ಬಂದರೆ, ರಾಜಿ ಅಭ್ಯರ್ಥಿಯಾಗಿ ಹರೀಶ್ ಬೋಪಣ್ಣರವರಿಗೆ ಅವಕಾಶ ಕಲ್ಪಿಸುವುದು ಸೀತಾರಾಂರವರ ಇಂಗಿತವಾಗಿದೆ.


ಈ ಮಧ್ಯೆ ಕೊಡವ ಜನಾಂಗದವರು ಕೂಡ ಸಭೆಯೊಂದನ್ನು ನಡೆಸಿದ್ದಾರೆ. ಅಲ್ಲಿ ಕೊಡವ ಜನಾಂಗಕ್ಕೆ ಸೇರಿದ ವ್ಯಕ್ತಿಯ ಹೆಸರು ಪ್ರಸ್ತಾಪವಾದರೆ, ಅವರಿಗೆ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಅವರು ಬಂದಿದ್ದಾರೆ. ಹಾಗಾಗಿ ಅರುಣ್ ಮಾಚಯ್ಯ, ಬಿ.ಟಿ.ಪ್ರದೀಪ್, ಜೆ.ಎ.ಕರುಂಬಯ್ಯ ಯಾರಾದರೂ ಅವರಿಗೆ ಬೆಂಬಲಿಸಬೇಕು. ಆದರೆ ಜಿಲ್ಲಾ ಪಂಚಾಯತ್ ಸದಸ್ಯೆಯಾಗಿರುವ ಸರಿತಾ ಪೂಣಚ್ಚ ಹಾಗೂ ಎ.ಐ.ಟಿ.ಯು.ಸಿ.ಯ ರಾಜ್ಯ ಉಪಾಧ್ಯಕ್ಷ ನಾಪಂಡ ಮುತ್ತಪ್ಪರವರ ಹೆಸರು ಪ್ರಸ್ತಾಪವಾದರೆ ಅದನ್ನು ವಿರೋಧಿಸಬೇಕು. ಏಕೆಂದರೆ ಇವರಲ್ಲಿ ಯಾರು ಅಧ್ಯಕ್ಷರಾದರೂ ಅವರು ಎ.ಕೆ.ಸುಬ್ಬಯ್ಯನವರ ಬೆಂಬಲಿಗರಾಗುತ್ತಾರೆ. ಸುಬ್ಬಯ್ಯನವರದು ಮೇಲುಗೈಯಾಗುತ್ತದೆ ಮತ್ತು ಕೊಡವ ಜನಾಂಗಕ್ಕೆ ಇವರಿಂದ ಯಾವುದೇ ಪ್ರಯೋಜನವಿಲ್ಲ ಎಂಬ ವಿಚಾರ ಚರ್ಚೆಗೆ ಬಂದಿದೆ. ಯಾವುದೇ ಸಂದರ್ಭದಲ್ಲಿಯೂ ವೀಣಾ ಅಚ್ಚಯ್ಯ ಹಾಗೂ ಕಾಂಗ್ರೆಸಿಗರಲ್ಲದಿದ್ದರೂ, ಕೊಡವ ಜನಾಂಗದ ಪರವಾಗಿರುವ ಎಂ.ಸಿ.ನಾಣಯ್ಯನವರಿಗೆ ಕೊಡವ ಜನಾಂಗದವರು ಬೆಂಬಲವನ್ನು ನೀಡಬೇಕು ಎಂಬ ಚರ್ಚೆ ಆಗಿದೆ. ಈ ನಡುವೆ ಮತ್ತೊಬ್ಬ ಜಿಲ್ಲಾ ಪಂಚಾಯತ್ ಸದಸ್ಯ ಶಿವು ಮಾದಪ್ಪರವರ ಹೆಸರು ಕೂಡ ಪ್ರಸ್ತಾಪವಾಗಿದ್ದು ಒಂದು ವೇಳೆ ಡಿ.ಸಿ.ಸಿ. ಸ್ಥಾನ ಸಿಗದಿದ್ದರೆ, ವಿಧಾನಸಭೆಗೆ ಅಭ್ಯರ್ಥಿ ಎಂದು ಬಿಂಬಿಸಲಾಗುತ್ತಿದೆ.


ಮತ್ತೊಂದು ಕಡೆ ಕೊಡವೇತರರು ಎಂದು ಹೇಳಿಕೊಂಡು ಗೌಡ ಜನಾಂಗದವರು ಮತ್ತು ಇತರರು ಬಹಿರಂಗವಾಗಿ ಸಭೆ ನಡೆಸಿದ್ದಾರೆ. ಕೊಡವೇತರರಿಗೆ ಬಹಳ ಸಮಯದಿಂದ ಅವಕಾಶ ಸಿಕ್ಕಿಲ್ಲ, ಹಾಗಾಗಿ ಅವರಿಗೆ ಅವಕಾಶವನ್ನು ನೀಡಬೇಕು ಎಂದು ಡಿ.ಸಿ.ಸಿ.ಗೆ ಮತ್ತು ಕೆ.ಪಿ.ಸಿ.ಸಿ.ಗೆ ಮನವಿ ಮಾಡಲು ನಿರ್ಧರಿಸಿದ್ದಾರೆ. ಒಂದು ವೇಳೆ ಈ ಬಾರಿ ಕೊಡವೇತರರಿಗೆ ಅವಕಾಶ ಸಿಗದಿದ್ದರೆ ಸಾಮೂಹಿಕವಾಗಿ ರಾಜೀನಾಮೆಯನ್ನು ನೀಡುವ ವಿಚಾರವನ್ನು ಕೂಡ ಮುಂದಿಟ್ಟಿದ್ದಾರೆ.

ಬಿ.ಜೆ.ಪಿ.ಯಲ್ಲಿ ಕೊಡವ ಮತ್ತು ಗೌಡ ಜನಾಂಗದ ನಡುವೆ ಎದ್ದಿದ್ದ ಬಹಿರಂಗ ಕಾದಾಟ ಈಗ ಕಾಂಗ್ರೆಸಿನಲ್ಲಿಯೂ ಆರಂಭವಾಗಿದೆ. ಬಿಜೆಪಿಯಲ್ಲಿ ದೇವಟ್‌ಪರಂಬು ವಿಚಾರದಿಂದಾಗಿ ಕೊಡವ ಮತ್ತು ಗೌಡ ಪ್ರತ್ಯೇಕಗೊಂಡಿದ್ದರು. ಆದರೆ ಅಷ್ಟರಲ್ಲಿ ಬಂದ ಟಿಪ್ಪು ಮತ್ತೆ ಅವರಿಬ್ಬರನ್ನು ಹತ್ತಿರ ಸೇರಿಸಿದ್ದ. ಆದರೆ ಕಾಂಗ್ರೆಸಿನಲ್ಲಿ ಟಿಪ್ಪು ಇವರನ್ನು ಬೇರೆ ಮಾಡಿದ್ದಾನೆ. ಜೊತೆಗೆ ಅಲ್ಪಸಂಖ್ಯಾತರನ್ನು ಕೂಡ ಇವರಿಂದ ದೂರವಾಗಿಸಿದ್ದಾನೆ. ಇಂತಹ ವಿಚಿತ್ರ ಬೆಳವಣಿಗೆಗಳು ಕೊಡಗು ಜಿಲ್ಲಾ ಕಾಂಗ್ರೆಸಿನಲ್ಲಿ ನಡೆಯುತ್ತಿವೆ.

ಟಿಪ್ಪು ಈಗ ಕೊಡಗಿನ ಮಟ್ಟಿಗೆ ಕೇವಲ ಸಂಘ ಪರಿವಾರದ ಬಿಜೆಪಿಯ ಅಜೆಂಡಾಗಿ ಉಳಿದಿಲ್ಲ, ಕಾಂಗ್ರೆಸಿನ ಅಜೆಂಡ ಕೂಡ ಆಗಿದ್ದಾನೆ. ಅಲ್ಪಸಂಖ್ಯಾತರು ಕೂಡ ಕಾಂಗ್ರೆಸನ್ನು ತ್ಯಜಿಸುವ ಬೆದರಿಕೆಯನ್ನು ಹಾಕಿದ್ದು ಡಿಸೆಂಬರ್ ತಿಂಗಳಿನಲ್ಲಿ ಬಹಿರಂಗವಾಗಿ ಮುಸ್ಲಿಮರು ಸಭೆಯನ್ನು ನಡೆಸುವ ತಯಾರಿಯನ್ನು ಮಾಡುತ್ತಿದ್ದಾರೆ.

■ ಬಿ.ಎನ್.ಮನುಶೆಣೈ





ನೋಟು ರದ್ದತಿ: ದೂರಗಾಮಿ ಹವಣಿಕೆ


ಪ್ರಧಾನಿ ಮೋದಿ ಅವರು ಇತ್ತೀಚಿನ ದಶಕಗಳ ಅಭೂತಪೂರ್ವ ಕ್ರಮ ಕೈಗೊಂಡಿದ್ದಾರೆ. ಕಾಳಧನವನ್ನು ನಿಯಂತ್ರಿಸಲು ರೂ. 500 ಸಾವಿರ ನೋಟನ್ನು ರದ್ದು ಮಾಡಿದ್ದಾರೆ. ಅದರ ನಂತರದ ಉಪಕ್ರಮಗಳು ತಂದಿರುವ ರಗಳೆಗಳು ನಿತ್ಯ ವರದಿಯಾಗುತ್ತಿವೆ. ಪದೇಪದೇ ನೋಟು ಬದಲಾಯಿಸದಂತೆ ಶಾಯಿ ಗುರುತು ಹಾಕುವುದು, ಬ್ಯಾಂಕುಗಳ ಎದುರು ಮೈಲುದ್ದದ ಕ್ಯೂ, ಬ್ಯಾಂಕಿನ ಖಾತೆಯಿಂದಲೇ ಹಣ ತೆಗೆಯಲು ಇರುವ ನಿರ್ಬಂಧಗಳು, ಎಟಿಎಮ್‌ಗಳು ಬಂದ್ ಆಗಿರುವುದು, 2 ಸಾವಿರ ರೂ.ಗಳ ಹೊಸ ನೋಟು ಪಡೆದು ಅದಕ್ಕೆ ಚಿಲ್ಲರೆ ಸಿಗದೇ ಪರದಾಡುತ್ತಿರುವುದು ಇದೆಲ್ಲಾ ನಿತ್ಯದ ವಿದ್ಯಮಾನಗಳು.

ಇದಕ್ಕೆ ಎರಡು ರೀತಿಯ ಪ್ರತಿಕ್ರಿಯೆಗಳು ಬಂದಿವೆ. ಮೊದಲನೆಯದು ಹೇಗೆ ಬಡವರು ಮತ್ತು ಧರ್ಮಭೀರು ಮಧ್ಯಮವರ್ಗದವರು ಒದ್ದಾಡುತ್ತಿದ್ದಾರೆ; ಸರ್ಕಾರ ಸಂವೇದನಾಶೂನ್ಯವಾಗಿ ಪರಿಸ್ಥಿತಿಯನ್ನು ನಿರ್ವಹಿಸುತ್ತಿದೆ ಎಂಬ ಆಕ್ರೋಶ. ಇನ್ನೊಂದು- ಇದು ದೇಶದ ಕಪ್ಪು ಹಣವನ್ನು ನಿರ್ಮೂಲನಾ ಮಾಡುತ್ತದೆ. ಆದ್ದರಿಂದ ಮೋದಿಯವರು ಹೇಳಿದ ಹಾಗೆ ಸ್ವಲ್ಪ ದಿನ ಕಷ್ಟ ಅನುಭವಿಸಬೇಕು, ಆಮೇಲೆ ಎಲ್ಲಾ ಸರಿಹೋಗುತ್ತದೆ. ದೇಶ ಪೂರಾ ಬಿಳಿ ಆರ್ಥಿಕತೆಯಲ್ಲಿ ನಡೆಯುತ್ತದೆ ಎಂಬ ಆಶಾವಾದ. ಈ ಒದ್ದಾಟವನ್ನೂ ರಾಷ್ಟ್ರಭಕ್ತಿಯ ಸಂಕೇತ ಎಂದು ನಾಯಕರೊಬ್ಬರು ಹೇಳಿದ್ದಾರೆ!! ರಾಷ್ಟ್ರಭಕ್ತಿಯ ಸಾಬೀತಿಗೆ ಇದು ಹೊಸ ಸೇರ್ಪಡೆ. ಅದಿರಲಿ.

ಇದು ದೀರ್ಘಕಾಲೀನ ಆಟ. ಈ ಒಂದೆರಡು ತಿಂಗಳಿನಲ್ಲಿ ಏನಾಗುತ್ತದೆ ಎಂಬುದನ್ನು ನೋಡೋಣ.

1. ಭಾರತದ ಒಟ್ಟು ಚಲಾವಣೆಯಲ್ಲಿರುವ ಸುಮಾರು 17 ಲಕ್ಷ ಕೋಟಿ ವಹಿವಾಟಿನಲ್ಲಿ ಈ ದೊಡ್ಡ ಮೌಲ್ಯದ ನೋಟುಗಳ ಪ್ರಮಾಣ ಶೇ. 84. ಹೆಚ್ಚಿನ ಎಲ್ಲಾ ಅರ್ಥಶಾಸ್ತ್ರಜ್ಞರ ಪ್ರಕಾರ ಬೃಹತ್ ಮೌಲ್ಯದ ನೋಟುಗಳೇ ಕಪ್ಪು ಹಣದ ಬೇರು. ಆದ್ದರಿಂದ ಇದನ್ನು ಬದಲಾಯಿಸುವ ಕ್ರಮ ಜಾರಿಯಲ್ಲಿದೆ. ಎಷ್ಟು ವರ್ಷಕ್ಕೊಮ್ಮೆ ಅನ್ನುವುದು ಆ ದೇಶದ ಆರ್ಥಿಕತೆಯ ಮೇಲೆ ನಿಂತಿದೆ.

2. ಈ ನೋಟು ಬದಲಾವಣೆ ಕಾರ್ಪೋರೇಟು ತಿಮಿಂಗಿಲಗಳ ರೋಮವನ್ನೂ ಅಲ್ಲಾಡಿಸುವುದಿಲ್ಲ, ಯಾಕೆಂದರೆ ಅವರೇನು ನಗದು ಚೀಲ ಹಿಡಿದು ವ್ಯವಹಾರ ಮಾಡುವವರಲ್ಲ, ಅವರ ಆಟಗಳೆಲ್ಲಾ ಅಂತರಾಷ್ಟ್ರೀಯ. ಇವರೆಲ್ಲಾ ಶೆಲ್ ಕಂಪೆನಿಗಳ ಮೂಲಕ, ಅಂಡರ್ ಇನವಾಯ್ಸಿಂಗ್ ತಂತ್ರದ ಮೂಲಕ, ಆಮದು ರಫ್ತು ಖೊಟ್ಟಿ ದಾಖಲೆಗಳ ಮೂಲಕ ವ್ಯವಹಾರ ಮಾಡುತ್ತಾರೆ. ಇಲ್ಲೇ ತಮ್ಮದೇ ನಿಯಂತ್ರಣದಲ್ಲಿರುವ ಅಸಂಖ್ಯಾತ ಪುಡಿ ಕಂಪೆನಿಗಳ ಮೂಲಕ ಹಣ ವರ್ಗಾಯಿಸುತ್ತಾ ಒಂದು ಆರ್ಥಿಕ ಜಾಲ ನಿರ್ಮಿಸಿಕೊಂಡಿದ್ದಾರೆ. ತೆರಿಗೆ ಅಧಿಕಾರಿಗಳು ಇದರ ಬೆನ್ನು ಹತ್ತಿದರೂ ಇದನ್ನು ಸಿದ್ಧ ಪಡಿಸಲು ವರ್ಷಾನುಗಟ್ಟಲೆ ಬೇಕು. ಆಮೇಲೆ ಪ್ರಕರಣ ದಾಖಲು ಮಾಡಿ.. ಅಯ್ಯಪ್ಪಾ ಇದೊಂದು ಆಟ ಅಷ್ಟೇ. ಈ ಜಾಲದಲ್ಲಿ ದೇಶೀಯವಾಗಿ ಕಪ್ಪುಹಣ ಚಾಲ್ತಿಯಲ್ಲಿರುವುದು ಕಡಿಮೆ, ದೋಸೆ ಹಿಟ್ಟು ತೆಗೆದ ಹಾಗೆ ಅಷ್ಟಷ್ಟೇ ಮೊತ್ತ ವಿದೇಶಗಳಲ್ಲಿ ಕೂತಿರುತ್ತದೆ. ಇದನ್ನು ತರುವ ಯಾವ ಅಸ್ತ್ರವೂ ಮೋದಿಯವರಲ್ಲಿಲ್ಲ, ಅವರ ಕಾರ್ಪೋರೇಟ್ ಒಡನಾಟ ನೋಡಿದರೆ, ಅವರಿಗೆ ಮನಸೂ ಇಲ್ಲ; ಇಚ್ಛಾಶಕ್ತಿಯೂ ಇಲ್ಲ!! ಈ ದೇಶದ 57 ಕಂಪೆನಿಗಳು 5.3 ಲಕ್ಷ ಕೋಟಿ ಸಾಲ ಪಡೆದಿವೆ, ಶೇ. 53ರಷ್ಟು ಸಂಪತ್ತು ಇವರ ಕೈಯಲ್ಲಿದೆ ಎಂಬುದನ್ನು ನೆನಪಿಸಿಕೊಂಡರೆ ಈ ನೋಟು ರದ್ಧತಿ ಕ್ರಮ ಮೂಲತಃ ಗುಂಯ್ ಗುಡುವ ಸೊಳ್ಳೆಗಳನ್ನು ಬಲಿ ಹಾಕುವ ತಂತ್ರದಂತಿದೆ.



3. ಈಗ ಈ ನೋಟುಗಳನ್ನು ಬದಲಾಯಿಸಬೇಕಷ್ಟೇ. ಎಷ್ಟಾದರೂ ಬದಲಾಯಿಸಬಹುದು ಎಂದರೆ ಈ ಕ್ರಮ ಶಕ್ತಿ ಕಳಕೊಳ್ಳುತ್ತದೆ. ಆದ್ದರಿಂದ ಮಿತಿ ಅನಿವಾರ್ಯ. ಆದರೆ ಸರ್ಕಾರಕ್ಕೆ ಈ ಪರ್ಯಾಯ ವ್ಯವಸ್ಥೆಯ ಪ್ಲಾನಿಂಗ್ ಹೇಗಿದೆ? ಇತ್ತೀಚಿನ ಲೆಕ್ಕದ ಪ್ರಕಾರ ರದ್ದಾದ ನೋಟುಗಳಿಗೆ ಬದಲೀ ನೋಟು ಮುದ್ರಿಸಿ ತರಲು ಕನಿಷ್ಠ 116 ದಿನ ಬೇಕಾಗಬಹುದು..!! ಅಂದರೆ ಬಜೆಟ್ ಮಂಡನೆವರೆಗೂ ಈ ಪರ್ಯಾಯ ಕಷ್ಟ! ಇದರರ್ಥ; ರದ್ದು ಮಾಡುವಾಗ ಹೊಸ ನೋಟುಗಳನ್ನು ಮುದ್ರಿಸಿ ತರುವ ಕ್ಷಮತೆಯ ಲೆಕ್ಕಾಚಾರದಲ್ಲಿ ಸರ್ಕಾರ ಎಡವಿದೆ. ಅದೇನು ಶಿವಕಾಶಿಯ ಪ್ರೆಸ್‌ನಲ್ಲಿ ಮುದ್ರಿಸುವ ವಸ್ತುವಲ್ಲವಲ್ಲ!!

4. ಪ್ರತೀ ನೋಟು ಯಾರಲ್ಲಿತ್ತು ಎಂಬುದನ್ನು ಪತ್ತೆ ಮಾಡಲು ಈಗ ಆಧಾರ್ ಪಾನ್‌ಕಾರ್ಡ್ ಮುಂತಾದ ಆದುನಿಕ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಇದೆ. ಇದನ್ನು ಸ್ಥೂಲವಾಗಿ ನಿರ್ವಹಣಾ ಮಾಹಿತಿ ವ್ಯವಸ್ಥೆ (MIS) ಎಂದು ಕರೆಯುತ್ತಾರೆ. ಆದರೆ ಈ ದಾಖಲೆಗಳು ಸಿಕ್ಕಿದ ಮೇಲೆ ಮೋದಿ ಏನು ಮಾಡುತ್ತಾರೆ ಎಂಬುದು ಪ್ರಶ್ನೆ. ಆದರೆ ಇದು ಅರ್ಥ ಪಡೆದುಕೊಳ್ಳುವುದು ಇದನ್ನು ಆಧರಿಸಿ ಕ್ರಮ ಕೈಗೊಂಡಾಗ.

5. ಸದ್ಯಕ್ಕೆ ಇದು ಎಲ್ಲಿ ಪರಿಣಾಮ ಬೀರುತ್ತದೆ ಎಂಬುದನ್ನು ನೋಡೋಣ. ಭಾರತದಲ್ಲಿರುವ ಕಪ್ಪುಹಣದಲ್ಲಿ ಒಂದು ಅಂದಾಜು ಪ್ರಕಾರ ಕೇವಲ ಶೇ. 20ರಷ್ಟು ಜಿಲ್ಲಾ, ತಾಲೂಕು ಮಟ್ಟದಲ್ಲಿದೆ. ಆದರೆ ಈ ವಹಿವಾಟು ಸುಮಾರು ಶೇ.50ಕ್ಕೂ ಜನರನ್ನು ಪ್ರಭಾವಿಸುತ್ತಿದೆ. ಇವರೆಲ್ಲಾ ಯಾರು ಅಂದರೆ ಮಂಡಿ ವ್ಯಾಪಾರಿಗಳು, ತರಕಾರಿ ಹೋಲ್‌ಸೇಲ್ ವ್ಯಾಪಾರಿಗಳು, ಗುತ್ತಿಗೆದಾರರು, ವೈನ್ ಅಂಗಡಿಯವರು, ರಿಯಲ್ ಎಸ್ಟೇಟ್ ಕುಳಗಳು- ಹೀಗೆ ಪಟ್ಟಿ ಸಾಗುತ್ತದೆ. ಸ್ಥಳೀಯ ರಾಜಕಾರಣದಿಂದ ಹಿಡಿದು ಇಡೀ ಭಾಜಪದ ಬಹುದೊಡ್ಡ ಬೆಂಬಲಿಗರಿರುವುದೇ ಪೆಟ್ಟಿ ಟ್ರೇಡರ್ಸ್ ಎಂದು ಕರೆಯುವ ಈ ವರ್ಗದಲ್ಲಿ. ಹಾಗಿದ್ದರೆ ಮೋದಿ ಕೂತ ಕೊಂಬೆಯನ್ನು ಕಡಿವ ಕೆಲಸಕ್ಕೆ ಕೈಹಾಕಿದರೇ? ಹಾಗೇನಿಲ್ಲ! ಈ ವರ್ಗ ಪಾರಾಗುವ ಸರಳ ತಂತ್ರೋಪಾಯಗಳು ಈಗಿರುವ ನಿಯಮ ನಿಬಂಧನೆಗಳ ಸಡಿಲ ಕಿಂಡಿಗಳಲ್ಲೇ ಇರುವ ಕಾರಣ ಇವರು ಪಾರಾಗುತ್ತಾರೆ. ಆದ್ದರಿಂದಲೇ ರೆಡ್ಡಿಯಂಥಾ ದುಷ್ಟ ಮೇಲ್ನೋಟಕ್ಕೆ ಮೋದಿಗೇ ಸವಾಲು ಎಸೆವಂತೆ ತನ್ನ ಮಗಳ ಮದುವೆ ಮಾಡಿದ್ದು.

6. ಇವರೆಲ್ಲಾ ನಿತ್ಯ ನಮ್ಮ ಬಡವರನ್ನೂ ಕೆಳ ಮಧ್ಯಮ ವರ್ಗದವರನ್ನು ಯಾಮಾರಿಸುತ್ತಾ ಅತ್ತ ಸರ್ಕಾರೀ ಹಣವನ್ನು ಕಬಳಿಸುತ್ತಾ ಜೇಬು ತುಂಬಿಸಿಕೊಂಡವರು. ಕಾಲಕಾಲದ ಚುನಾವಣಾ ರಾಜಕೀಯಕ್ಕೆ ಒದಗಿ ಬರುವವರು ಇವರೇ. ಮೋದಿ ಇವರ ಜುಟ್ಟು ಹಿಡಿದರೆ ಅವರ ಮುಷ್ಠಿ ಬಡ ರೈತ, ಕಾರ್ಮಿಕ, ಮಹಿಳೆಯರ ಕತ್ತು ಹಿಡಿದಿರುತ್ತದೆ. ಅರ್ಥಾತ್ ಅವರೆಲ್ಲಾ ಬ್ಯಾಂಕುಗಳ ಎದುರು ಈಗ ಕ್ಯೂ ನಿಂತಿಲ್ಲ; ನಿಲ್ಲುವುದೂ ಇಲ್ಲ, ಆರಂಭದ ಧಾಂ ಧೂಂ ಕಳೆದ ಮೇಲೆ ವ್ಯವಸ್ಥಿತವಾಗಿ ಈ ಮೊತ್ತವನ್ನು ಬಿಳಿಗೊಳಿಸುತ್ತಾ ಹೋಗುತ್ತಾರೆ. ಈಗಾಗಲೇ ಜನಧನ್ ಖಾತೆಗಳ ಮೂಲಕ ಬಿಳಿಗೊಳಿಸುವ ಪ್ರಕ್ರಿಯೆ ಶುರುವಾಗಿದೆ ಎಂಬ ವರದಿಗಳಿವೆ. ಇನ್ನೊಂದೆಡೆ ದಿಢೀರನೆ ನಮ್ಮ ಸಾಲ ಮಾಡಿದ ರೈತರೆಲ್ಲಾ ಅವಧಿಗೆ ಮುಂಚೆಯೇ ಅಸಲು ಪಾವತಿ ಮಾಡಿ ಬಡ್ಡಿ ವಿನಾಯಿತಿಗೆ ಭಾಜನರಾಗುವ ಸಾಧ್ಯತೆ ಇದೆ. (ಈ ಸಹಕಾರೀ ಬ್ಯಾಂಕುಗಳಿಗೆ ಹಳೇ ನೋಟು ತೆಗೆದುಕೊಳ್ಳುವ ಲೈಸನ್ಸ್ ಇಲ್ಲ, ಆದರೆ ಬ್ಯಾಂಕು ಸಾಲಗಳಲ್ಲಿ ಇದು ಸಾಧ್ಯ. ಬ್ಯಾಂಕು ಖಾತೆಗೆ ಜಮಾ ಮಾಡಿ ಅಲ್ಲಿಂದ ಸಹಕಾರೀ ಬ್ಯಾಂಕಿಗೆ ವರ್ಗಾಯಿಸ ಬಹುದು!)

7. ಅರ್ಥಾತ್ ಇಲ್ಲೂ ಸಹಕಾರೀ ರಂಗ ಮುರಿದು ಬಿದ್ದು, ಬ್ಯಾಂಕು ಸಾಲಗಳು ಮರುಪಾವತಿಯಾಗಿ ಅವು ಫಳಫಳ ಹೊಳೆಯತೊಡಗುತ್ತವೆ.

8. ಆದರೆ ಈ ಗ್ರಾಮೀಣ/ಸಣ್ಣ ಪಟ್ಟಣಗಳ ಕುಳಗಳು ಆದಾಯ ತೆರಿಗೆ ಇಲಾಖೆಯಿಂದ ಪ್ರೇಮಪತ್ರ ಬರಬಹುದು ಎಂಬ ಶಂಕೆಯಿಂದ ತಮ್ಮ ಆಟದ ನಿಯಮ ಬದಲಾಯಿಸಬಹುದು. ಈ ಕಾರಣಕ್ಕೆ ಗ್ರಾಮೀಣ ಕೈಸಾಲಕ್ಕೆ ಕುತ್ತು ಬರುವುದು ಖಚಿತ. ಗ್ರಾಮೀಣ ಸಾಲದ ಶೇ. 55ರಷ್ಟು ಕೈಸಾಲವೇ. ಅದೂ ಶೇ.36-60 ರ ದರದಲ್ಲಿ. ಮುಂದಿನ ಹಂಗಾಮಿನಲ್ಲಿ ರೈತರಿಗೆ ಕಾರ್ಮಿಕರಿಗೆ ಈ



ಸಾಲ ಬತ್ತುವ ಲಕ್ಷಣ ಇದೆ. ಈ ಬಡ್ಡಿ ಕುಳಗಳ ಬಡವರನ್ನು ಬಿಡುಗಡೆಗೊಳಿಸುವ ಸುವರ್ಣಾವಕಾಶ ಸರ್ಕಾರಕ್ಕಿದೆ. ಅದಕ್ಕೆ ಸಾಂಸ್ಥಿಕ ಸಾಲದ ಸಂರಚನೆಯ ಹೆಚ್ಚಬೇಕು. ಆದರೆ ನಮ್ಮ ಸರ್ಕಾರದ ವರ್ತನೆ ನೋಡಿ ಇದನ್ನು ಮಾಡುವ ಇಚ್ಛಾಶಕ್ತಿ ಸರ್ಕಾರದಲ್ಲಿ ಕಾಣು ಅಂದರೆ ಮತ್ತೆ ರೈತರು ಇನ್ನಷ್ಟು ಸಂಕೀರ್ಣ ಕೈಸಾ ಬೆಂಕಿಗೆ ಬೀಳುತ್ತಾರೆ. ಸ್ಥಳೀಯವಾಗಿ ನಮ್ಮ ಗ್ರಾಮಾಂತ ಮತ್ತು ನಗರಗಳ ಬಡವರು ಇನ್ನಷ್ಟು ಬಿಕ್ಕ ಎದುರಿಸಬೇಕಾಗುತ್ತದೆ.

9. ಈ ಕ್ರಮದ ಹಿಂದಿರುವ ದೂರಗಾಮೀ ಗ ಇಷ್ಟೇ. ಸರ್ಕಾರ ಮತ್ತು ಕಾರ್ಪೋರೇಟ್ ಗಮನಕ್ಕೆ ಬಾರದ ನಡೆಯುತ್ತಿರುವ informal ವಹಿವಾಟನ್ನು ಸಂಪೂ ನಿಗ್ರಹಿಸಿ ಇವರನ್ನೆಲ್ಲಾ ಬ್ಯಾಂಕು ಮುಂತಾದ ಸಾಂಸ್ಥಿಕ ವೇದಿ ತಂದು ನಗದುರಹಿತ ವಹಿವಾಟನ್ನು ಹೆಚ್ಚಿಸುವ ಪ್ರಯ ಇದು. ಜಗತ್ತಿನಾದ್ಯಂತ ಈ ನಗದುರಹಿತ ವಹಿವಾ ಸೃಷ್ಟಿಯಾಗಿದ್ದೇ ಕಾರ್ಪೋರೇಟ್ ವಹಿವಾಟಿಗೆ ಜನಸಾಮ ರನ್ನು ಒಳಪಡಿಸಲು. ಎರಡನೆಯದು, ಇಡೀ ದೇ ಒಬ್ಬೊಬ್ಬನ ವ್ಯವಹಾರದ ದಾಖಲೆಯೂ ದಾಖಲಾಗುವ ಎಲ್ಲೆಲ್ಲಿ ಅಗತ್ಯವಿದೆಯೊ ಅಲ್ಲಿ ಮೋದಿಯವರು ಆ ವ್ಯಕ್ತಿಗಳನ್ನು ನಿಯಂತ್ರಿಸಬಹುದು. ದೊಡ್ಡಣ್ಣನ ಸರ್ವಾಧಿಕ ನಿಯಂತ್ರಣ ಮತ್ತು ಕಾರ್ಪೋರೇಟ್ ಮಾರುಕಟ್ಟೆಯ ವಿಸ್ತ ಇವೆರಡೇ ಇದರ ಮುಖ್ಯ ಅಜೆಂಡಾ.


10. ಆದರೆ ಇದರಿಂದಾಗಿ ಸರ್ಕಾರಕ್ಕೆ ಲಕ್ಷ ಕೋ ಯಷ್ಟು ಆದಾಯ ಹರಿದು ಬರಬಹುದು. ಈಗಾಗ ತೈಲ ಬೆಲೆ ಇಳಿಕೆಯಿಂದ ಮೋದಿ ಲಕ್ಷ ಕೋಟಿ ರೂ.ಗಳ ಉಳಿಸಿದ್ದಾರೆ. ಅಂದರೆ 2018ರ ಬಜೆಟ್ ವೇ ಮೋದಿಯವರ ಬಳಿ ಏನಿಲ್ಲವೆಂದರೂ ಎರಡು ಕೋಟಿಯಷ್ಟು ಅತಿರಿಕ್ತ ಧನರಾಶಿ ಇರುತ್ತದೆ. ಆಗ ದಿಢೀ ರೈತರ/ಸ್ವಸಹಾಯ ಸಂಘಗಳ ಮಹಿಳೆಯರ ಸಾಲ ಮ ಘೋಷಿಸುವುದು ಖಚಿತ. ಬೇರೇನೂ ಪವಾ ನಡೆಯದಿದ್ದರೆ, ಮುಂದಿನ ಚುನಾವಣೆ ಗೆಲ್ಲಲು ಮೋ ಮಾರ್ಗ ಸಲೀಸು. ಮುಖೇಡಿ ಕಾಂಗ್ರೆಸ್, ಭ್ರಷ್ಟ ಪ್ರಾಂತೀ ದೊಣೆನಾಯಕರಿಗೆ ಮೋದಿಯ ಈ ರಥಮುಸಲವ ನಿಲ್ಲಿಸುವ ಶಕ್ತಿ ಇಲ್ಲ.


11. ಅಂದರೆ ನಾವು ಇನ್ನಷ್ಟು ದುಷ್ಟ ರಾಜಕೀಯ ವಿರುದ್ಧ ಸೆಣೆಸಲು ಬುತ್ತಿ ಮತ್ತು ಬೂಟು ತಯಾ ಮಾಡಿಕೊಳ್ಳಬೇಕು.

■ ಕೆ.ಪಿ.ಸುರೇ

The real Rs 2000 note.







ಮನುಷ್ಯರು ಕೆಲವೊಮ್ಮೆ ತಮ್ಮ ಹಣೆಬರಹದ ...ಯರಾಗಿರುತ್ತಾರೆ. ಪ್ರೀತಿಯ ಬ್ರೂಟಸ್ ತಪ್ಪು ...ನಕ್ಷತ್ರಗಳದಲ್ಲ, ನಮ್ಮೊಳಗಿದೆ, ಅದು ನಾವು ...ಲ್ವಾರ್‌ಗಳು

- ಶೇಕ್ಸ್‌ಪಿಯರ್

Demonetization

ಹುತ್ತವ ಬಡಿದ ಮೋದಿ




...ಶತಮಾನಗಳ ಕಾಲದ ರಾಜಾಡಳಿತ ಮತ್ತು ಕಲೋನಿ...ಯಲಿಸಂನ ಸರ್ವಾಧಿಕಾರಕ್ಕೆ ಒಗ್ಗಿ ಹೋಗಿದ್ದ ಭಾರತೀಯರನ್ನು ...ವತ್ತರ ದಶಕದ ಕೊನೆಯಲ್ಲಿ ಕೊನೆಗೂ ಸ್ವತಂತ್ರಗೊಳಿಸಿ ...ದೀಯ ಪ್ರಜಾಪ್ರಭುತ್ವಕ್ಕೆ ಪರಿಚಯಿಸಿದ ನಂತರದ ...ವರ್ಷಗಳಲ್ಲಿ ಏಷ್ಯಾ ಉಪಖಂಡದ ಅತಿದೊಡ್ಡ ರಾಷ್ಟ್ರ ...ರತದಲ್ಲಿ ಅನೇಕ ಪಲ್ಲಟಗಳಾಗಿವೆ. ನೆಹ್ರೂವಿಯನ್ ...ಪಿಯಲಿಸಂ ಮತ್ತು ಲಿಬರಲಿಸಂ ಆರ್ಥಿಕ-ಸಾಮಾಜಿಕ ...ಗಳು ಸೃಷ್ಟಿಸಿದ ಹೆಮ್ಮೆ ಮತ್ತು ಭ್ರಮೆಗಳ ಐವತ್ತು ...ತ್ತು ಅರವತ್ತರ ದಶಕಗಳ ಭಾರತದಿಂದ ಹೊರಬಂದ ...ರಿಕರು ಎಪ್ಪತ್ತರ ದಶಕದಲ್ಲಿ ಹಠಾತ್ ಸ್ಥಿತ್ಯಂತರ ...ಂದಿಗೆ, ಅನಿಶ್ಚತೆಗಳೊಂದಿಗೆ ಮುಖಾಮುಖಿಯಾಗ ...ಾಯ್ತು. ಇಂದಿರಾ ಗಾಂಧಿಯವರ 'ಮೇರೇ ದೇಶವಾಸಿ ...ೀ, ಭಾಯಿಯೋ, ಬೆಹನೋ' ಎನ್ನುವ ಸಂಬೋಧನೆ ...ಂದ ಶುರುವಾಗುವ ಭಾಷಣಗಳು ಪ್ರೊಲಿಟರೇಟ್ ...ಗಳಲ್ಲಿ, ಅಲ್ಪಸಂಖ್ಯಾತರಲ್ಲಿ ಸಂಚಲನವನ್ನು ಉಂಟು ...ಡಿದ್ದು ಎಷ್ಟು ನಿಜವೊ ಇದೇ ದನಿಯು ಮಧ್ಯಮ ...ಗಗಳಲ್ಲಿ ಸಿನಿಕತೆಯನ್ನು, ಹತಾಶೆಯನ್ನು ಹುಟ್ಟಿಸಿದ್ದು ...ಟೇ ನಿಜ. ಗರೀಬರಲ್ಲಿ ಈ 'ಗರೀಬಿ ಹಟಾವೋ' ...-ಭ್ರಮೆಗಳ ತಾಕಲಾಟದಂತಿದ್ದರೆ ಮಧ್ಯಮವರ್ಗಕ್ಕೆ ...ಗ್ರೆಸ್ ವಿರೋಧಿ ನಿಲುವಿಗೆ ಆತುಕೊಳ್ಳಲು ಕಾರಣ ...ಯಿತು. ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿಗಳಂತಹ ...ಾಪ್ರಭುತ್ವದ ಆಶಯಗಳು ಕಣ್ಣೆದುರಿಗೇ ಜಾರಿಗೊಳ್ಳ...ಡಗಿದ್ದು ಭಾರತೀಯರನ್ನು ಪುಳಕಗೊಳಿಸತೊಡಗಿತು. ...ಬರಿಗೆ ರೋಟಿ, ಕಪಡಾ, ಮಕಾನ್ ಅನ್ನು ದೊರಕಿಸಿ ...ಡುವ ಕಲ್ಯಾಣ ರಾಜ್ಯ ಕೈಗೆಟುಕುತ್ತದೆ ಎನ್ನುವ ಕಲ್ಪನೆ ...ಟ್ಟಿಸುತ್ತಿದ್ದ ರೋಮಾಂಚನದ ಅನುಭವಗಳನ್ನು ಎಪ್ಪತ್ತರ ...ಸ್ಸಿನಲ್ಲಿರುವ ಪ್ರಜ್ಞಾವಂತರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ...ರೆ ಜೆ.ಪಿ., ಮಧು ಲಿಮಯೆ, ಮಧು ದಂಡವತೆ, ...ರ್ಜ್ ಫರ್ನಾಂಡಿಸ್‌ರಂತಹ ಸೋಷಿಯಲಿಸ್ಟರು ಈ ...ನಪರ ಘೋಷಣೆಗಳ ಅಧಿನಾಯಕಿ ಇಂದಿರಾ ...ಧಿಯವರ ಸರ್ವಾಧಿಕಾರದ ವ್ಯಕ್ತಿತ್ವದ ಕುರಿತಾಗಿ, ಈ ...ೋಜನೆಗಳ ವೋಟ್ ಬ್ಯಾಂಕ್ ರಾಜಕಾರಣದ ಅಪಾಯದ ...ರಿತಾಗಿ ಎಚ್ಚರಿಕೆ ನೀಡುತ್ತಿದ್ದರೆ ಇಂದಿರಾ ಗಾಂಧಿ ...ಪ್ರಿಯತೆಯ ಅಲೆಯಲ್ಲಿ ತೇಲಿ ತೇಲಿ 1971ರಲ್ಲಿ ...ಪೂರ್ಣ ಬಹುಮತದೊಂದಿಗೆ ಅಧಿಕಾರ ಗದ್ದುಗೆ ...ಡಿದಿದ್ದು ಇಂದು ಇತಿಹಾಸ. 1973-1977ರ ಇಂದಿರಾ ...ಧಿಯವರ ಭಟ್ಟಂಗಿತನದ, ಸರ್ವಾಧಿಕಾರದ ಆಡಳಿತವೂ ...ದು ಇತಿಹಾಸ. ಇದರಿಂದ ಭಾರತ ಪಾಠ ಕಲಿತಿದೆಯೇ? ...ತಿದೆ ಆದರೆ ತಪ್ಪಾಗಿ, ದೋಷಪೂರ್ಣವಾಗಿ ಕಲಿತಿದೆ.

...ಕೆಂದರೆ ಮತ್ತೆ 2014ರಲ್ಲಿ ಭಾರತೀಯರು ನರೇಂದ್ರ ...ೋದಿಯಂತಹ ಮತ್ತೊಬ್ಬ ಸರ್ವಾಧಿಕಾರಿಯನ್ನು ತಮ್ಮ ...ಯಕನನ್ನಾಗಿ ಆರಿಸಿದ್ದಾರೆ. 2014ರ ಪೂರ್ವದಲ್ಲಿ ಮತ್ತು ...ದ ಎರಡು ವರ್ಷಗಳಲ್ಲಿ ಪ್ರಧಾನಿ ಮೋದಿಯವರ ...ೇರೇ ದೇಶವಾಸಿಯೋ, ಭಾಯಿಯೋ, ಬೆಹನೋ' ...ನ್ನುವ ಸಂಬೋಧನೆಯಿಂದ ಶುರುವಾಗುವ ಭಾಷಣಗಳು ...ತ್ತೆ ಮತ್ತೆ ಇಲ್ಲಿನ ಮಧ್ಯಮವರ್ಗಗಳಲ್ಲಿ ಪ್ರತ್ಯಕ್ಷವಾಗಿ. ...ಗೂ ಹದಿಹರೆಯದವರಲ್ಲಿ ಅಪ್ರತ್ಯಕ್ಷವಾಗಿ ಪುಳಕ ...ಟ್ಟಿಸುತ್ತಿದೆ. ಜಾಗತೀಕರಣದ, ಮುಕ್ತ ಮಾರುಕಟ್ಟೆಯಲ್ಲಿ ...ವಿಡುತ್ತಿರುವ ಇಂಡಿಯಾದಲ್ಲಿ ಇಂದು 'ವೆಲ್‌ಫೇರ್ ...ಟ್'ನ ಅರ್ಥ ಮತ್ತು ತಾತ್ವಿಕತೆ ಸಂಪೂರ್ಣ ತಿರುಗು ...ುರುಗಾಗಿದೆ. ಮನಮೋಹನ ಸಿಂಗ್ ಅವರಿಂದ ...ರಂಭವಾಗಿ ಇಂದು ಮೋದಿಯವರ ಮಾರ್ವಾಡಿ ಆರ್ಥಿಕ ...ತಿಗಳಿಗೆ ಸಂಪೂರ್ಣ ಬಲಿಯಾಗಿರುವ ಇಂಡಿಯಾದ ...ರ್ಥಿಕ ನೀತಿ ಇಂದು ಬಕಾಸುರ ಬಂಡವಾಳಶಾಹಿಗಳ, ...ಾರ್ಪೊರೇಟ್ ಕುಟುಂಬಗಳ ಬೋರ್ಡ್ ರೂಮುಗಳಾಗಿರು...ದು ನಮ್ಮ ಕಣ್ಣೆದುರಿಗಿದೆ. ಜಾಗತಿಕ ಮಟ್ಟದಲ್ಲಿಯೇ ...ಜಕೀಯ-ಆರ್ಥಿಕ ವ್ಯವಸ್ಥೆಯು ಬಲಪಂಥೀಯ ...ಂಡವಾಳಶಾಹಿಯ ತೆಕ್ಕೆಗೆ (ಅಮೆರಿಕಾ, ಬ್ರೆಜಿಲ್, ...ರ್ಜೆಂಟೀನಾ, ಜರ್ಮನಿ) ವಶವಾಗಿರುವಾಗ ಈ ...ಾಗತೀಕರಣದ ವಿಶ್ವದಲ್ಲಿ ಒಬ್ಬ ಪ್ರಮುಖ ಪಾತ್ರಧಾರಿಯಾದ ...ಡಿಯಾ ಸಹ ಇದರಿಂದ ಹೊರತಾಗಿಲ್ಲ, ಭಾರತವೂ ...ಪೂರ್ಣ ಬಲಪಂಥೀಯ ಬಕಾಸುರ ಬಂಡವಾಳಶಾಹಿಯ ಬಲಿಯಲ್ಲಿದೆ. ತೊಂಬತ್ತರ ದಶಕದ ನಂತರ ವಿಶ್ವ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಕರೆಯಲ್ಪಡುವ ಭಾರತ ಜಾಗತೀಕರಣದ ನೆಪದಲ್ಲಿ ಕಲೋನಿಯಲಿಸಂನೊಂದಿಗೆ ಸಹಭಾಗಿತ್ವ ಪ್ರದರ್ಶಿಸುವ ಬಂಡವಾಳಶಾಹಿಗಳ ಆಡಳಿತಕ್ಕೆ ಶರಣಾಗಿದ್ದು ಮತ್ತು ಅದರ ದುಷ್ಪರಿಣಾಮಗಳು ಇಂದು ನಮ್ಮ ಕಣ್ಣ ಮುಂದಿವೆ. ಇದು ಇಂದಿನ ವಾಸ್ತವ. ಸದ್ಯಕ್ಕಂತೂ ಸಮಾಜವಾದ, ರಾಷ್ಟ್ರೀಕರಣ ಎನ್ನುವ ಚಿಂತನೆಗಳಿರಲಿ ಆ ನುಡಿಕಟ್ಟುಗಳೇ ಹಾಸ್ಯಾಸ್ಪದವಾಗಿವೆ ಎನ್ನುವುದೂ ಸಹ ವಾಸ್ತವ. ಇಂದು ಯಾವುದೇ ಬಗೆಯ ಆರ್ಥಿಕ-ಸಾಮಾಜಿಕ ಚಿಂತನೆಗಳು, ಕಾರ್ಯಯೋಜನೆಗಳು ಈ ಬಲಪಂಥೀಯ ಬಕಾಸುರ ಬಂಡವಾಳಶಾಹಿಯ ಹಿತಾಸಕ್ತಿಯ ರೂಪದಲ್ಲಿ ಮಗ್ಗುಲ ಮುಳ್ಳಾಗಿ ನಮ್ಮ ದೈನಂದಿನ ಬದುಕಲ್ಲಿ ಪ್ರತಿ ಕ್ಷಣ ಚುಚ್ಚುತ್ತಿರುತ್ತದೆ. ಆದರೆ ಇದನ್ನು ನಾವು 1991ರಲ್ಲಿಯೇ ಆಯ್ಕೆ ಮಾಡಿಕೊಂಡಿದ್ದೇವೆ. 'ಆಯ್ಕೆ ಮಾಡಿಕೊಂಡಿದ್ದೀರಿ, ಅಳುತ್ತೀರಿ, ಸಾಯುತ್ತೀರಿ.'

ಇಂದು ಬಂಡವಾಳ ಮತ್ತೆ ಚರ್ಚೆಗೆ ಬರುತ್ತಿದೆ. ಬಂಡವಾಳಕ್ಕೆ ಸಂಬಂಧಿಸಿದ ಕೆಲವು ಮಾಹಿತಿಯನ್ನು ಗಮನಿಸಿ. ಇಂದು ಶ್ರೀಮಂತ ಭಾರತೀಯರ ಪಟ್ಟಿಯ ಅಂಕಿ ಅಂಶಗಳ ಪ್ರಕಾರ 78 ಭಾರತೀಯ ಬಂಡವಾಳ ಶಾಹಿಗಳು 1000 ಮಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ಆಸ್ತಿಯನ್ನು ಹೊಂದಿದ್ದಾರೆ. ಸುಮಾರು 2.5 ಲಕ್ಷ ಭಾರತೀಯ ಬಂಡವಾಳಶಾಹಿಗಳು 1 ಮಿಲಿಯನ್ ಡಾಲರ್‌ಗಿಂತಲೂ ಅಧಿಕ ಆಸ್ತಿಯನ್ನು ಹೊಂದಿದ್ದಾರೆ. 2000 ದಿಂದೀಚೆಗೆ ಶೇಕಡಾ 10 ರಷ್ಟು ಬಂಡವಾಳಶಾಹಿಗಳು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಸೂಪರ್ ಶ್ರೀಮಂತರು ಎಂದು ಕರೆಯಲ್ಪಡುವ ಶೇಕಡಾ 1 ಪ್ರಮಾಣದ ಬಂಡವಾಳ ಶಾಹಿಗಳು ಇಂಡಿಯಾದ ಶೇಕಡಾ 50 ರಷ್ಟು ಪ್ರಮಾಣದ ಆಸ್ತಿಯ ಮಾಲೀಕರಾಗಿದ್ದಾರೆ. ಅತಿ ಶ್ರೀಮಂತರು ಎಂದು ಕರೆಯಲ್ಪಡುವ ಒಟ್ಟು ಶೇಕಡಾ 5 ಪ್ರಮಾಣದ ಬಂಡವಾಳಶಾಹಿಗಳು ಇಂಡಿಯಾದ ಶೇಕಡಾ 68 ರಷ್ಟು ಪ್ರಮಾಣದ ಆಸ್ತಿಯ ಮಾಲೀಕರಾಗಿದ್ದಾರೆ. ಅಂದರೆ ಭಾರತೀಯ ಸಮಾಜದ ಮೇಲ್ಪದರದ ಶೇಕಡಾ 10 ಪ್ರಮಾಣದ ಬಂಡವಾಳಶಾಹಿಗಳು ಇಲ್ಲಿನ ಶೇಕಡಾ 75 ಪ್ರಮಾಣದ ಆಸ್ತಿಯನ್ನು ಹೊಂದಿದ್ದಾರೆ. ಈ ಪಿರಮಿಡ್‌ನ ಮತ್ತೊಂದು ತುದಿಯಲ್ಲಿರುವ ಶೇಕಡಾ 50 ಪ್ರಮಾಣಕ್ಕಿಂತಲೂ ಅಧಿಕ ಭಾರತೀಯರು ಕೇವಲ ಶೇಕಡಾ 4 ಪ್ರಮಾಣದ ಆಸ್ತಿಯನ್ನು ಹೊಂದಿದ್ದಾರೆ.

ಇದನ್ನು ವಿವರಿಸುವ ಅಗತ್ಯವೇ ಇಲ್ಲ, ಹಳ್ಳದ ಕಡೆಗೆ ನೀರು ಹರಿಯುವಂತೆ ಶೇಕಡಾ 10 ರಷ್ಟಿರುವ ಈ ಸೂಪರ್ ಶ್ರೀಮಂತರ ಬಳಿಗೆ ಬಂಡವಾಳ ಹರಿಯುತ್ತದೆ. ಇದಕ್ಕೆ ಅನುಕೂಲವಾಗುವಂತಹ ಎಲ್ಲಾ ನೀತಿನಿಯಮಗಳನ್ನು ಸರ್ಕಾರಗಳು ರೂಪಿಸುತ್ತವೆ. ಒಂದಂತೂ ನೆನಪಿಸಲೇಬೇಕು. ಅದೇನೆಂದರೆ ಈ ಮುಕ್ತ ಆರ್ಥಿಕ ನೀತಿಗೆ ಸಂಬಂಧಪಟ್ಟಂತೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ವಿರೋಧ ಪಕ್ಷದಲ್ಲಿದ್ದಾಗ ಸಮಾಜವಾದಿಗಳಂತೆ ನಟಿಸುವ ಈ ಪಕ್ಷಗಳು ಅಧಿಕಾರಕ್ಕೆ ಬಂದೊಡನೆ ಅಂಬಾನಿ, ಅದಾನಿಗಳ ತೆಕ್ಕೆಯಲ್ಲಿರುತ್ತವೆ. ದೇಶದ ದಿಕ್ಕನ್ನು ಬದಲಿಸಬಲ್ಲ ಇವರ ಪ್ರಮುಖ ಆರ್ಥಿಕ ನಿರ್ಣಯಗಳು ಇಲ್ಲಿನ ಜನತೆಗಿಂತ ಮೊದಲು ಈ ಬಂಡವಾಳಶಾಹಿಗಳಿಗೆ ಗೊತ್ತಿರುತ್ತದೆ. ಇದು ವಾಸ್ತವ. ಇಂದು ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಮಾಡುತ್ತಿರುವುದೂ ಸಹ ಇದನ್ನೇ. ಮೋದಿ ಮತ್ತವರ ಕಿಚನ್ ಕ್ಯಾಬಿನೆಟ್ ಈ ಬಕಾಸುರ ಬಂಡವಾಳಶಾಹಿಗಳ ವ್ಯಾಪಾರಕ್ಕೆ ಅನುಕೂಲ ವಾಗುವಂತೆ ಆರ್ಥಿಕ ನೀತಿಯನ್ನು ರೂಪಿಸುತ್ತಿದ್ದಾರೆ. ಹಿಂದಿನದನ್ನು ಬಿಡಿ, ತೀರಾ ಇತ್ತೀಚೆಗೆ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿ ಉರ್ಜಿತ್ ಪಟೇಲ್ ಎನ್ನುವವರನ್ನು ಆಯ್ಕೆ ಮಾಡಿದ್ದಾರೆ. ಸದರಿ ಉರ್ಜಿತ್ ಹಿಂದೆ ಅಂಬಾನಿ ಒಡೆತನದ ರಿಲಯನ್ಸ್ ಸಮೂಹದಲ್ಲಿ ನಿರ್ದೇಶಕರಾಗಿದ್ದರು. ಮತ್ತು ಕಳೆದ ಎರಡು ವರ್ಷಗಳಿಂದ ಭಾರತದ ಇಡೀ ಡಿಜಿಟಲ್ ತಂತ್ರಜ್ಞಾನದ ವಹಿವಾಟನ್ನು ಮುಖೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಸಮೂಹಕ್ಕೆ ಕಪ್ಪ ಸಲ್ಲಿಸಲಾಗಿದೆ. ಇದರ ಮೊದಲ ಹೆರಿಗೆ ಈ ಜಿಯೋ ಎನ್ನುವ ನೆಟ್‌ವರ್ಕ್. ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು.



ಇಂದು ಈ ಬಂಡವಾಳಶಾಹಿಗಳ ಪ್ರತಿನಿಧಿ ಪ್ರಧಾನಿ ಮೋದಿಯವರು ನವೆಂಬರ್ 8,2016ರಂದು ರಾತ್ರಿ ಎಂಟು ಗಂಟೆಗೆ ದೇಶವನ್ನುದ್ದೇಶಿಸಿ ಮಾತನಾಡುತ್ತಾ ಈ ಕಪ್ಪು ಹಣವನ್ನು ನಿರ್ಮೂಲನೆ ಮಾಡಲು ಈ ಕೂಡಲೆ ಜಾರಿಗೆ ಬರುವಂತೆ ರೂ. 500 ಮತ್ತು ರೂ. 1000 ಕರೆನ್ಸಿಯನ್ನು ನಿಷೇಧಿಸಿದ್ದೇನೆ (ನಿಷೇಧಿಸಿದ್ದೇವೆ ಅಲ್ಲ). ನೀವೆಲ್ಲ ಇದನ್ನು ಪಾಲಿಸಲೇಬೇಕು (ಸಹಕರಿಸಬೇಕು ಅಂತಲ್ಲ). ದೇಶಕ್ಕಾಗಿ ಮುಂದಾಗುವ ಕಷ್ಟಗಳನ್ನು ಅನುಭವಿಸಬೇಕು ಎಂದು ಆದೇಶ ಹೊರಡಿಸಿ ಪಿಟೀಲು ಬಾರಿಸಲು ಈ ಆಧುನಿಕ ನೀರೋ ರಾತ್ರೋ ರಾತ್ರಿ ಜಪಾನಿಗೆ ಹಾರಿದರು. ರಿಸರ್ವ್ ಬ್ಯಾಂಕಿನ ಗವರ್ನರ್ ಅಥವಾ ಹೆಚ್ಚೆಂದರೆ ಹಣಕಾಸಿನ ಮಂತ್ರಿ ಪತ್ರಿಕಾಗೋಷ್ಠಿ ಕರೆದು ಪ್ರಕಟಿಸಬಹುದಾದಂತಹ ವಿಷಯವನ್ನು ದೇಶದ ಪ್ರಧಾನಿ ಎಲ್ಲರನ್ನೂ ಹಿಂದಿಕ್ಕಿ ನಾನು ಹೇಳಿದ್ದೇನೆ ನೀವು ಆಲಿಸಿ ಎನ್ನುವಂತ ಸರ್ವಾಧಿಕಾರಿ ವರ್ತನೆಗೆ ಟೀಕಿಸುವ ಅರ್ಥವನ್ನು ಸಹ ಕಳೆದುಕೊಂಡಿದ್ದೇವೆ. ಏಕೆಂದರೆ 'ಆರಿಸಿದ್ದೇವೆ, ಆಳುತ್ತೇವೆ'. ಇದು ನಿಜಕ್ಕೂ ಆಶ್ಚರ್ಯ ಮತ್ತು ಆತಂಕವಾಗುತ್ತದೆ. ಇಂತಹ ಒಂದು ಪ್ರಮುಖ ನಿರ್ಧಾರವು ರಿಸರ್ವ್ ಬ್ಯಾಂಕಿನ ಗವರ್ನರ್‌ಗೆ ಗೊತ್ತಿಲ್ಲದೇ ಹೋಗಿದೆ ಎನ್ನುವುದಾದರೆ ಇದು ಒಂದು ಫ್ಯಾಸಿಸ್ಟ್ ವ್ಯವಸ್ಥೆ ಎನ್ನುವುದರಲ್ಲಿ ಅನುಮಾನವೇ ಇಲ್ಲ, ಮುಂಚಿತವಾಗಿ ತಿಳಿದಿತ್ತು ಎಂದು ನಂಬಬಹುದಾದರೆ ಇಂದು ಬಡವರು, ಶ್ರಮಿಕರು ಏತಕ್ಕೆ ಹಣಕ್ಕಾಗಿ ಪರದಾಡುತ್ತಿದ್ದಾರೆ? ಮುಂಜಾಗ್ರತ ಕ್ರಮವನ್ನು ತೆಗೆದುಕೊಳ್ಳಲು ವಿಫಲರಾದದ್ದು ಯಾಕೆ? ಯಾತಕ್ಕಾಗಿ ದೇಶದಲ್ಲಿ ಒಂದು ಅರಾಜಕತೆಯ ವಾತಾವರಣ ನಿರ್ಮಾಣವಾಗಿದೆ? ಮೋದಿ ಮತ್ತು ಬಿಜೆಪಿ ಪಕ್ಷದವರು ಹೇಳಿಕೊಳ್ಳುತ್ತಿರುವ ಇದು ಭಯೋತ್ಪಾದಕರ ವಿರುದ್ಧದ ಆರ್ಥಿಕ ಕಾರ್ಯಾಚರಣೆ ಎನ್ನುವ ತೋಳ ಬಂತು ತೋಳದ ಊಹೆಗಳಿಗೆ ಭಾರತದ ಬಡವರು ಬಲಿಯಾಗುತ್ತಿದ್ದಾರೆ. ಗ್ರಾಮ ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ಜನಸಾಮಾನ್ಯರು ಶೇಕಡಾ 100 ರಷ್ಟು ಪ್ರಮಾಣದಲ್ಲಿ ಹಣದ ಮೂಲಕ ವಹಿವಾಟು ನಡೆಸುತ್ತಾರೆ. ಅಲ್ಲಿ ಚೆಕ್ ಬಳಕೆ ಇಲ್ಲ, ಡೆಬಿಟ್/ಕ್ರೆಡಿಟ್ ಕಾರ್ಡುಗಳಿಲ್ಲ, ಈ ಶೇಕಡಾ 70 ಕ್ಕಿಂತಲೂ ಮೇಲ್ಪಟ್ಟ ಜನಸಂಖ್ಯೆಗೆ ಮೋದಿಯವರ ಈ ಕ್ರಮವು ನೇಣುಗಂಬಕ್ಕೆ ಹಾಕಿದಂತಿದೆ. ಈ ಬಿಜೆಪಿ ಪರ ಒಲವಿರುವ ಸ್ವಾಮಿನಾಥನ್ ಅವರೇ "ಶೇಕಡಾ 1 ರಷ್ಟು ಕಾಳದಂಧೆಕೋರರನ್ನು ಬಯಲಿಗೆಳೆಯಲು ಶೇಕಡಾ 90 ರಷ್ಟು ಜನರನ್ನು ಬೀದಿಗೆ ನಿಲ್ಲಿಸಿದ್ದಾರೆಂದು" ಟೀಕಿಸಿದ್ದಾರೆ. ಇದು ಬಡಜನತೆಯ ಮೇಲಿನ ಸರ್ಜಿಕಲ್ ದಾಳಿ ಎಂದೇ ಪ್ರಜ್ಞಾವಂತರು ಟೀಕಿಸುತ್ತಿದ್ದಾರೆ.

ಕಾರ್ಲ್‌ಮಾರ್ಕ್ಸ್ ಬಂಡವಾಳದ ಕುರಿತಾಗಿ ಬರೆಯುತ್ತಾ 'ಲೋಭಿಯೆಂದರೆ ಆತ ಒಬ್ಬ ಹುಚ್ಚನಾದ ಬಂಡವಾಳಶಾಹಿಯಂತೆ, ಬಂಡವಾಳಶಾಹಿಯು ಪರಿಜ್ಞಾನವುಳ್ಳ ಲೋಭಿಯಂತೆ. ಇಲ್ಲಿ ವಿನಿಮಯ ಮೌಲ್ಯವನ್ನು ಅಧಿಕಗೊಳಿಸುವ ಪ್ರಕ್ರಿಯೆಗೆ ಎಂದಿಗೂ ಕೊನೆಮೊದಲಿಲ್ಲ, ಲೋಭಿಯು ಹಣವನ್ನು ಆದಷ್ಟು ಶೇಖರಿಸಿಡುತ್ತಾ ತಾನು ಶ್ರೀಮಂತನೆನ್ನುವ ಭ್ರಮೆಯಲ್ಲಿದ್ದರೆ ಬಂಡವಾಳಶಾಹಿಯು ಹಣವನ್ನು ಮಾರುಕಟ್ಟೆಯಲ್ಲಿ ತೊಡಗಿಸುತ್ತ ನಿಜವಾಗಿಯೂ ಶ್ರೀಮಂತನಾಗಿರುತ್ತಾನೆ' ಎಂದು ಹೇಳುತ್ತಾರೆ. ಅಂದರೆ ಹಣವನ್ನು ಶೇಖರಿಸಿಡುವವ ತಾನು ಹಸಿರು ಹುಲ್ಲುಗಾವಲನ್ನು ಬೆಳೆಸಿಕೊಂಡಿದ್ದೇನೆ ಎಂದು ತನ್ನ ಕೂಡಿಟ್ಟ ಹಣದ ಕುರಿತಾಗಿ ಮತ್ತೆ ಮತ್ತೆ ಹೆಮ್ಮೆಯಿಂದ ಖುಷಿಪಡುತ್ತಿದ್ದರೆ ಈ ನವಉದಾರೀಕರಣದ ಮುಕ್ತ ಮಾರುಕಟ್ಟೆಯಲ್ಲಿ ಹಣವನ್ನು ಹೂಡುವುದು ಮತ್ತೆ ಗಳಿಸುವುದು ಮತ್ತೆ ಹೂಡುವುದು ಎನ್ನುವ ಒಂದು ಚಕ್ರದೊಳಗೆ ಪಾಲ್ಗೊಳ್ಳುವವ ಸಹಜವಾಗಿಯೇ ದೇಶದ ಆರ್ಥಿಕ ನೀತಿಯನ್ನು ನಿರ್ಧರಿಸುವವನಾಗಿರುತ್ತಾನೆ. ಇದೇ ಇಂದು ಇಂಡಿಯಾದ ಆರ್ಥಿಕತೆಯನ್ನು ಸಂಪೂರ್ಣವಾಗಿ ದಿಕ್ಕೆಟ್ಟ ಸ್ಥಿತಿಗೆ ತಂದು ನಿಲ್ಲಿಸಿರುವುದು. ಈ ನಿರಂತರವಾಗಿ ಹಣವನ್ನು ಹೂಡುವುದು ಮತ್ತಷ್ಟು ಹೂಡುವುದು ಕೊಳ್ಳುಬಾಕುತನಕ್ಕೆ ಪ್ರೇರಣೆಯಾಗುತ್ತದೆ. ಕೊಳ್ಳುಬಾಕುತನದ ಹಸಿವು ಹೆಚ್ಚಿದಷ್ಟೂ ಮುಕ್ತ ಮಾರುಕಟ್ಟೆಯ ವ್ಯವಹಾರ ಹಿಗ್ಗುತ್ತಾ ಹೋಗುತ್ತದೆ. ಬಂಡವಾಳಶಾಹಿಗಳು, ಮುಕ್ತ ಮಾರುಕಟ್ಟೆಯ ಸಮರ್ಥಕರು ಇದನ್ನು "ಉದಾರೀಕರಣ ಖಾಸಗೀಕರಣ ಜಾಗತೀಕರಣ" (ಎಲ್‌ಪಿಜಿ) ಎಂದು ಹೆಮ್ಮೆಯಿಂದ ಕರೆದರೆ ವಾಸ್ತವದಲ್ಲಿ ಇದು ಪ್ರಜಾಪ್ರಭುತ್ವದ, ವೈವಿಧ್ಯತೆಗಳನ್ನುಳ್ಳ ಭಾರತದಂತಹ ದೇಶಕ್ಕೆ ಶವಪೆಟ್ಟಿಗೆಗೆ ಮೊಳೆ ಹೊಡೆದಂತಿರುತ್ತದೆ.

ಇನ್ನು ಮೋದಿಯವರ ಈ ರೂ. 500 ಮತ್ತು 1000ಗಳ 'ಅನಾಣ್ಯೀಕರಣ' (demonetization) ಕುರಿತಾದ ನಿರ್ಣಯವನ್ನು ಖೋಟಾನೋಟು, ಕಪ್ಪುಹಣ ನಿಯಂತ್ರಣದ ಹಿನ್ನೆಲೆಯಲ್ಲಿ ಸ್ವಾಗತಿಸಬೇಕಾಗಿದೆ. ಅದರಲ್ಲಿ ಯಾರಿಗೂ ತಕರಾರಿಲ್ಲ. ಆದರೆ ತೊಂದರೆ ಪ್ರಾರಂಭವಾಗುವುದು ಹಿಂದಿನ ಅನುಭವಗಳ ಹಿನ್ನೆಲೆಯಲ್ಲಿ ಇದನ್ನು ಪ್ರಕಟಿಸಿದ ವ್ಯಕ್ತಿಯ, ಪಕ್ಷದ ಅನುಮಾನಾಸ್ಪದವಾದ ನಡಾವಳಿಗಳನ್ನು ಪರಿಗಣಿಸಿದಾಗ. ದೇಶದ ಹಿತಾಸಕ್ತಿಯನ್ನು

▶▶ 12



ತುಘಲಕ್ ಮೋದಿ

ನಾನು ಐನೂರು, ಸಾವಿರ ನೋಟುಗಳನ್ನು ರದ್ದು ಮಾಡಿದ್ದರಿಂದಾಗಿ ದೊಡ್ಡದೊಡ್ಡ ಖದೀಮರೆಲ್ಲ ಬ್ಯಾಂಕುಗಳ ಮುಂದೆ ಸಾಲುಗಟ್ಟಿ ನಿಲ್ಲುವಂತಾಗಿದೆ ಎಂದು ಪ್ರಧಾ[ನಿ] ಮೋದಿಯೇನೋ ಬಡಾಯಿ ಕೊಚ್ಚಿರಬಹುದು. ಒಂದೆಡೆ ಜನಸಾಮಾನ್ಯರು, ಬಡಬಗ್ಗರು ತಮ್ಮ ಕೂಡಿಟ್ಟ ಪುಡಿಕಾಸಿನ ಪರಿವರ್ತನೆಗಾಗಿ ಬ್ಯಾಂಕುಗಳೆದು[ರು] ನುಗ್ಗಾಟದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದರೆ ಮತ್ತೊಂದೆ[ಡೆ] ಅದೇ ಬ್ಯಾಂಕುಗಳು ಪ್ರಭಾವಿಗ[ಳಿಗೆ] ಹಿಂಬಾಗಿಲು ತೆರೆದಿದ್ದಾಗಿದೆ. ಐದುಕೋಟಿ ಕೊಟ್ಟರೆ ಸಾಕು ಇಪ್ಪತ್ತು ಕೋಟಿಯ ಹೊಸ ಕರ[ೆನ್ಸಿ] ಲಭ್ಯ. ಪೊಲೀಸ್. ಅಧಿಕಾರಿಗಳು, ಉದ್ದಿಮೆಪತಿಗಳು, ಕೋಟ್ಯಾಧಿಪತಿಗಳ್ಯಾರಾದರೂ ಸಾಲುಗಟ್ಟಿ ಬ್ಯಾಂಕುಗಳ ಮುಂ[ದೆ] ನಿಂತಿದ್ದಿದೆಯೇ? ಮಾರ್ವಾಡಿಗಳ, ವೈಟ್‌ಕಾಲರ್‌ಗಳು, ವ್ಯಾಪಾರಸ್ಥರಿಗೆಲ್ಲ ಎರಡು ಸಾವಿ[ರದ] ಹೊಸ ಕರೆನ್ಸಿಯ ಕಂತೆಕಂತೆಗಳ[ು] ಬಂದಿದ್ದಾದರೂ ಎಲ್ಲಿಂದ?

ಬಡವರಿಗೆ ಮೋದಿ ತಂದಿಟ್ಟ ದುಮ್ಮಾನ

ಕತ್ರಿಗುಪ್ಪೆಯ ನಿರುದ್ಯೋಗಿ ನವೀನನ ಬಳಿ 30 ಸಾವಿರ ರೂಪಾಯಿಗಳ ಐನೂರರ ನೋಟುಗಳ ಕಂತೆಯೇ ಇದೆ. ನವೆಂಬರ್ 15 ಕ್ಕೆ ಅದನ್ನು ಮನೆ ಮಾಲೀಕನಿಗೆ ಮುಂಗಡವಾಗಿ ಕೊಡಬೇಕಿತ್ತು. ಹೊಸದಾಗಿ ಮದುವೆಯಾದ್ದರಿಂದ ಹೆಂಡತಿಯನ್ನೂ ಬೆಂಗಳೂರಿಗೆ ಕರೆಸಿಕೊಂಡು ತನ್ನ ನೆಂಟರ ಮನೆಯಲ್ಲಿರಿಸಿ ತಾನು ಸ್ನೇಹಿತರ ರೂಮಿನಲ್ಲಿ ಮಲಗಿದ್ದು ಇನ್ನೊಂದು ವಾರದೊಳಗೆ ಪತ್ನಿ ಸಮೇತ ಬಾಡಿಗೆ ಮನೆಗೆ ವಾಸಕ್ಕೆ ಹೋಗುವುದು ಆತನ ಉದ್ದೇಶವಾಗಿತ್ತು, ಆದರೆ ನವೆಂಬರ್ ಹತ್ತಕ್ಕೆ ಮನೆ ಮಾಲೀಕ ಆತನ ಐನೂರರ ನೋಟನ್ನೆಲ್ಲ ನಿರಾಕರಿಸಿಬಿಟ್ಟ.

ಹಳೆಯ ನೋಟನ್ನೆಲ್ಲ ಬ್ಯಾಂಕಿಗೆ ಕಟ್ಟಬೇಕೆಂದರೆ ಎಂಟು ದಿನ ಕಾಯಬೇಕು. ಅದನ್ನು ವಾಪಸ್ಸು ತೆಗೆಯಬೇಕೆಂದರೆ ಹದಿನೈದು ದಿನಗಳೇ ಬೇಕು. ಚಿಕ್ಕಿಗಿಕ್ಕು ಗೊತ್ತೇ ಇಲ್ಲ ಎನ್ನುತ್ತಿದ್ದಾನೆ ಮನೆ ಮಾಲೀಕ. ಕೈಯಲ್ಲಿ ದುಡ್ಡಿದ್ದರೂ ಗಂಡ-ಹೆಂಡತಿಗೆ ಬೀದಿಪಾಲಾಗಬೇಕಾದ ದುರ್ಗತಿ-

ಪ್ರತಿನಿತ್ಯ ಸುಣ್ಣಬಣ್ಣ ಬಳಿಯುವ ಅಂದರೆ ಪೇಂಟ್ ಕೆಲಸಕ್ಕೆ ಹೋಗುತ್ತಿದ್ದ ನಂದಿನಿ ಲೇಔಟಿನ ವಿಜಯ್‌ಗೆ ಇಬ್ಬರು ಮಕ್ಕಳು. ಸಂಜೆಯಾದರೆ ಸಂಬಳದ ರೂಪದಲ್ಲಿ ಬರುತ್ತಿದ್ದದ್ದು ಐನೂರರ ನೋಟೇ. ಆ ನೋಟನ್ನು ವೈನ್‌ಸ್ಟೋರ್‌ಗೆ ಒಯ್ದು ನೂರೋ ಎಂಬತ್ತೋ ರೂಪಾಯಿಗೆ ಕ್ವಾರ್ಟರ್ ವಿಸ್ಕಿ ಕುಡಿಯೋಣವೆಂದರೆ ಬಾರಿನವನು ಐನೂರಕ್ಕೆ ಪೂರ್ತಿ ಕುಡಿಯುವಂತಿದ್ದರೆ ಮಾತ್ರವೇ ನೋಟು ತಗೋತೀನಿ. ಇಲ್ಲಾಂದ್ರೆ ನೂರರದ್ದು ಕೊಡು ಅನ್ನುತ್ತಿದ್ದಾನೆ. ಹೋಟೆಲಿಗೆ ಹೋದರೂ ಅಷ್ಟೇ... ಪೂರ್ತಿ ಐನೂರಕ್ಕೇ ತಿನ್ನಬೇಕು, ಇಲ್ಲವೆಂದರೆ ಬೇರೆ ನೋಟು ಕೊಡು ಎನ್ನುತ್ತಾನೆ ಹೋಟೆಲಿನ ಕ್ಯಾಷಿಯರ್. ಪೆಟ್ರೋಲ್ ಬಂಕಿಗೆ ಹೋದರೆ ಬೈಕ್ ಅಥವಾ ಸ್ಕೂಟಿಯವರು ಪೂರ್ತಿ ಐನೂರಕ್ಕೆ ಪೆಟ್ರೋಲ್ ಹಾಕಿಸಲಾಗದು. ವಿಧಿಯಿಲ್ಲ, ಇನ್ನೂರೋ ಮುನ್ನೂರಕ್ಕೋ ಹಾಕಿಸಿಕೊಂಡು ಕೊಟ್ಟ ಐನೂರಕ್ಕೆ ಚಿಲ್ಲರೆ ಕೇಳದೆ ಬಿಟ್ಟು ಬರಬೇಕು-

ಕಲಾಸಿಪಾಳ್ಯದ ಫುಟ್‌ಪಾತ್ ಮೇಲೆ ತರಕಾರಿ ಮಾರುತ್ತಿದ್ದ ಹೆಂಗಸರೆಲ್ಲ ವಾಪಸ್ಸು ತಮಿಳುನಾಡಿಗೆ ಗುಳೆ ಹೊರಟಾಗಿದೆ. ಕೆ.ಆರ್. ಮಾರುಕಟ್ಟೆಯ ನಾಲ್ಕು ದಿಕ್ಕುಗಳಲ್ಲಿ ಬಿಕರಿಯಾಗದೆ ಎಸೆದ ತರಕಾರಿಗಳ ರಾಶಿ ಕೊಳೆತು ಇಡೀ ಪ್ರದೇಶ ತಿಪ್ಪೆಗುಂಡಿಯಂತಾಗಿದೆ. ಯಶವಂತಪುರದ ಆರ್‌ಎಂಸಿ ಯಾರ್ಡಿನ ನೂರಾರು ಮಂದಿ ಕೂಲಿಗಳಿಗೆ ಕಳೆದೊಂದು ವಾರದಿಂದ ಒಪ್ಪೊತ್ತಿನ ಊಟಕ್ಕೂ ಗತಿಯಿಲ್ಲ, ಬಡ್ಡಿಗೆ ಅಂತ ಸಾಲ ತಂದರೆ ಅವರಾದರೂ ಕೊಡುವುದು ಐನೂರರ ನೋಟನ್ನೇ. ಅದನ್ನು ತಂದರೆ ನೂರೂ ಇಪ್ಪತ್ತರ ಚಿಲ್ಲರೆ ಕೊಡುವವರ್‍ಯಾರು. ಹಿಂದಾದರೆ ಪ್ರತಿಯೊಬ್ಬರೂ ಮೇಲೆ ಬಿದ್ದು ಚಿಲ್ಲರೆ ಕೊಡುತ್ತಿದ್ದವರು ಈಗ ಚಿಲ್ಲರೆ




ಇದ್ದರೂ ಕೊಡುವುದಿಲ್ಲ, ಏಕೆಂದರೆ ಐನೂರರ ನೋಟಿಗೆ ಚಿಲ್ಲರೆಯಿಂದ ನೂರು ರೂಪಾಯಿ ಲಾಭ ಗಿಟ್ಟುತ್ತದೆ!

ಐನೂರಕ್ಕೆ ಮುನ್ನೂರು!

ಒಂದೆಡೆ ಐನೂರು ಸಾವಿರದ ನೋಟುಗಳು ರದ್ದಾಗುತ್ತಿದ್ದ ಹಾಗೆಯೇ ಮತ್ತೊಂದೆಡೆ ನೂರು ಐವತ್ತು ಇಪ್ಪತ್ತು ಹತ್ತರ ಚಿಲ್ಲರೆ ನೋಟುಗಳೆಲ್ಲ ಇದ್ದಕ್ಕಿದ್ದಂತೆ ಕಣ್ಮರೆಯಾದವು. ಅಂದರೆ ಚಿಲ್ಲರೆ ನೋಟುಗಳ ಕಾಳಸಂತೆಯದ್ದೇ ಪ್ರತ್ಯೇಕ ದಂಧೆಯೊಂದು ಶುರುವಾಯಿತು. ನೂರೋ ಐವತ್ತರದ್ದೋ ಮುನ್ನೂರು ರೂಪಾಯಿದ್ದರೇ ಅದಕ್ಕೆ ಮಾರುಕಟ್ಟೆಯಲ್ಲಿ ಐನೂರರ ಹಳೇ ನೋಟು ಹುಟ್ಟುತ್ತದೆ. ಎಂಟುನೂರು ರೂಪಾಯಿ ಚಿಲ್ಲರೆಯಿದ್ದರೆ ಅದಕ್ಕೆ ಸಾವಿರದ ಹಳೇ ನೋಟು ಬರುತ್ತದೆ. ಕೆಲವೆಡೆ ಸಾವಿರದ ಹಳೇ ನೋಟಿಗೆ ಏಳು ನೂರು ರೂಪಾಯಿ ಗಿಟ್ಟಿತೆಂದರೆ ಅದೇ ಪುಣ್ಯವೆಂಬಂಥ ದುರ್ಗತಿ. ಇಂದಿರಾನಗರದ ತಿಪ್ಪಸಂದ್ರದ ವೈನ್ ಅಂಗಡಿಯೊಂದರ ಕೆಲಸಗಾರ ಮಹೇಶ್‌ಬಾಬು ಹಿಂದಿನ ದಿನವಷ್ಟೇ ಐನೂ[ರರ] ಹತ್ತು ನೋಟುಗಳ ಐದು ಸಾವಿರ ಸಂಬಳ ಪಡೆದ[ು] ಮಾರನೇ ದಿನ ಬೆಳಗ್ಗಿನ ತಿಂಡಿಗೆಂದು ಹೋಟೆಲಿಗೆ ಹೋ[ದರೆ] ಐನೂರು, ಸಾವಿರದ ನೋಟು ನಡೆಯುವುದಿಲ್ಲವೆ[ಂಬ] ಕರಾಳ ಫಲಕ. ಎಲ್ಲಿಗೆ ಹೋದರೂ ಜೇಬಲ್ಲಿದ್ದ ದು[ಡ್ಡಿಗೆ] ಬೆಲೆಯಿಲ್ಲ.

ಹಿಂದೆಲ್ಲಾ ಸಾಲ ಕೊಡುತ್ತಿದ್ದ ಪರಿಚಯದ ಅಂಗಡಿಯಾತ ಈಗ ಸಾಲ ಕೊಡುವುದಿಲ್ಲ ಎನ್ನುತ್ತಿದ್ದಾ[ನೆ]. ಪರಿಚಯವಿದ್ದು ವಿಷಯ ಗೊತ್ತಿದ್ದರೂ ಹೋಟೆಲಿನವ[ರು] ತಿಂಡಿ ಕೊಡುತ್ತಿಲ್ಲ, ಜೇಬಿನಲ್ಲಿ ಐನೂರರ ನೋಟುಗಳ[ನ್ನು] ತೋರಿಸಿ ದಮ್ಮಯ್ಯಗುಡ್ಡೆ ಹಾಕಿದಾಗಲೂ ಹಿಂದೆಲ್ಲಾ ಸಾ[ಲ] ಕೊಡುತ್ತಿದ್ದ ಪರಿಚಿತರೇ ಈಗ ಸಾಲ ಕೊಡಲು ನಿರಾಕರಿಸುತ್ತಿದ್ದಾರೆಂದರೆ ಅದು ಅಳಿದುಳಿದ ಐನೂರು ಸಾವಿರದ ನೋಟುಗಳನ್ನೂ ಪುಡಿಕಾಸಿಗೆ ಕಿತ್ತುಕೊಳ್ಳುವ ತಂತ್ರವಷ್ಟೇ.







ಊರಷ್ಟೇ ಅಲ್ಲ ಕರ್ನಾಟಕದ ಬಡಬಗ್ಗರು, ಮಾನ್ಯರು, ಕೂಲಿಗಳು, ರೈತಾಪಿ ಫುಟ್‌ಪಾತ್ ಗಳೆಲ್ಲ ಪ್ರತಿನಿತ್ಯ ಒಂದಲ್ಲ ಒಂದು ಬಾರು- ಸ್ಟೋರುಗಳಿಗೆ ಹೋಗಲೇ ಬೇಕಿತ್ತಲ್ಲವೇ?

ಅಂತಹ ಪ್ರತಿ ಬಾರು ವೈನ್‌ಸ್ಟೋರುಗಳೆಲ್ಲ ಕಳೆದೊಂದು ದಿಂದ ಮಾಡಿದ ಲಾಭ ಇನ್ನೂರು ಪಟ್ಟು. ಅಂದರೆ ರರ ನೋಟಿಗೆ ನೂರೋ ಇನ್ನೂರೋ ರೂಪಾಯಿಗಳ ಬ್ರಾಂಡಿ ಕೊಟ್ಟು ಮಿಕ್ಕೆಲ್ಲವನ್ನೂ ರದ್ದಾದ ನೋಟಿನ ಲ್ಲಿ ಲಪಟಾಯಿಸುವುದು. ಪ್ರತಿನಿತ್ಯ ಕುಡಿದು ಗಲೇಬೇಕಿದ್ದ ಅಭ್ಯಾಸವುಳ್ಳವನಿಗೆ ಕ್ವಾರ್ಟರ್ ವಿಸ್ಕಿಯ ದೆ ಐನೂರರ ನೋಟು ಯಾವ ಲೆಕ್ಕಕ್ಕೂ ಇರದು. ಲಾಭ ಪಡೆಯುವವರು ಬಾರ್-ವೈನ್‌ಸ್ಟೋರ್ ದರೆ ತಲೆ ಬೋಳಿಸಿಕೊಂಡವರೆಲ್ಲ ದಿನಗೂಲಿ, ಪಾತ್, ಬಡಬಗ್ಗರೆ.

ಮಾಲ್‌ಗಳಲ್ಲೂ ಮುಂಡಾ

ಇದು ಕೇವಲ ಕೂಲಿ, ಫುಟ್‌ಪಾತ್, ತಳ್ಳುಗಾಡಿ, ಪಿಗಳ ವ್ಯಥೆಯಷ್ಟೇ ಅಲ್ಲ, ನಗರಗಳ ಯಾವುದೇ ನಾಮಿ ರೆಸ್ಟೋರೆಂಟ್, ಶಾಪಿಂಗ್ ಮಾಲ್‌ಗಳಲ್ಲೂ ಕತೆ. ಐನೂರೋ ಸಾವಿರಕ್ಕೋ ನಯಾಪೈಸೆ ಯಿಲ್ಲದ ಹಾಗೆ ಖರೀದಿ ಮಾಡಿದರಷ್ಟೇ ಹಳೇ ಟಿಗೆ ಬೆಲೆ. ಹಾಗಂತ ಹಳೇ ನೋಟಿಗೆ ಬೆಲೆ ಬಂತಲ್ಲ ವಂತಿಲ್ಲ, ಏಕೆಂದರೆ ಹಳೇ ನೋಟಿನ ಗಿರಾಕಿಗಳಿಗೆ ಲೇ ಪ್ರತಿ ವಸ್ತುವಿಗೂ ಪ್ರತ್ಯೇಕ ಬೆಲೆ. ಏನಿಲ್ಲವೆಂದರೂ ತ್ತು ಪರ್ಸೆಂಟ್ ಹೆಚ್ಚಿನ ಬೆಲೆಯಿರುತ್ತದೆ. ಸಾಲದ್ದಕ್ಕೆ ನೋಟೆಂದು ಮತ್ತೆ 20 ಪರ್ಸೆಂಟ್ ಮಕೊಳ್ಳುತ್ತಾರೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಐನೂರು ದ ಹಳೇ ನೋಟಿಗೆ ಕಟ್ಟಾ ಕಮ್ಮಿಯೆಂದರೂ ನಲವತ್ತು ಟ್ ಮುಂಡಾಯಿಸಿಕೊಳ್ಳಲೇಬೇಕು!

ಐನೂರು ಸಾವಿರದ ನೋಟುಗಳು ರದ್ದಾಗಿರುವುದರಿಂದ ನೋಟುಗಳನ್ನು ಕೂಡಿಟ್ಟುಕೊಂಡವರಿಗಷ್ಟೇ ಸ್ಯೆಯೆಂಬುದು ಕೇವಲ ಭ್ರಮೆಯಷ್ಟೇ. ಚಿಲ್ಲರೆ ಕಾಸು ಸ್ಯೆಯಿಂದಾಗಿಯೇ ನೂರು ಇನ್ನೂರರ ಸಣ್ಣಪುಟ್ಟ ವಾಟುದಾರರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬ್ಯಾಂಕ್ ಗಳುಳ್ಳ ನಗರವಾಸಿ ಸುಶಿಕ್ಷಿತರು, ಮಧ್ಯಮ ವರ್ಗದ ಹೇಗೋ ಕೂಡಿಟ್ಟ ಕಾಸನ್ನು ಖಾತೆಗೆ ಹಾಕುವ ಲಕ ಅಧಿಕೃತಗೊಳಿಸಿಕೊಳ್ಳಬಹುದು. ಆದರೆ ಗಾಡಿನ ಬ್ಯಾಂಕ್ ಖಾತೆಗಳೇ ಇಲ್ಲದ ಜೀವನಪರ್ಯಂತ ಲೋ ಇನ್ನೂರೋ ಕಲೆ ಹಾಕಿ ಅದನ್ನು ಐನೂರಕ್ಕೋ ರಕ್ಕೋ ಪರಿವರ್ತಿಸಿ ಕೂಡಿಸಿಟ್ಟುಕೊಂಡವರದ್ದು ನಿಜಕ್ಕೂ ಪಾಡೆ.

ಮಂಡ್ಯದ ಹಳ್ಳಿಗಾಡಿನ ರೈತಾಪಿಗಳದ್ದು ಯಾರಿಗೂ ಕೊಳ್ಳಲಾಗದ ದುರ್ಗತಿ. ಮಗಳ ಮದುವೆಗೆಂದು ಕಾಸು ಸೇರಿಸಿ ಐನೂರರ ನೋಟುಗಳನ್ನಾಗಿ ಕೂಡಿಟ್ಟಿದ್ದ ಹೆಂಗಸೊಬ್ಬಳಿಗೆ ದುಡ್ಡೆಲ್ಲ ಮಣ್ಣು ಪಾಲಾದಾಗ ವ ಆತಂಕವಿದೆಯಲ್ಲ, ಅದು ವರ್ಣಿಸಲಸಾಧ್ಯ ದುರಂತ. ಟ್ಟಿದ್ದ ಐನೂರರ ನೋಟೆಲ್ಲ ರದ್ದಿ ಪೇಪರಿನಂತೆ ದು ಯಾರೋ ಹೇಳಿದಾಗ ಮಗಳ ಮದುವೆಯ ನ್ನು ಮಣ್ಣುಗೂಡಿದ ಹಾಗೆಯೇ. ಗ್ರಾಮೀಣ ಪ್ರದೇಶಗಳ ಸ್ತ್ರೀಶಕ್ತಿ ಗುಂಪುಗಳಿಗೆಲ್ಲ ಐನೂರರ ನೋಟು ಸಿಕೊಡುವುದೇ ಕಾಯಕವಾಗಿದೆ. ಚೂರುಪಾರು ಟ್ಟಿದ್ದ ರೈತರೆಲ್ಲ ಅದನ್ನು ಬದಲಾಯಿಸಿಕೊಳ್ಳಲು ಕುಗಳ ಮುಂದೆ ಸಾಲುಗಟ್ಟಲೇಬೇಕು!

ಕೂಡಿಟ್ಟ ಕಾಸಿಗೆ ದೋಖಾ

ಪ್ರತಿನಿತ್ಯ ನಾಲ್ಕೋ ನಾಲ್ಕೂವರೆಯಂತೆಯೋ ಬ್ಯಾಂಕಿಗೆ ತ್ತಾ ಬಂದರೂ ಹಾಕಿದ ದುಡ್ಡಿನ ಮೂಲದ ಬಗ್ಗೆ ಗೆ ವಿವರಣೆ ಕೊಡಲೇಬೇಕು. ಇನ್ನು ಹಾಕಿದ ದುಡ್ಡು ಪಡೆಯಲೆಂದರೆ ವಾರಕ್ಕೆ ಎರಡೂವರೆ ಸಾವಿರಕ್ಕಿಂತ ಹೆಚ್ಚಿಗೆ ದೊರೆಯದು. ಮೊನ್ನೆಯಷ್ಟೇ ಇಂದಿರಾನಗರದಲ್ಲಿ ಮಗಳ ಮದುವೆ ನಿಗದಿಯಾಗಿದ್ದ ರೈತಾಪಿ ಹಿನ್ನೆಲೆಯ ಬ್ಬೊಂದಕ್ಕೆ, ಅದಕ್ಕೆಂದು ಕೂಡಿಟ್ಟಿದ್ದ ದುಡ್ಡೆಲ್ಲ ರಾತ್ರಿ ರದ್ದಾಗಿದೆ ಎಂದಾಗ ಭೂಮಿಯೇ ಕುಸಿದಂತಾಯಿತು. ಅದು ಸೈಟು ಮಾರಿದ ದುಡ್ಡನ್ನು ಮದುವೆಗೆಂದು ಎತ್ತಿಟ್ಟಿದ್ದ ದುರಂತವಾಗಿತ್ತು. ಬ್ಯಾಂಕುಗಳು ಕಟ್ಟುವಂತಿಲ್ಲ, ಯಾರಿಗೂ ಕೊಡುವಂತಿಲ್ಲ. ಕೊನೆಗೆ ಮಾರ್ವಾಡಿಯೊಬ್ಬರಿಗೆ ಮೂವತ್ತೈದು ಪರ್ಸೆಂಟ್ ಮೇಲೆ ಕಮೀಷನ್ ಕೊಟ್ಟು 40 ಲಕ್ಷಕ್ಕೆ ಬರೋಬ್ಬರಿ 14 ಲಕ್ಷ ಕಳಕೊಂಡು ಉಳಿದ 26 ಲಕ್ಷದಲ್ಲೇ ಮಗಳ ಮದುವೆ ಮುಗಿಸಬೇಕಾದ ದುರ್ಗತಿ!

ಇತ್ತ ನಗರಗಳಿಗೆ ಬಂದರೂ ಇದೇ ಕತೆ. ಪೈಸೆಗೆ ಪೈಸೆ ಸೇರಿಸಿ ಮೂರೋ ಐದೋ ಲಕ್ಷ ಜೋಡಿಸಿಟ್ಟಿದ್ದ ಮುದುಕಿಯೊಬ್ಬಳಿಗೆ ತನ್ನ ದುಡ್ಡೆಲ್ಲ ರಾತ್ರೋರಾತ್ರಿ ತನ್ನ ಬೆಲೆ ಕಳೆದುಕೊಂಡಿದೆಯೆಂಬ ವಾಸ್ತವ ಅರಗಿಸಿಕೊಳ್ಳಲಾಗದ್ದು, ನೂರರ ನೋಟುಗಳನ್ನೆಲ್ಲ ಐನೂರರ ನೋಟುಗಳನ್ನಾಗಿಸಿ ಅಂಥ ಐನೂರರ ಒಂದೊಂದೇ ನೋಟನ್ನು ಜೋಡಿಸಿಟ್ಟು ಕೊಂಡಿದ್ದ ಸುಂಕದಕಟ್ಟೆಯ ಮುದುಕಿಯೊಬ್ಬಳು ವಿಷ ಕುಡಿಯಲೆತ್ನಿಸಿದ್ದು ಮೀಡಿಯಾಗಳ ಪಾಲಿಗೆ ಸಣ್ಣ ಸುದ್ದಿಯಿರಬಹುದು. ಆದರೆ ಇಂಥ ಅದೆಷ್ಟು ಮಂದಿ ಬ್ಯಾಂಕ್ ಖಾತೆಗಳನ್ನೇ ಮಾಡದ ಯಾವುದೇ ಹಣಕಾಸು ಸಂಸ್ಥೆಗಳ ಗಂಧಗಾಳಿ ಅರಿಯದ ಈಗ ಕೂಡಿಟ್ಟ ದುಡ್ಡಿಗಾಗಿ ಎದೆಬಡಿದು ಕೊಳ್ಳುತ್ತಿರುವವರ ದುರ್ಗತಿಗೆ ಮೋದಿಯ ಬಳಿ ಉತ್ತರವಿದೆಯೇ? ಬಿಜೆಪಿ ಮಂದಿ ನೆರವಿಗೆ ಬರುತ್ತಾರಾ ಅಥವಾ ಯಾವ ಬ್ಯಾಂಕ್ ಸರ್ಕಾರದ ಯಾವ ಸಂಸ್ಥೆ ಇಂಥ ಕೋಟಿಗಟ್ಟಲೇ ಜನಸಾಮಾನ್ಯರ ಆಕ್ರಂದನಕ್ಕೆ ಪರಿಹಾರವೊದಗಿಸಬಲ್ಲದು?

ವೃದ್ಧಾಪ್ಯ ವೇತನ ಅಥವಾ ವೇತನ ಮಾಸಾಶನವೆಂದು ಬರುತ್ತಿದ್ದದ್ದು ಐನೂರರ ನೋಟುಗಳೇ. ಮಗಳಿಗೆ ಒಡವೆ ಕೊಡಿಸಲೆಂದೋ, ಮಗನ ಓದಿಗೆಂದೋ, ಗಂಡನ ಚಿಕಿತ್ಸೆಗೆಂದೋ ಕೂಡಿಟ್ಟಿದ್ದ ಮೂವತ್ತೋ ಇಪ್ಪತ್ತೋ ಐವತ್ತೋ ಸಾವಿರ ರೂಪಾಯಿಗಳನ್ನು ಹೊಸ ನೋಟುಗಳಿಗೆ ಪರಿವರ್ತಿಸಬೇಕೆಂದರೂ ದಿನಗಟ್ಟಲೇ ವಾರಗಟ್ಟಲೆ ಬ್ಯಾಂಕುಗಳ ಮುಂದೆ ಸಾಲುಗಟ್ಟಿ ನಿಲ್ಲಬೇಕು. ಈಗ ಬ್ಯಾಂಕ್ ಖಾತೆ ತೆರೆಯ ಹೊರಟರೆ ಅದು ಮುಗಿಯುವ ಹೊತ್ತಿಗೆ ಕಾಲ ಮಿಂಚಿರುತ್ತದೆ. ಪ್ರತಿನಿತ್ಯ ನಾಲ್ಕು ಸಾವಿರದಂತೆ ಹೊಸ ನೋಟು ಪಡೆಯ ಹೊರಟರೂ ದಿನವಿಡೀ ರಾತ್ರಿಯಿಡೀ ಸಾಲಲ್ಲಿ ನಿಲ್ಲಬೇಕು. ಕೇವಲ ನಾಲ್ಕೋ ನಾಲ್ಕೂವರೇ ಸಾವಿರಕ್ಕೆ ಒಂದೂವರೆಯಿಂದ ಎರಡು ದಿನಗಳ ಕಾಲ ಸಾಲುಗಟ್ಟಿ ನಿಲ್ಲಬೇಕೆಂದರೆ ಇನ್ನು ಮೂವತ್ತೋ ನಲವತ್ತೋ ಐವತ್ತೋ ಸಾವಿರಕ್ಕೆ ಹೊಸ ನೋಟು ಲಭ್ಯವಾಗುವುದು ಯಾವ ಕಾಲಕ್ಕೆ?

ಖದೀಮರು ಬಚಾವ್?

ದೇಶದ ಆರ್ಥಿಕ ವ್ಯವಸ್ಥೆಯ ಮೂಲ ಬೇರುಗಳಂತಿದ್ದ ಬಡಬಗ್ಗರು, ಕೂಲಿಗಳು, ಕಾರ್ಮಿಕರೆಲ್ಲರ ಪಾಡಿದು. ದೇಶಾದ್ಯಂತ ಬ್ಯಾಂಕುಗಳೆದುರು ಸಾಲುಗಟ್ಟಿ ನಿಂತು ಸತ್ತವರ ಸಂಖ್ಯೆ ಇಪ್ಪತ್ತಕ್ಕೂ ಮೇಲೇರಿದೆ. ಕರ್ನಾಟಕವೊಂದರಲ್ಲೇ ಕರೆನ್ಸಿಗೆ ಬಲಿಯಾದವರ ಸಂಖ್ಯೆ ಮೂರಕ್ಕೇರಿದೆ. ಇವರ್‍ಯಾರೂ ಅನುಕೂಲಸ್ಥರಲ್ಲ, ಸಾಮಾನ್ಯ ಪಂಚಾಯ್ತಿ ಸದಸ್ಯನಿಂದ ಹಿಡಿದು, ನಗರವಾಸಿ ಮುನ್ಸಿಪಾಲ್ಟಿ ಸದಸ್ಯರಾಗಲಿ, ಮಹಾನಗರ ಪಾಲಿಕೆಗಳ ಯಃಕಶ್ಚಿತ್ ಕೌನ್ಸಿಲರ್‌ಗಳ್ಯಾರೂ ಈ ರೀತಿ ಬ್ಯಾಂಕುಗಳ ಮುಂದೆ ಸಾಲುಗಟ್ಟಿ ನಿಂತಿದ್ದಿದೆಯೇ?

ಒಂದೆಡೆ ಜನಸಾಮಾನ್ಯರು, ಬಡಬಗ್ಗರು ತಮ್ಮ ಕೂಡಿಟ್ಟ ಪುಡಿಕಾಸಿನ ಪರಿವರ್ತನೆಗಾಗಿ ಬ್ಯಾಂಕುಗಳೆದುರು ನೂಕಾಟದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದರೆ ಮತ್ತೊಂದೆಡೆ ಅದೇ ಬ್ಯಾಂಕುಗಳು ಪ್ರಭಾವಿಗಳಿಗೆ ಹಿಂಬಾಗಿಲು ತೆರೆದಿದ್ದಾಗಿದೆ. ಐದುಕೋಟಿ ಕೊಟ್ಟರೆ ಸಾಕು ಇಪ್ಪತ್ತು ಕೋಟಿಯ ಹೊಸ ಕರೆನ್ಸಿ ಲಭ್ಯ. ಪೊಲೀಸ್ ಅಧಿಕಾರಿಗಳು, ಉದ್ದಿಮೆಪತಿಗಳು, ಕೋಟ್ಯಾಧಿಪತಿಗಳ್ಯಾರಾದರೂ ಸಾಲುಗಟ್ಟಿ ಬ್ಯಾಂಕುಗಳ ಮುಂದೆ ನಿಂತಿದ್ದಿದೆಯೇ? ಮಾರ್ವಾಡಿಗಳು, ವೈಟ್‌ಕಾಲರ್‌ಗಳು, ವ್ಯಾಪಾರಸ್ಥರಿಗೆಲ್ಲ ಎರಡು ಸಾವಿರದ ಹೊಸ ಕರೆನ್ಸಿಯ ಕಂತೆಕಂತೆಗಳು ಬಂದಿದ್ದಾದರೂ ಎಲ್ಲಿಂದ? ನಾನು ಐನೂರು, ಸಾವಿರ ನೋಟುಗಳನ್ನು ರದ್ದು ಮಾಡಿದ್ದರಿಂದಾಗಿ ದೊಡ್ಡದೊಡ್ಡ ಖದೀಮರೆಲ್ಲ ಬ್ಯಾಂಕುಗಳ ಮುಂದೆ ಸಾಲುಗಟ್ಟಿ ನಿಲ್ಲುವಂತಾಗಿದೆ ಎಂದು ಪ್ರಧಾನಿ ಮೋದಿಯೇನೋ ಬಡಾಯಿ ಕೊಚ್ಚಿರಬಹುದು.

ಆದರೆ ಯಾವೊಬ್ಬ ಶ್ರೀಮಂತರೂ ಬ್ಯಾಂಕುಗಳ ಮುಂದೆ ಸಾಲುಗಟ್ಟಿ ನಿಂತಿರುವುದು ಕಾಣಿಸುತ್ತಿಲ್ಲ. ಕೋಟ್ಯಾಧಿಪತಿ ಗಳಾಗಲಿ, ಉದ್ದಿಮೆಪತಿಗಳಾಗಲಿ, ಮಾರ್ವಾಡಿಗಳಾಗಲಿ, ಅಧಿಕಾರಿಗಳಾಗಲಿ ಯಾರೊಬ್ಬರೂ ಬ್ಯಾಂಕಿನ ಮುಂದೆ ಸಾಲುಗಟ್ಟಿ ನಿಂತು ಪ್ರಾಣ ಕಳಕೊಂಡಿಲ್ಲ, ಏಕೆ? ಬಡವರಿಗಾದರೆ ದಿನಗಟ್ಟಲೆ ವಾರಗಟ್ಟಲೆ ಸಾಲುಗಟ್ಟಿ ನಿಲ್ಲಿಸಿ ಸತಾಯಿಸುವ ಬ್ಯಾಂಕುಗಳು ಈ ಅನುಕೂಲಸ್ಥರಿಗೆಲ್ಲ ಕಂತೆಕಂತೆ ಹೊಸ ನೋಟುಗಳನ್ನು ಕಳಿಸಿದ್ದಾದರೂ ಹೇಗೆ ಎಲ್ಲಿಂದ?

ಕಪ್ಪುಹಣದ ಖದೀಮರೆಲ್ಲ ಅದೇ ನೆಮ್ಮದಿಯಿಂದಿದ್ದಂತಿಲ್ಲವೆ? ಬಡಬಗ್ಗರು, ಜನಸಾಮಾನ್ಯರು, ಕೆಳಜಾತಿಯ ಕಾರ್ಮಿಕರು ಕೂಲಿಗಳು, ರೈತಾಪಿಗಳ ಹೊರತಾಗಿ ಬೇರೆ ಯಾರಿಗಾದರೂ ತೊಂದರೆಯಾಗಿರುವುದು ಏಕೆ ಗೋಚರಿಸುತ್ತಿಲ್ಲ?

ರಾ.ಸೋಮನಾಥ್




ಮೊದಲು ಆತ್ಮಹತ್ಯೆ ಮಾಡಿಕೊಳ್ಳುವವರ್‍ಯಾರೋ?

ಇವರು ರಂಗೋಲಿ ಪುಡಿ ಮಾರುವ ಹೆಂಗಸರು. ಕೋಲಾರದ ಕೆಜಿಎಫ್, ಬಂಗಾರಪೇಟೆ ಸುತ್ತಮುತ್ತಲ ಹಳ್ಳಿಗಳ ಕುಟುಂಬಗಳ ನಿರ್ಗತಿಕ ಕೂಲಿಗಳಾಗಿ ಬೆಂಗಳೂರಿಗೆ ಬಿದ್ದ ಇಂಥ ನೂರಕ್ಕೂ ಅಧಿಕ ಕುಟುಂಬಗಳು ಬೆಂಗಳೂರಿನಲ್ಲಿವೆ. ಈ ಹೆಂಗಸರಿರುವುದು ವಿಜಯನಗರದ ಮಾಳಗಾಳ, ಪಟ್ಟೇಗಾರ್ ಪಾಳ್ಯ ನಾಗರಬಾವಿ ಮುಂತಾದ ಏರಿಯಾಗಳ ಜೋಪಡಿ ಪಟ್ಟಿಗಳಲ್ಲಿ, ಇವರ ಗಂಡಂದಿರದ್ದು ಫುಟ್‌ಪಾತ್‌ಗಳಲ್ಲಿ ಚಪ್ಪಲಿ ಹೊಲಿಯುವ ಕಾಯಕ!

ಬೆಳಗ್ಗೆಯಾದರೆ ರಂಗೋಲಿ ಪುಡಿಗಳ ತಪ್ಪಲೆ ಹೊತ್ತು ಮನೆಮನೆ ಸುತ್ತಿ ಪುಡಿ ಮಾರುತ್ತಾರೆ. ಸೇರು ಪುಡಿಗೆ ಐವತ್ತು ರೂಪಾಯಿ, ಹತ್ತೋ ಇಪ್ಪತ್ತೋ ರೂಪಾಯಿಗೆ ಪುಡಿ ಖರೀದಿಸುವವರೂ ಉಂಟು. ದಿನಕ್ಕೆ ಏನಿಲ್ಲವೆಂದರೂ ಐನೂರು ರೂಪಾಯಿಯ ರಂಗೋಲಿ ಮಾರಿದರೆ ಬರುವ ಲಾಭ ಕಮ್ಮಿಯೆಂದರೂ ಇನ್ನೂರೈವತ್ತು. ಕುಡುಕ ಗಂಡಂದಿರು, ಮಕ್ಕಳ ಓದು, ಎರಡೊತ್ತಿನ ಗಂಜಿ, ಸಾಲದ್ದಕ್ಕೆ ಮೀಟರ್ ಬಡ್ಡಿ ಎಲ್ಲವನ್ನೂ ನಿಭಾಯಿಸಿದರೂ ಪಡೆದ ಸಾಲದ ಅಸಲು ಸಾಲವಾಗೇ ಉಳಿಯುತ್ತದೆಯೇ ಹೊರತು ಮುಕ್ತಿಯಂತೂ ಇಲ್ಲವೇ ಇಲ್ಲ, ಇಂಥದ್ದರಲ್ಲಿ ಇದ್ದಕ್ಕಿದ್ದಂತೆ ಐನೂರು ಸಾವಿರದ ನೋಟುಗಳು ರದ್ದಾದವಲ್ಲ, ಇವರ್‍ಯಾರ ಬಳಿಯೂ ಒಂದೇ ಒಂದು ಸಾವಿರದ್ದಾಗಲಿ, ಐನೂರರದ್ದಾಗಲಿ ನೋಟುಗಳಿಲ್ಲದೆ ಹೋದರೂ ತಾಪತ್ರಯ ವಕ್ಕರಿಸಿದ್ದು ಚಿಲ್ಲರೆಯಲ್ಲಿ.

ಇದ್ದಕ್ಕಿದ್ದಂತೆ ಹತ್ತು, ಇಪ್ಪತ್ತು, ಐವತ್ತು, ನೂರರ ನೋಟುಗಳಿಗೆ ಶುರುವಾದ ತತ್ವಾರದ ಫಲವಾಗಿ ಪುಡಿಕಾಸು ತೆತ್ತು ರಂಗೋಲಿ ಪುಡಿ ಖರೀದಿಸುವವರೇ ಇಲವಾಯ್ತು, ಒಂದೆರಡು ದಿನಕ್ಕೆ ಸರಿ ಹೋಯಿತೆಂದರೆ ವಾರ ಕಳೆದು ಹತ್ತು ದಿನಗಳಾಗುತ್ತಾ ಬಂದರೂ ಇನ್ನೂ ಹದಗೆಟ್ಟಿದೆಯೇ ಹೊರತು ಸುಧಾರಿಸುತ್ತಿಲ್ಲ, ರಂಗೋಲಿ ಪುಡಿ ಬೇಕಿದೆಯಾದರೂ ಖರೀದಿಸಲು ಚಿಲ್ಲರೆಯಿಲ್ಲ, ಐನರೋ ಸಾವಿರವೋ ಕೊಟ್ಟರೆ ವಾಪಸ್ಸು ಕೊಡಲು ಇವರಲ್ಲಿ ಚಿಲ್ಲರೆಯಿಲ್ಲ. ಹೀಗಾಗಿ ಪ್ರತಿನಿತ್ಯದ ಒಪ್ಪೊತ್ತು ಗಂಜಿಗೂ ಮತ್ತೆಮತ್ತೆ ಸಾಲ ಮಾಡಲೇಬೇಕಾದ ದುರ್ಗತಿ. ಇಪ್ಪತ್ತು ಸಾವಿರದ ಸಾಲಕ್ಕೆ ವಾರದ ಬಡ್ಡಿಯೇ ಎರಡೂವರೆ ಸಾವಿರ. ತಿಂಗಳೊಂದಕ್ಕೆ ಬಡ್ಡಿಯಾಗಿಯೇ ಹತ್ತು ಸಾವಿರ ಕಕ್ಕಬೇಕು. ಎರಡು ತಿಂಗಳಾದರೂ ವಾರಂಪ್ರತಿ ಎರಡೂವರೆ ಸಾವಿರದಂತೆ ಕಟ್ಟಿದ ಬಡ್ಡಿ ತೀರುತ್ತದೆಯೇ ಹೊರತು ಅಸಲು ಅಸಲಾಗಿಯೇ ಉಳಿಯುತ್ತದೆ. ಈಗ ಬಡ್ಡಿ ಕಟ್ಟುವುದಕ್ಕೂ ಗತಿಯಿಲ್ಲ, ಸಾಲ ಕೊಟ್ಟವನು ಏನು ಗೋಗರೆದರೂ ಬಿಡುವುದಿಲ್ಲ, ನಾಗರಬಾವಿ ಸುತ್ತಮುತ್ತಲ ನೂರಕ್ಕೂ ಅಧಿಕ ಇಂಥ ರಂಗೋಲಿ ನಿರ್ಗತಿಕರ ಪೈಕಿ ಮೊದಲು ಆತ್ಮಹತ್ಯೆ ಮಾಡಿಕೊಳ್ಳುವವರ್‍ಯಾರೋ ಗೊತ್ತಿಲ್ಲ...!



ಮೂವತ್ತು ರೂಪಾಯಿಗೆ ಐನೂರಕ್ಕೆಲ್ಲಿಂದ ಚಿಲ್ಲರೆ ತರಲಿ?

ಐನೂರೋ ಸಾವಿರದ್ದೋ ನೋಟು ಕೊಟ್ಟು ಕೇಜಿ ಬಾಳೆಹಣ್ಣು ಕೇಳುತ್ತಾರೆ. ಉಳಿಕೆ 470 ರೂಪಾಯಿಗೆ ನಾನೆಲ್ಲಿಂದ ಚಿಲ್ಲರೆ ತರಲಿ. ಅದೇನು ಕರ್ಮವೋ ಗೊತ್ತಿಲ್ಲ ಐನೂರು ಸಾವಿರದ ನೋಟುಗಳು ರದ್ದಾದಾಗಿನಿಂದಲೂ



ಮಾರುಕಟ್ಟೆಯಲ್ಲಿ ಚಿಲ್ಲರೆ ಕಾಸೇ ಕಾಣಿಸುತ್ತಿಲ್ಲ, ನೂರು, ಐವತ್ತು, ಇಪ್ಪತ್ತರ ನೋಟುಗಳೆಲ್ಲ ಅದೇನಾದವೋ ಎಲ್ಲಿ ಹೋದವೋ ದೇವರೇ ಬಲ್ಲ, ಐನೂರು ಸಾವಿರ ರದ್ದಾದ ಮೂರ್‍ನಾಲ್ಕು ದಿನಗಳ ತನಕ ಹಣ್ಣು ಮಾರುಕಟ್ಟೆಯ ಸಗಟು ವ್ಯಾಪಾರಿಗಳು ಹಳೇ ನೋಟು ಸ್ವೀಕರಿಸುತ್ತಿದ್ದವರು ಈಗ ಏಕಾಏಕಿ ಹೊಸ ನೋಟು ಕೊಡಿ ಅಥವಾ ಚಿಲ್ಲರೆ ಮಡಗಿ ಎನ್ನುತ್ತಿದ್ದಾರೆ. ಎಲ್ಲಿಂದ ತರೋಣ?


ಮಾರುಕಟ್ಟೆಯಲ್ಲಿ ಐಟಮ್ಮೂ ಸಿಗುತ್ತಿಲ್ಲ, ಸಾಲ ಮಾಡಿ ತಂದರೂ ಗಿರಾಕಿಗಳಿಗೆ ವಾಪಸ್ಸು ಮಾಡಲು ಚಿಲ್ಲರೆಯಿಲ್ಲ, ಹಿಂದಾದರೆ ದಿನಕ್ಕೆ ಮೂರೋ ಮೂರೂವರೆ ಸಾವಿರವೋ ವ್ಯಾಪಾರವಾಗುತ್ತಿದ್ದದ್ದು ಈಗ ಸಾವಿರಕ್ಕೆ ಬಂದು ನಿಂತಿದೆ. ಬಡ್ಡಿಯವರಿಗೇನು ಕೊಡುವುದು, ಪೊಲೀಸರಿಗೆಲ್ಲಿಂದ ತರುವುದು? ಹಾಗಂತ ಸುಮ್ಮನಿದ್ದು ಬಿಡೋಣವೆಂದರೆ ಹೊಟ್ಟೆಗೇನು ತಿನ್ನುವುದು?

ಇದು ಮಾಗಡಿ ರಸ್ತೆಯ ಫುಟ್‌ಪಾತ್ ಹಣ್ಣು ವ್ಯಾಪಾರಿ ಕೃಷ್ಣನ ದುಮ್ಮಾನ. ಉತ್ತರಿಸುವವರ್‍ಯಾರು? ಸಮಾಧಾನ ಹೇಳ್ವುದು?

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್

ಹುತ್ತವ ಬಡಿದ ಮೋದಿ





09 ⏮

ಕಡೆಗಣಿಸಿ ಬಿಜೆಪಿ ಪಕ್ಷದ ವೈಯಕ್ತಿಕ ಹಿತಾಸಕ್ತಿಗಳು (conflict of intrest) ಮೇಲುಗೈ ಸಾಧಿಸುತ್ತಿರುವುದು ಮತ್ತೆ ಮತ್ತೆ ಚರ್ಚೆಗೆ ಬರುತ್ತಿರುವ ಈ ಸಂದರ್ಭದಲ್ಲಿ ಈ ದಿಢೀರ್ ನಿರ್ಣಯವನ್ನು ಪ್ರಜ್ಞಾವಂತರು ವಿರೋಧಿಸುತ್ತಿದ್ದಾರೆ. ಮೊದಲನೆಯದಾಗಿ ನಾವೆಲ್ಲ ಅರಿತುಕೊಳ್ಳಬೇಕಾಗಿರುವುದೇನೆಂದರೆ ಕಾಳದಂಧೆ, ಕಪ್ಪು ಹಣ, ಕರೆನ್ಸಿ ಎಲ್ಲವನ್ನು ಪ್ರತ್ಯೇಕವಾಗಿ ನೋಡಬೇಕು. ಈ ಮೂರಕ್ಕೂ ಪರಸ್ಪರ ಸಂಬಂಧಗಳಿವೆ. ಹಾಗೆಯೇ ಕಪ್ಪು ಹಣವು ಭಾರತೀಯ ಕರೆನ್ಸಿ, ಬಂಗಾರ, ಸ್ಥಿರಾಸ್ತಿ ವಿದೇಶಿ ಕರೆನ್ಸಿ ಮತ್ತು ಇನ್ನಿತರ ರೂಪದಲ್ಲಿರುತ್ತದೆ. ಆದರೆ ಇಂದು ಮೋದಿ ಪ್ರಕಟಿಸಿದ ರೂ. 500 ಮತ್ತು 1000 ಬಳಕೆಯ ನಿಷೇಧವು ಕೇವಲ ಭಾರತೀಯ ಕರೆನ್ಸಿಯ ನಿಷೇಧವಾಗಿಯೇ ಪರಿಗಣಿಸಬೇಕು. ಇನ್ನಿತರ ಮೂಲದ ಕಪ್ಪುಹಣದ ಚಲಾವಣೆಯ ಕುರಿತು ಎರಡೂವರೆ ವರ್ಷಗಳಲ್ಲಿ ಯಾರೂ ಬಾಯ್ಬಿಟ್ಟಿಲ್ಲ. ಅದರಲ್ಲೂ ವಿದೇಶಿ ಬ್ಯಾಂಕುಗಳಲ್ಲಿ, ಸ್ವಿಸ್ ಬ್ಯಾಂಕುಗಳಲ್ಲಿ ಅಡಗಿಸಿಟ್ಟ ಕಪ್ಪುಹಣದ ಮೇಲಿನ ಸರ್ಜಿಕಲ್ ದಾಳಿಯ ಕುರಿತಾಗಿ ಮೋದಿ ಸಾಹೇಬರು ಜಾಣ ಮೌನ, ಜಾಣ ನಿರ್ಲಕ್ಷ್ಯ ಪ್ರದರ್ಶಿಸುತ್ತಿರುವುದರ ಅರ್ಥ ಇನ್ನು ಆ ಕಪ್ಪುಹಣವನ್ನು ಸಕ್ರಮಗೊಳಿಸಿದ್ದೇವೆ, ಅದನ್ನು ಮರಳಿ ತರುವ ಪ್ರಯತ್ನ ಕೈಬಿಡಲಾಗಿದೆ- ಎಂಬುದಷ್ಟೆ. ಬದಲಾಗಿ ಈ ಪ್ರಧಾನಿ ಎದೆ ಬಡಿದುಕೊಂಡು ಹೇಳುವಂತೆ ಇದರಿಂದ ದೇಶದಲ್ಲಿ ಕಪ್ಪು ಹಣ ನಿರ್ಮೂಲನೆ ಆಗುತ್ತದೆ, ಭಯೋತ್ಪಾದಕರಿಗೆ ಹಣದ ಮೂಲವನ್ನೇ ನಿಲ್ಲಿಸುತ್ತೇನೆ ಎನ್ನುವ ಬೂಸಿ ಬೊಗಳೆಯನ್ನಾಗಲಿ, ಇದನ್ನು 'ಕಾಳದಂಧೆಯ ಮೇಲೆ, ಭಯೋತ್ಪಾದನೆಯ ಮೇಲೆ ಸರ್ಜಿಕಲ್ ದಾಳಿ' ಎನ್ನುವ ಭಕ್ತರ ಭಟ್ಟಂಗಿತನವನ್ನು ಮಾತ್ರ ಒಪ್ಪಲು ಸಾಧ್ಯವೇ ಇಲ್ಲ. ಈ ಹಿಪಾಕ್ರಸಿಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕಾಗುತ್ತದೆ.

ನೆನಪಿಡಬೇಕಾದದ್ದೇನೆಂದರೆ ಈ ಅನಾಣ್ಯೀಕರಣದ ನಿರ್ಣಯ ಮೊದಲನೆಯದಲ್ಲ. 1946ರಲ್ಲಿ 1000 ಮತ್ತು 10000 ನೋಟುಗಳನ್ನು ನಿಷೇಧಿಸಲಾಗಿತ್ತು, ಮರಳಿ 1978ರಲ್ಲಿ ಜನತಾ ಸರ್ಕಾರ 1000, 5000, 10000 ಕರೆನ್ಸಿಗಳನ್ನು ನಿಷೇಧಿಸಿತ್ತು, ಆಗ ಆ ಎರಡೂ ಸರ್ಕಾರಗಳು ಅತ್ಯಂತ ತಣ್ಣಗೆ ಈ ನಿರ್ಣಯವನ್ನು ಪ್ರಕಟಿಸಿದ್ದವು. ಎಲ್ಲಿಯೂ ಎದೆ ತಟ್ಟಿಕೊಂಡಿರಲಿಲ್ಲ. ಒಂದು ಸಾಮಾನ್ಯ ಸಂಗತಿಯಂತೆಯೇ ಇಡೀ ದೇಶ ವರ್ತಿಸಿತ್ತು.

ಮೊದಲನೆಯದಾಗಿ ಇಲ್ಲಿ ಮನೆಯಲ್ಲಿ, ದಿಂಬಿನಡಿಯಲ್ಲಿ ಹಾಸಿಗೆಯಲ್ಲಿ ಕೂಡಿಟ್ಟಿರುವುದು ಕಪ್ಪು ಹಣ ಮಾತ್ರವಲ್ಲ, ಆದರ ಪ್ರಮಾಣವೂ ಹೆಚ್ಚಿಲ್ಲ. ರಿಸರ್ವ್ ಬ್ಯಾಂಕ್‌ನ ಮಾಹಿತಿಯ ಅನುಸಾರ ಇಂದು ದೇಶದಲ್ಲಿ ಚಲಾವಣೆಯಲ್ಲಿರುವ ಎಲ್ಲಾ ಕರೆನ್ಸಿಯ ಪೈಕಿ ಈಗ ನಿಷೇಧಗೊಂಡ ರೂ. 500 ಮತ್ತು 1000 ನೋಟುಗಳ ಚಲಾವಣೆ ಶೇಕಡಾ 80 ಪ್ರಮಾಣದಲ್ಲಿದೆ. ಅಂದರೆ ಕಪ್ಪು ಹಣ ಎಂದು ನಿಷೇಧಗೊಂಡ ಕರೆನ್ಸಿ ಬಿಳಿ ಹಣದ ರೂಪದಲ್ಲಿ ಶೇಕಡಾ 80ರ ಪ್ರಮಾಣದಲ್ಲಿ ಚಲಾವಣೆಯಲ್ಲಿದೆ? ದೇಶದ ಜಿಡಿಪಿಯ ಶೇಕಡಾ 12 ಪ್ರಮಾಣದಲ್ಲಿ ರೂ. 500 ಮತ್ತು 1000 ಕರೆನ್ಸಿ ಚಲಾವಣೆಯಲ್ಲಿದ್ದರೆ ಅದರಲ್ಲಿ ಶೇಕಡಾ 6 ಪ್ರಮಾಣದಲ್ಲಿ ಮಾತ್ರ ಕಪ್ಪು ಹಣ ಚಲಾವಣೆಯಲ್ಲಿದೆ. ಹಾಗಿದ್ದಲ್ಲಿ ಕೂಡಿಟ್ಟ, ಬಚ್ಚಿಟ್ಟ ಕಪ್ಪುಹಣದ ಪ್ರಮಾಣವೆಷ್ಟು? ಸರ್ಕಾರದ ಬಳಿ ರಿಸರ್ವ್ ಬ್ಯಾಂಕ್ ಬಳಿ ನಿಖರವಾದ ಮಾಹಿತಿ ಇದೆಯೇ? ಇಲ್ಲ, ಮತ್ತೊಂದೆಡೆ ಈ ಅಕ್ರಮವಾಗಿ ಸಂಪಾದಿಸಿದ ಕಪ್ಪು ಹಣವನ್ನು ಅಧಿಕಾರಿಗಳು, ರಾಜಕಾರಣಿಗಳು, ಬಂಡವಾಳಶಾಹಿಗಳು ಯಾವ ರೀತಿ ವಿಲೇವಾರಿ ಮಾಡುತ್ತಾರೆ, ಯಾವ ಯಾವ ವಲಯಗಳಲ್ಲಿ ತೊಡಗಿಸುತ್ತಾರೆ, ಯಾವ ಬಗೆಯಲ್ಲಿ ಕಪ್ಪು ಹಣವನ್ನು ಬಿಳಿಯನ್ನಾಗಿ ಪರಿವರ್ತಿಸುತ್ತಾರೆ ಎನ್ನುವುದನ್ನು ಪತ್ತೆ ಹಚ್ಚಿ ಅದರ ಮೂಲವನ್ನು, ಅಕ್ರಮ ಚಟುವಟಿಕೆಗಳನ್ನು ನಿರ್ಮೂಲನೆ ಮಾಡಬೇಕು. ಇದು ಕಪ್ಪು ಹಣದ ನಿಗ್ರಹಕ್ಕೆ ಸಹಕಾರಿಯಾಗುತ್ತದೆ. ಆದರೆ ಇದನ್ನು ಕೈಬಿಟ್ಟ ಮೋದಿ ಸರ್ಕಾರ ಅಮಾಯಕರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ. ಕಪ್ಪು ಹಣದ ಚಲಾವಣೆಯ ಒಂದು ಉದಾಹರಣೆ ಕೊಡುತ್ತೇನೆ. ಮಸಲ X ಎನ್ನುವ ಸರ್ಕಾರಿ ಅಧಿಕಾರಿ y ಎನ್ನುವ ವ್ಯಕ್ತಿಯೊಬ್ಬನಿಗೆ ಒಂದು ಕೆಲಸ ಮಾಡಿಕೊಟ್ಟಿರುತ್ತಾನೆ. ಅದಕ್ಕಾಗಿ ಈ y ಎನ್ನುವ ವ್ಯಕ್ತಿ ಅಧಿಕಾರಿಗೆ ಲಂಚದ ರೂಪದಲ್ಲಿ ಹಣವನ್ನು ಕೊಡುವುದಿಲ್ಲ, ಬದಲಾಗಿ y ಎನ್ನುವ ವ್ಯಕ್ತಿ ಮಾರುಕಟ್ಟೆಯಲ್ಲಿನ ಕೆಲವು ಷೇರುಗಳನ್ನು ಖರೀದಿಸುತ್ತಾನೆ. ಕೆಲ ತಿಂಗಳು, ವರ್ಷದ ನಂತರ ಅದರ ಮುಖಬೆಲೆ ಹೆಚ್ಚಿದ ನಂತರ ಆ ಎಲ್ಲಾ ಷೇರುಗಳನ್ನು X ಎನ್ನುವ ಸರ್ಕಾರಿ ಅಧಿಕಾರಿಗೆ ವರ್ಗಾಯಿಸಿಬಿಡುತ್ತಾನೆ. ಇಲ್ಲಿ ಒಂದು ಪೈಸೆಯಷ್ಟು ಹಣದ ವಹಿವಾಟು ನಡೆದಿರುವುದಿಲ್ಲ. ಆದರೆ ಲಂಚ ಸಂದಾಯವಾಗಿರುತ್ತದೆ.

ಕೆಳಹಂತದ ಸರ್ಕಾರಿ ಅಧಿಕಾರಿಗಳು, ಕಾರಕೂನರು ಸಂಗ್ರಹಿಸುವ ಲಂಚದ ಮೊತ್ತವು ಅಂದರೆ ಕಪ್ಪು ಹಣವು ಸಂಪೂರ್ಣವಾಗಿ ಪರ್ಸೆಂಟೇಜ್ ಲೆಕ್ಕದಲ್ಲಿ ವರ್ಗೀಕರಣಗೊಂಡು ಮೇಲಿನ ಹಂತದ ಅಧಿಕಾರಿಗಳ ಬಳಿ ತಲುಪುವಷ್ಟರಲ್ಲಿ ಬಿಳಿಯಾಗಿರುತ್ತದೆ. ಇನ್ನು ಅನೇಕ ಸಂಸ್ಥೆಗಳು ಕಪ್ಪು ಹಣವನ್ನು ಅಭಿವೃದ್ಧಿ ಶುಲ್ಕ, ವಿನಿಮಯ ಶುಲ್ಕ, ನವೀಕರಣದ ಶುಲ್ಕ, ಉಪಕರಣದ ಶುಲ್ಕ ಹೀಗೆ ಅನೇಕ ರೂಪಗಳಲ್ಲಿ ಚೆಕ್ ಮೂಲಕವೇ ಹಣವನ್ನು ಸ್ವೀಕರಿಸುತ್ತಾರೆ. ಇದು ಸಹ ಕಪ್ಪುಹಣವೆಂದು ಪರಿಗಣಿಸಲಾಗುವುದಿಲ್ಲ. ಇನ್ನು ಬಹುತೇಕ ರಾಜಕಾರಣಿಗಳು ಲಂಚದ ರೂಪದಲ್ಲಿ ಕಿಕ್‌ಬ್ಯಾಕ್ ರೂಪದಲ್ಲಿ ಸಂಗ್ರಹಿಸುವ ಕಪ್ಪುಹಣವು ರಿಯಲ್ ಎಸ್ಟೇಟ್‌ನಲ್ಲಿ, ಮಾಲ್‌ಗಳಲ್ಲಿ, ಶಿಕ್ಷಣ, ಆರೋಗ್ಯ ಸಂಸ್ಥೆಗಳಲ್ಲಿ, ಬೇನಾಮಿ ಅಕೌಂಟುಗಳಲ್ಲಿ, ವಿದೇಶಿ ಬ್ಯಾಂಕುಗಳಲ್ಲಿ, ಸ್ವಿಸ್ ಅಕೌಂಟುಗಳಲ್ಲಿ ಹೂಡಲಾಗುತ್ತದೆ. ಕೊನೆಗೆ ಚುನಾವಣೆಯಲ್ಲಿ ಮತದಾರರಿಗೆ ಹಂಚಲು ಉಳಿಸಿಕೊಂಡ ಹಣ ಮಾತ್ರ ಕಪ್ಪು ಹಣವಾಗಿರುತ್ತದೆ. ಈ ಮೊತ್ತದ ಹಣವು ಶೇಕಡಾ 5 ಪ್ರಮಾಣವನ್ನು ಸಹ ಮೀರುವುದಿಲ್ಲ. ಇಂದು ಕರೆನ್ಸಿಯ ನಿಷೇಧದ ಸಂದರ್ಭದಲ್ಲಿ ಈ ಮನೆಯಲ್ಲಿ, ದಿಂಬುಗಳ ಅಡಿಯಲ್ಲಿ, ಹಾಸಿಗೆಯಲ್ಲಿ, ನೆಲಮಾಳಿಗೆಯಲ್ಲಿ ಉಳಿದ ಈ ಶೇಕಡಾ 5 ಪ್ರಮಾಣದ ಕಪ್ಪು ಹಣವನ್ನು ನೂರಾರು ಬೇನಾಮಿ ವ್ಯಕಿಗಳ ಅಕೌಂಟಿನಲ್ಲಿ ಗರಿಷ್ಠ 2.5 ಲಕ್ಷ ಮೀರದಂತೆ (ಆದಾಯ ತೆರಿಗೆಯಿಂದ ಪಾರಾಗಲು) ಜಮಾ ಮಾಡುತ್ತಾರೆ. ಆ ಬೇನಾಮಿ ವ್ಯಕ್ತಿಗಳಿಗೆ ಕಮಿಷನ್ ಮೂಲಕ ಹಣ ಸಂದಾಯವಾಗುತ್ತದೆ. ಹಾಗಿದ್ದಲ್ಲಿ ನಿಜಕ್ಕೂ ಕಪ್ಪು ಹಣ ಬ್ಯಾಂಕುಗಳಿಗೆ ಹರಿದುಬಂದಿದೆಯೇ? ಖಂಡಿತ ಇಲ್ಲ, ಶ್ರಮಿಕರ, ಕೂಲಿ ಕಾರ್ಮಿಕರ, ಬಡಜನರ ದುಡಿತದ ಮಣ್ಣಿನಿಂದ, ಬೆವರಿನಿಂದ ತೇವವಾದ ನೋಟುಗಳು ಮಾತ್ರ ಜಮಾವಣೆ ಆಗುತ್ತಿವೆ. ಹೇಳಿ ಇದು ಯಾವ ಬಗೆಯ ಕಪ್ಪು ಹಣ?

ಆರ್ಥಿಕ ತಜ್ಞ ಪ್ರಭಾತ್ ಪಟ್ನಾಯಕ್ ಅವರು "ಬಚ್ಚಿಟ್ಟಿರುವುದೆಲ್ಲಾ ಕಪ್ಪು ಹಣ, ಚಲಾವಣೆಯಲ್ಲಿರುವುದೆಲ್ಲಾ ಬಿಳಿ ಹಣ ಎನ್ನುವುದು ತರ್ಕಹೀನ ವಾದ. ಕಪ್ಪು ಹಣವೆಂದರೆ, ಕಾಳದಂಧೆಯೆಂದರೆ ಅದು ಒಂದು ಚಟುವಟಿಕೆ. ಬಿಳಿ ಹಣದ ಚಟುವಟಿಕೆಯಂತೆ ಕಪ್ಪು ಹಣದ ಚಟುವಟಿಕೆ ಸಹ ಸದಾ ಚಾಲ್ತಿಯಲ್ಲಿರುತ್ತದೆ. ಎಲ್ಲಾ ಮೂಲದ ಹಣವು ಚಲಾವಣೆಯಲ್ಲಿರುತ್ತದೆ. ಕೆಲವೊಮ್ಮೆ ಪರಿಸ್ಥಿತಿಗೆ ಅನುಗುಣವಾಗಿ ಆ ಚಲಾವಣೆಯು ಸ್ಥಗಿತಗೊಂಡಿರುತ್ತದೆ. ಹಾಗೆಯೇ ಕಪ್ಪು ಹಣದ ವ್ಯವಹಾರ ಕರೆನ್ಸಿಯ ರೂಪದಲ್ಲಿರುತ್ತದೆ, ಸಾಮಾನ್ಯ ಹಣದ ವ್ಯವಹಾರ ಚೆಕ್ ರೂಪದಲ್ಲಿರುತ್ತದೆ ಎನ್ನುವುದೂ ಸಹ ಶುದ್ಧ ಸುಳ್ಳು. ಸಾಮಾನ್ಯ ಹಣದ ವ್ಯವಹಾರವೂ ಸಹ ಕರೆನ್ಸಿಯ ರೂಪದಲ್ಲಿರುತ್ತದೆ. ಕಪ್ಪು ಹಣದ ವ್ಯವಹಾರವು ಅನೇಕ ಬಾರಿ ಚೆಕ್ ರೂಪದಲ್ಲಿರುತ್ತದೆ. ಆಯ್ತು. ಈ ಸರ್ಕಾರವೇ ಹೇಳಿದಂತೆ ಕಪ್ಪು ಹಣ ಹೊಂದಿರುವವರಿಗೆ ಆರ್ಥಿಕ ನಷ್ಟ ಉಂಟಾಗುತ್ತದೆ ಎನ್ನುವುದನ್ನು ಒಪ್ಪೋಣ. ಏನೀಗ? ಮಸಲ ಒಂದು ಫ್ಯಾಕ್ಟರಿಗೆ, ಉಗ್ರಾಣಕ್ಕೆ ಬೆಂಕಿ ಬಿದ್ದು ಎಲ್ಲಾ ಭಸ್ಮ ಆಯ್ತೆಂದರೆ ಅದು ನಿಜಕ್ಕೂ ನಷ್ಟವೇ. ಒಂದು ಬಾರಿ ಸಂಭವಿಸುವ ನಷ್ಟವೆಂದೇ ಪರಿಗಣಿಸಲಾಗುತ್ತದೆ. ಅಷ್ಟೇ. ಮತ್ತೊಮ್ಮೆ ಆ ಬೂದಿಯಿಂದಲೇ ಉದ್ಯಮ ಶುರುವಾಗುತ್ತದೆ. ಈ ಕಪ್ಪುಹಣದ ಸಂಗ್ರಹದ ವಿಷಯದಲ್ಲಿಯೂ ಇದು ಸತ್ಯ. ಈ ಕಪ್ಪುಹಣದ ಚಲಾವಣೆಯನ್ನು, ಚಟುವಟಿಕೆಯನ್ನು ಪತ್ತೆಹಚ್ಚುವುದು ಅದರ ನಿಯಂತ್ರಣದ ಮೊದಲ ಹೆಜ್ಜೆ. ಇದಕ್ಕೆ ಪ್ರಾಮಾಣಿಕವಾದ, ಅತ್ಯಂತ ಜಾಗರೂಕತೆಯ, ವ್ಯವಸ್ಥಿತವಾದ ತನಿಖೆಯ ಅಗತ್ಯವಿದೆ" ಎಂದು ಹೇಳುತ್ತಾರೆ.

ಮುಕ್ತ ಮಾರುಕಟ್ಟೆಯ ಪ್ರತಿಪಾದಕ, ಮೋದಿಯವರ ಬೆಂಬಲಿಗರಾದ ಸ್ವಾಮಿನಾಥನ್ ಅಯ್ಯರ್ ಅವರು "ಶೇಕಡಾ 2 ಕಪ್ಪು ಹಣ ಮಾತ್ರ ಕರೆನ್ಸಿ ರೂಪದಲ್ಲಿರುತ್ತದೆ. ಈ ಕಪ್ಪುಹಣವು ಶೇಖರಣೆಯ ರೂಪದಲ್ಲಿರುತ್ತದೆ ಮತ್ತು ಚಲಾವಣೆಯ ರೂಪದಲ್ಲೂ ಇರುತ್ತದೆ. ಆದರೆ ಹಣದುಬ್ಬರದಿಂದ ಕೂಡಿಸಿಟ್ಟ ಕರೆನ್ಸಿಯು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ. ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿರುವ ಕರೆನ್ಸಿ ಮತ್ತು ಸ್ಥಿರಾಸ್ತಿಗಳ ಮೌಲ್ಯ ಮಾತ್ರ ವೃದ್ಧಿಯಾಗುತ್ತಿರುತ್ತದೆ. ಈ ಕಾರಣಕ್ಕಾಗಿಯೇ ಚಾಣಾಕ್ಷ ಉದ್ಯಮಿ ಹೂಡಿಕೆಯಲ್ಲಿ ತೊಡಗಿಸುತ್ತಾನೆ. ವಿದೇಶಗಳಲ್ಲಿ ಆಸ್ತಿ ಮಾಡುತ್ತಾನೆ. ಈ ರೂ. 500 ಮತ್ತು 1000 ನೋಟುಗಳ ನಿಷೇಧದಿಂದ ಈ ಕಪ್ಪು ಹಣವನ್ನು ಸಹ ಬಂಗಾರದಲ್ಲಿ ಪರಿವರ್ತಿಸುತ್ತಾರೆ. ಕಾಳದಂಧೆಯಲ್ಲಿ ಬಂಗಾರದ ನಾಣ್ಯಗಳ ಚಲಾವಣೆ ಹೆಚ್ಚಲಿದೆ" ಎಂದು ಹೇಳುತ್ತಾರೆ.

ಇನ್ನು ಈ ಮೋದಿ ಸರ್ಕಾರವು ಎಲ್ಲಾ ಬಿಟ್ಟ ಮಗ ಭಂಗಿ ನೆಟ್ಟ ಎನ್ನುವಂತೆ ಈ ಕರೆನ್ಸಿ ನಿಷೇಧವನ್ನೆ ಒಂದು ಕ್ರಾಂತಿ ಎನ್ನುವಂತೆ ಪ್ರಚಾರ ಮಾಡುತ್ತಿರುವುದು ನಿಜಕ್ಕೂ ಹಾಸ್ಯಾಸ್ಪದವಾಗಿದೆ. ಇಂದು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸುಮಾರು 6,00,000 ಕೋಟಿ ಮೊತ್ತದ ಸಾಲ ಹಣ ಬಾಕಿ ಇದೆ. ಅನೇಕ ಬ್ಯಾಂಕುಗಳು ದಿವಾಳಿಯಾಗುವ ಸ್ಥಿತಿಯ ಲ್ಲಿವೆ. ಜುಲೈ 2016ರಲ್ಲಿ ಕೇಂದ್ರ ಸರ್ಕಾರವು ಈ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಕಾರ್ಯ ನಿರ್ವಹಿಸಲು ಸುಮಾರು 23,000 ಕೋಟಿ ಹಣವನ್ನು ತೊಡಗಿಸಿದೆ ಎಂದು ವರದಿಯಾಗಿದೆ. ಅಂದರೆ ಬಂಡವಾಳಶಾಹಿಗಳಿಂದ ಸಾಲವನ್ನು ಜಪ್ತಿ ಮಾಡಲು ಅಸಮರ್ಥವಾ ಸೋತಿರುವ ಈ ಮೋದಿ ಸರ್ಕಾರ ಬ್ಯಾಂಕ ಸುಸ್ಥಿತಿಯಲ್ಲಿಡಲು ಜನರ ಹಣವನ್ನು ಪೋಲು ಮಾ ಆದಕ್ಕಾಗಿಯೇ ಈ ಅನಾಣ್ಯೀಕರಣ ಎನ್ನುವ ನಡೆಯುತ್ತಿದೆ. ಕಪ್ಪು ಹಣವನ್ನು ನಿಯಂತ್ರಿಸುತ್ತೇನೆ ಸರ್ಕಾರವು ಹೊಸದಾದ 2000 ಕರೆನ್ಸಿಯನ್ನು ಚ ತಂದಿದೆ. ಕರೆನ್ಸಿಯ denomination ಹೆ ಕಪ್ಪುಹಣದ ವಹಿವಾಟಿಗೆ ಬಲವರ್ಧನೆ ದೊ ಎನ್ನುವ ಸಾಮಾನ್ಯ ತಿಳಿವಳಿಕೆ ಈ ಮೋದಿ ಸ ಇಲ್ಲವೇ? ಇದೆ. ಅದಕ್ಕಾಗಿಯೇ ಈ 2000 ಇದು ಕಪ್ಪುಹಣದ ವಹಿವಾಟಿಗೆ ಸಹಕಾರಿಯಾಗಲಿದ ಈ ಹೊಸ ರೂ. 500, ರೂ 2000 ನೋ ಮುದ್ರಣಕ್ಕೆ ಸುಮಾರು 12,000 ಕ ವೆಚ್ಚವಾಗಲಿದೆಯಂತೆ. ಈ ನೋಟುಗಳ ಮು ಬಲಿಯಾಗುವ ಮರಗಳೆಷ್ಟು? ಇದು ತುಘಲಕ್ ದ ಮಾತ್ರವಲ್ಲ ಗೊತ್ತುಗುರಿಯಿಲ್ಲದ ಸ್ವೇಚ್ಛಾಚಾರದ ದ

ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಹತ್ತಿರವಿರುವ ಕಾರ್ಪೋರೇಟ್ ಸಂಸ್ಥೆಗಳಿಗೆ demonetiza ಕುರಿತು ಕೆಲವು ವಾರಗಳ ಮುಂಚಿತವಾಗಿ ಈ ಮ ತಿಳಿಸಲಾಗಿತ್ತು ಎನ್ನುವ ಆರೋಪವನ್ನು ನಿರಾಕ ಸಾಧ್ಯವಿಲ್ಲ, ಏಕೆಂದರೆ ಪಶ್ಚಿಮ ಬಂಗಾಳದ ಬಿಜೆಪಿ ಘ ಮೋದಿ ಪ್ರಕಟಿಸಿದ ಕರೆನ್ಸಿ ನಿಷೇಧದ ದಿನಾಂಕ ನ 8 ಕ್ಕಿಂತ ಎರಡು ದಿನ ಮೊದಲು ಕೊಲ್ಕತ್ತ ಬ್ 2 ಕೋಟಿ ಹಣವನ್ನು ಜಮಾ ಮಾಡಿದೆ ಎನ್ನುವ ವರದಿ ಈ ಮೇಲಿನ ಆರೋಪವನ್ನು ಪುಷ್ಟೀಕರಿ ಚುನಾವಣೆ ನಡೆಯುವ ಉತ್ತರ ಪ್ರದೇಶ ಮತ್ತು ಪ ರಾಜ್ಯಗಳಲ್ಲಿ ಈಗಾಗಲೇ ಹಣಕಾಸಿನ ವ್ಯವಸ ಮಾಡಿಕೊಂಡಿದೆ ಎನ್ನುವ ಆರೋಪದಲ್ಲಿಯೂ ಹು ಈ demonetization ಕಾರಣಕ್ಕಾಗಿ ಮ ಅಂಬಾನಿಯ ಜಿಯೋ ನೆಟ್‌ವರ್ಕ್ ಯೋಜನ ಸಹ ನವೆಂಬರ್‌ಗಿಂತ ಮೊದಲು ಪ್ರಾರಂಭಿಸಲ ಮತ್ತು ಅದು ಡಿಸೆಂಬರ್ 30ರವರೆಗೆ ಗ ನೀಡಲಾಯಿತು. ಈ ನಿಷೇಧಿತ ಕರೆನ್ಸಿಗಳ ಬದಲಾವ ಡಿಸೆಂಬರ್ 30ಕ್ಕೆ ಮುಗಿಯಲಿದೆ. ಇದು ಕಾಕತಾ ಮಾತ್ರವಲ್ಲ, ಮೊದಲೇ ತಿಳಿದಿತ್ತು ಎನ್ನುವ ಆರೋ ಒಟ್ಟನಲ್ಲಿ ಮೋದಿಯವರ ಈ ಸೋ ಕಾಲ್ಡ್ ಸ ದಾಳಿ ಅನುಮಾನಗಳ ಹುತ್ತವಾಗಿರುವುದಂತೂ

ಕಡೆಗೂ ಈ demonetizatio ಕಪ್ಪುಹಣವನ್ನು ನಿಯಂತ್ರಿಸುತ್ತೇನೆ' ಎನ್ನುವ ಮೋದಿ ನಿರ್ಧಾರಕ್ಕೆ ದೇಶಾದ್ಯಂತ ಪ್ರತಿರೋಧ ವ್ಯಕ್ತವಾ 2014ರ ಚುನಾವಣಾ ಭಾಷಣದಲ್ಲಿ ಸ್ವಿಸ್ ಬ್ಯಾಂ ಕಪ್ಪುಹಣ ತಂದು ಪ್ರತಿಯೊಬ್ಬ ಭಾರತೀಯನ ಅಕೌ 15 ಲಕ್ಷ ಇಡುತ್ತೇನೆ ಎಂದು ಬೊಗಳೆ ಮೋದಿಯವರ ಜುಮ್ಲಾ ಇಂದು ಬಯಲಾ ಬಕಾಸುರ ಬಂಡವಾಳಶಾಹಿಗಳೊಂದಿಗೆ ಮೋದಿ ಗೆಳೆತನ ಮತ್ತು ಇದರ ಕಾರಣಕ್ಕಾಗಿ ಆ ಕಾರ್ಪೊ ಸಂಸ್ಥೆಗಳ ಅಭಿವೃದ್ಧಿ ಹತ್ತು ಪಟ್ಟು ಹೆಚ್ಚಾಗಿರುವುದು ಚರ್ಚೆಯಾಗುತ್ತಿದೆ. ಇದು ಸಹ ಭ್ರಷ್ಟಾಚಾರವಲ್ಲವೇ ಮೋದಿಯನ್ನು ಆರಿಸಿದ ಮಧ್ಯಮವರ್ಗ ಪ್ರ ಕಳೆದ ಎರಡೂವರೆ ವರ್ಷಗಳ ಈ ಬಿಜೆಪಿ ಪಕ್ಷದ ಸಂಪೂರ್ಣ ಕುಸಿದುಹೋಗಿರುವುದೂ ಮತ ಎಲ್ಲದರಿಂದ ಜನರ ಗಮನ ಬೇರೆಡೆ ಸೆಳೆಯ ಕರೆನ್ಸಿ ನಿಷೇಧ, ಕಪ್ಪುಹಣ ಇತ್ಯಾದಿ ಜುಮ್ಲಾಗಳ


ಜನ ಪ್ರಜ್ಞಾವಂತರಾಗುತ್ತಿದ್ದಾರೆ ಎನ್ನುವ ನಂಬ ಸಮಾಧಾನ ನೀಡುತ್ತಿದೆ. ಆದರೆ 'ಅವರು ಕಡವಿದ್ದು ಯನ್ನಲ್ಲ, ಇನ್ನೂ ಬೆಳೆಯುತ್ತಿರುವ ಭಾರತವೆಂಬ ಕೂಸನ್ನು' ಎನ್ನುವ ಅಸ್ಗರ್ ಅಲಿ ಇಂಜಿನಿಯರ್ ಮಾತುಗಳು ಇಂದಿಗೂ ನಮ್ಮೊಳಗೆ ರಿ ಬೆಚ್ಚಿಬೀಳಿಸುತ್ತದೆ.


ಮರೆಯುವ ಮುನ್ನ

(ಅಂತರ್ಜಾಲ ಬ್ಲಾಗ್‌ನಲ್ಲಿ ಓದಿದ್ದು)

ಪನಾಮದಲ್ಲಿ ಶೇಖರಿಸಿದ ಹಣವನ್ನು ನೀನ
ಹಚ್ಚಲು ವಿಫಲವಾದರೆ
ಪೈಜಾಮದ ಜೇಬಿನೊಳಗೆ ಇಟ್ಟುಕೊಂಡವರ
ದಾಳಿ ಮಾಡು,
ನೀನು ಮಲ್ಯ ಅಥವಾ ಲಲಿತ್ ಮೋದಿ
ಬೆದರಿಸಲು ಅಸಮರ್ಥನಾದರೆ
ಪ್ರತಿಯೊಬ್ಬ ವ್ಯಾಪಾರಿ ತನ್ನ ಧೋತಿಯೊಳ
ಮಾಡಿಕೊಳ್ಳುವಂತೆ ನೋಡಿಕೋ,
ಕಿಂಗ್ ಫಿಶರ್ ಮಾಲೀಕ ಹಾರಿ ಹೋಗು
ತಡೆಯಲು ಸಾಧ್ಯವಾಗದೇ ಹೋದರೆ
ಆಟೋ ಚಾಲಕರು, ರಿಕ್ಷಾ ಚಾಲಕರನ್ನು ಬ
ಸರ್ಜಿಕಲ್ ದಾಳಿಯಿಂದ ನಿನಗೆ ಚುನಾವ
ಗೆಲ್ಲಲು ಸಾಧ್ಯವಾಗದೇ ಹೋದರೆ
ಪ್ರತಿಯೊಬ್ಬ ಪ್ರಜೆಯೂ ಹಣಕಾಸಿನ
ತುತ್ತಾಗುವಂತೆ ನೋಡಿಕೋ.

■ ಬಿ. ಶ್ರೀಪಾದ







...ೋದಿ ಮಾರೋ ಎನ್ನುತ್ತಿರುವ ಭಕ್ತರು

...ಮ್ಮ ಕರಾವಳಿಯಲ್ಲಿ ಬಿಜೆಪಿ ಮತ್ತು ಸಂಘ ...ದ ಬೆನ್ನೆಲುಬಾಗಿದ್ದವರು ಕೊಂಕಣಿ ಸಾರಸ್ವತರು, ...ು ಮತ್ತು ಬಂಟ ಮುಂತಾದ ಧನಿಕ ವ್ಯಾಪಾರಿ ...ು. ಆದರೆ ಈಗ ಮೋದಿ ಸರಕಾರ 500 ... 1000 ರೂಪಾಯಿಯ ಹಳೆ ನೋಟುಗಳನ್ನು ...ಮಾಡಿದ ಮೇಲೆ ಈ ಧನಿಕ ಹಿಂದೂತ್ವವಾದಿಗಳು ...ದ್ದಿದ್ದಾರೆ.

...ಮೋ ನಮೋ ಎನ್ನುತ್ತಿದ್ದವರೆಲ್ಲಾ ಒಂದೇ ದಿನದಲ್ಲಿ ...ಗೆ ಮಾರೋ ಮಾರೋ ಎನ್ನುತ್ತಿದ್ದಾರೆ. ಕಪ್ಪುಹಣ ...ಿ ಹೊಂದಿದ್ದು ಇವೇ ಮೇಲ್ಜಾತಿಗಳು. ವಿನಾಯಕ ... ತನ್ನದೇ ಜಾತಿ ತನ್ನದೇ ಬಿಜೆಪಿ ಪಕ್ಷದ ನರಿ ...ಿಂದ ಹೇಗೆ ಕೊಲೆಯಾದನೋ ಅದೇ ತರಹ ...ರಿ ಸಮುದಾಯಗಳು ತಾವೇ ಫೈನಾನ್ಸ್ ಮಾಡಿ ... ಅಧಿಕಾರಕ್ಕೆ ತಂದ ಮೋದಿಯಿಂದ ಬೆನ್ನಿಗೆ ...ೊಂಡರು ಎಂದು ಎಲ್ಲಾ ವ್ಯಾಪಾರಿ ಜಾತಿಗಳವರು, ...ಾ ಜೈನರು ಈಗ ಒಮ್ಮೆಲೇ ಪರಿತಪಿಸುತ್ತಿದ್ದಾರೆ. ...ನಿ, ಅದಾಣಿ, ಬಾಬಾ ರಾಮ್‌ದೇವ್ ಹಾಗೂ ...ಾತಿನ ಬನಿಯಾ ಜೈನರಿಗೆ ಇಂತಹ ಒಂದು ಕ್ರಮ ...ಿ ಸರಕಾರ ಕೈಗೊಳ್ಳುತ್ತದೆ ಎಂದು ಮೊದಲೇ ...ತ್ತಂತೆ. ಅಮಿತ್ ಶಾ ತನ್ನ ಜಾತಿಬಾಂಧವರ ಕೈ ... ಬಿಡುವುದಿಲ್ಲ ಎಂಬ (ಕು)ಖ್ಯಾತಿ ಇದೆ ತಾನೇ. ...ಗಿ ಮುಂಬೈ ಮತ್ತು ಗುಜರಾತಿನ ಬನಿಯಾಗಳೆಲ್ಲಾ ... ಕಪ್ಪು ಹಣವನ್ನು ಚೆನ್ನವಾಗಿ ಒಂದು ತಿಂಗಳ ಮೊದಲೇ ...ರ್ತಿಸಿದ್ದರಂತೆ. ಆದರೆ ಇದು ಗೊತ್ತಿಲ್ಲದೇ ಈಗ ...ಕ್ಕೆ ಬಿದ್ದಿರುವವರು ಉತ್ತರ ಭಾರತ ಮತ್ತು ದಕ್ಷಿಣ ...ದ ವ್ಯಾಪಾರಿ ಸಮುದಾಯಗಳು.

...ಮೂಲತಃ ಮೋದಿಯ ಈ ನೋಟು ರದ್ದತಿಯ ...ಲ್ ಸ್ಟ್ರೈಕ್ ಉತ್ತರ ಪ್ರದೇಶ ಹಾಗೂ ಪಂಜಾಬಿನ ಚುನಾವಣೆ ಕೇಂದ್ರೀಕರಿಸಿ ಮಾಡಿದ್ದು. ಅಂದರೆ ಕೆಲವೇ ತಿಂಗಳ ನಂತರ ಜರುಗಲಿರುವ ಆ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಎಸ್‌ಪಿ, ಬಿಎಸ್‌ಪಿ ಮತ್ತು ಕಾಂಗ್ರೆಸ್ ಪಕ್ಷಗಳು ಸಾವಿರಾರು ಕೋಟಿ ರೂಪಾಯಿ ನಗದು ಹಣವನ್ನು ಒಟ್ಟು ಮಾಡಿ ಗುಟ್ಟಾದ ಸ್ಥಳದಲ್ಲಿ ಇಟ್ಟಿದ್ದರಂತೆ. ಆದರೆ ಈಗಿನ ನೋಟು ರದ್ದಿನಿಂದಾಗಿ ಈ ವಿರೋಧ ಪಕ್ಷಗಳ ಸೊಂಟ ಮುರಿದು ಕಾಲೇ ಕತ್ತರಿಸಿದಂತಾಗಿದೆ.

ಮುಂದಿನ ಚುನಾವಣೆಗೆ ಈ ಪಕ್ಷಗಳು ಖಾಲೀ ಕೈಯಲ್ಲಿ ಹೋಗಬೇಕಾಗುತ್ತದೆ. ಆದರಿಂದ ಅವರ ಸೋಲು ಖಚಿತ. ಆದರೆ ಬಿಜೆಪಿಯವರಿಗೆ ಈ ನೋಟು ರದ್ದತಿ ಒಳಗೊಳಗೇ ಒಂದು ತಿಂಗಳ ಮೊದಲೇ ಗೊತ್ತಿದ್ದುದರಿಂದ ಅವರು ತಮ್ಮ ಪಕ್ಷದ ಕಪ್ಪು ಹಣ ಸರಿಯಾದ ರೂಪಕ್ಕೆ ಬದಲಿಸಿ ಇಟ್ಟಿದ್ದರಂತೆ. ಮುಂಬೈಯಲ್ಲಿರುವ ನನಗೆ ಒಂದು ತಿಂಗಳ ಮೊದಲೇ ಇಂತಹ ಒಂದು ತೀವ್ರ ಕ್ರಮ ಮೋದಿ ಸರಕಾರ ಕೈಗೊಳ್ಳುವ ಗುಟ್ಟಾದ ಯೋಜನೆ ಹೊಂದಿದೆ ಎಂದು ನನ್ನ ಗುಜರಾತಿ ಶೇರ್ ಬ್ರೋಕರ್ ಮುನ್ನೆಚ್ಚರಿಕೆ ಕೊಟ್ಟಿದ್ದ. ಆರ್‌ಎಸ್‌ಎಸ್ ಸಹ ತನ್ನ ಶಾಖೆಗಳ ಮುಖಾಂತರ ಇಂತಹ ಒಂದು ತೀವ್ರ ಯೋಜನೆ ಮೋದಿ ಸರಕಾರಕ್ಕೆ ಇದೆ ಎಂದು, ತನ್ನ ಸದಸ್ಯರಿಗೆ ಮುನ್ನೆಚ್ಚರಿಕೆ ಕೊಟ್ಟಿತ್ತಂತೆ.

ಈ ಗುಪ್ತ ಮಾಹಿತಿಯಿಂದ ಕಪ್ಪು ಹಣ ಹೊಂದಿರುವ ಬಹಳಷ್ಟು ಹಿಂದೂತ್ವವಾದಿಗಳು ಪ್ರಯೋಜನ ಪಡೆಯಲು ಸಾಧ್ಯವಾಗಿದೆಯಂತೆ. ಇದುವೇ ನೋಡಿ ಸಂಘಿಗಳ ಭಯಂಕರ ದೇಶಭಕ್ತಿ.


- ಪ್ರಶೀಶ್ ಕುಮಾರ್ ಗಾಣಿಗ, ಮುಂಬೈ



...ಅಂತರರಾಷ್ಟ್ರೀಯ ಸಾಮಾಜಿಕ ಜಾಲತಾಣಗಳ ...ಷಕ ಸಂಸ್ಥೆಯಾದ ಟ್ವಿಪ್ಲೊಮಸಿ ಈಗ ...ಂಗಪಡಿಸಿರುವ ಅಂಕಿಅಂಶಗಳ ಪ್ರಕಾರ ಮೊನ್ನೆ 500 ... 1000 ನೋಟುಗಳ ರದ್ದತಿಯ ಘೋಷಣೆ ಮಾಡಿದ ... ಮೋದಿಯವರ 50 ಸಾವಿರ ಟ್ವೀಟರ್ ...ೋವರ್ಸ್ (ಅಭಿಮಾನಿಗಳು) ಹೆಚ್ಚಾದರಂತೆ. ಆದರೆ ...ದಿನ ಸಾಮಾನ್ಯ ಜನರ ಸಂಕಷ್ಟ ನೋಡಿ ...ರ್ಣಕರವಾಗಿ ಈ ಸಂಖ್ಯೆ ತೀವ್ರವಾಗಿ ಕಡಿಮೆಯಾಗಲು ...ಾಗಿ ಬುಧವಾರ ಮತ್ತು ಗುರುವಾರ ಎರಡೇ ದಿನದಲ್ಲಿ ...ರು ಮೂರೂವರೆ ಲಕ್ಷ ಫಾಲೊವರ್‌ಗಳು ಖಾತೆ ...ದರಂತೆ. ಇದು ನೋಟು ರದ್ದತಿ ಎಷ್ಟು ತೀವ್ರ ...ಕ್ರೋಶ ಹುಟ್ಟಿಸಿದೆ ಎಂಬುದಕ್ಕೆ ಸಾಕ್ಷಿ. ಮುಂದಿನ ...ಗಳಲ್ಲಿ ಈ ನೋಟು ರದ್ದತಿಯ ಕೆಟ್ಟ ಪರಿಣಾಮ ...ಣ ಜನರ ಸ್ವಂತ ಅನುಭವಕ್ಕೆ ಬರಲು ತೊಡಗಿದಂತೆ ...ಸ ಕನಿಷ್ಠ ಇಪ್ಪತ್ತೈದು ಸಾವಿರ ಅಭಿಮಾನಿಗಳು ...ದಿಯ ಟ್ವೀಟರ್ ತೊರೆಯಬಹುದು ಎಂದು ಟ್ವಿಪ್ಲೊಮಸಿ ಅಂದಾಜು ಮಾಡಿದೆಯಂತೆ. ಮೋದಿಯವರ ಒಟ್ಟು 2 ಕೋಟಿ 38 ಲಕ್ಷ ಟ್ವೀಟರ್ ಫಾಲೋವರ್ ಗಳಲ್ಲಿ ಸುಮಾರು ಒಂದು ಕೋಟಿ ನಕಲಿ ಖಾತೆದಾರ ರಾಗಿದ್ದಾರೆ. ಹಾಗೂ ಉಳಿದ ಒಂದು ಕೋಟಿ ಪಾಲೋವರ್ಸ್ ಗುಜರಾತ್ ಹಾಗೂ ಮುಂಬೈಯ ಲ್ಲಿರುವ ಗುಜರಾತಿಗಳು ಮಾತ್ರವಂತೆ. ಕೇವಲ ಬಾಕಿ 40 ಲಕ್ಷ ಫಾಲೋವರ್ಸ್ ಮಾತ್ರ ಭಾರತದ ಉಳಿದ ಭಾಗದವರಂತೆ. ಹೀಗೆ ಮೋದಿಯವರ ಜನಪ್ರಿಯತೆ ಕೇವಲ ಒಂದೇ ಪ್ರದೇಶಕ್ಕೆ ಹಾಗೂ ಒಂದೇ ಭಾಷಿಕ ಗುಂಪಿಗೆ ಸೀಮಿತವಾಗಿರುವುದು ಕಂಡುಬರುತ್ತದೆ.

ದಿಲ್ಲಿಯಲ್ಲಿ ಮೋದಿಯವರ ಪ್ರಚಾರ ವಿಭಾಗ (ಪಿಆರ್‌ಓ) ಒಂದು ಪ್ರತ್ಯೇಕ ಐಟಿ ಸೆಲ್ ಹೊಂದಿದ್ದು ಅದರಲ್ಲಿ 50 ಜನರನ್ನು ನೇಮಿಸಲಾ ಗಿದ್ದು ಅವರ ಕೆಲಸವೇ ಮೋದಿಯ ಪರವಾಗಿ ನಕಲಿ ಟ್ವೀಟರ್ ಖಾತೆ ಸೃಷ್ಟಿಸುವುದು ಮತ್ತು ಸಾಮಾಜಿಕ ಜಾಲತಾಣ ಗಳಲ್ಲಿ ಮೋದಿ ಪರವಾಗಿ ಹಾಗೂ ರಾಹುಲ್ ಗಾಂಧಿ- ಕೇಜ್ರಿವಾಲ್ "ವಿರುದ್ಧ" ಪ್ರತಿ ದಿನ ಏನಾದರೂ ಬರೆಯುತ್ತಾ ಇರುವುದು. ಇವರೇ ರಾಹುಲ್ ಗಾಂಧಿ ಮತ್ತು ಕೇಜ್ರಿವಾಲ್ ಮೇಲೆ ಅವಮಾನಕರ ಜೋಕ್ ಗಳನ್ನೂ ಹೆಣೆದು ಸೋಷಿಯಲ್ ಮೀಡಿಯಾದಲ್ಲಿ ಹರಿಯಬಿಡುವುದು. ಇದಕ್ಕಾಗಿಯೇ ಅವರಿಗೆ ಒಬ್ಬೊಬ್ಬರಿಗೆ ತಿಂಗಳಿಗೆ ಒಂದು ಲಕ್ಷ ಸಂಬಳ!

...ೋದಿಯ ನಕಲಿ ಜನಪ್ರಿಯತೆಯ ಒಳಗುಟ್ಟು



ಪ್ರತಿಯೊಂದು ರಾಜ್ಯದಲ್ಲಿ ಪ್ರತಿಯೊಂದು ಪ್ರಾಂತೀಯ ಭಾಷೆಯಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಮೋದಿಯ ಗುಣಗಾನ ಮಾಡಲು ಆಯಾ ರಾಜ್ಯದ ರಾಜಧಾನಿಯಲ್ಲಿ ಬಿಜೆಪಿ ಅಥವಾ ಆರ್‌ಎಸ್‌ಎಸ್ ಕಚೇರಿಯಲ್ಲಿ ಇಂತಹ ಐಟಿ ಸೆಲ್‌ಗಳಿವೆ. ಇಲ್ಲಿ ಕೆಲಸ ಮಾಡುವ ವರಿಗೂ ಭರ್ಜರಿ ಸಂಬಳ ಸಿಗುತ್ತದೆ. ಇದುವೇ ಮೋದಿಯವರ (ನಕಲಿ) ಜನಪ್ರಿಯತೆಯ ಒಳಗುಟ್ಟು.

- ಆರ್. ಜಗದೀಶ್ ಗಾಂಭೀರ್, ಬೆಂಗಳೂರು

ವಿಕೃತ ಆನಂದ ಅನುಭವಿಸುವ ಸ್ಯಾಡಿಸ್ಟ್ ಮೋದಿ



ಈ ತಿಂಗಳ ತಾ. 8ರ ಮಧ್ಯರಾತ್ರಿಯಿಂದ ದೇಶದಲ್ಲಿ ಚಲಾವಣೆಯಲ್ಲಿದ್ದ 500 ಮತ್ತು 1000 ರೂಪಾಯಿಗಳ ನೋಟುಗಳನ್ನು ನಿಷೇಧಿಸಿ ಬದಲಿ ನೋಟುಗಳನ್ನು ಚಲಾವಣೆಗೆ ತರುವುದರ ಮೂಲಕ ದೇಶದಲ್ಲಿ ಕಪ್ಪು ಹಣವನ್ನು ಹೊಂದಿರುವವರನ್ನು ಒಂದೇ ಏಟಿಗೆ ಹೊಡೆದುರುಳಿಸುವುದಾಗಿ ಪ್ರಧಾನಿ ಮೋದಿ ಹೇಳಿದರು. ಆದರೆ ಆತನ ನಿಜವಾದ ಗುರಿ ಇರುವುದು ದೇಶದ ಕೆಳ ಮತ್ತು ಬಡವರ್ಗದ ಜನತೆಯ ವಿರುದ್ಧ. ಈ ಕಾರಣಕ್ಕಾಗಿಯೇ ಬ್ಯಾಂಕುಗಳನ್ನು ಕೆಲವು ದಿನ ಮುಚ್ಚಿಸಿ ನೋಟುಗಳನ್ನು ಬದಲಾಯಿಸಿಕೊಳ್ಳಲು ಅವಕಾಶ ಕೊಟ್ಟಿರುವುದು ಪೆಟ್ರೋಲ್ ಬಂಕ್, ವಿಮಾನನಿಲ್ದಾಣ, ಖಾಸಗಿ ಆಸ್ಪತ್ರೆ ಮುಂತಾದ ಕಪ್ಪುಹಣ ಸಂಗ್ರಹಾಕಾರರಿಗೆ ಹೊರತು ಸಾಮಾನ್ಯ ಜನರು ಹೋಗುವ ದಿನನಿತ್ಯದ ದಿನಸಿ ತರಕಾರಿ ಅಂಗಡಿಗಳು ಮತ್ತು ಸಣ್ಣ ಹೋಟೆಲ್ಲುಗಳಲ್ಲ. ಅಂದರೆ ಬಡವರಿಗೆ ಆಹಾರ ಬಟ್ಟೆಯು ಸಹ ಸಿಗಬಾರದೆಂಬುದು ಮತ್ತು ಇವರ ಮಕ್ಕಳು ಕೂಡ ವಿದ್ಯಾಭ್ಯಾಸವನ್ನು ಹಾಳುಮಾಡಿ ಕೊಳ್ಳಬೇಕೆಂಬುದೇ ಮೋದಿಯ ಮೂಲ ಉದ್ದೇಶ. ಹೀಗೆ ಜನರನ್ನು ಅತಂತ್ರ ಸ್ಥಿತಿಗೆ ನೂಕಿದ ಮೋದಿ ಮಹಾಶಯ ಮಾಮೂಲಿಯಂತೆ ತಲೆ ತಪ್ಪಿಸಿಕೊಂಡು ಜಪಾನ್ ದೇಶಕ್ಕೆ ಹೋಗಿ ಮಜಾ ಮಾಡುತ್ತಾ ಕಾಲಕಳೆದರು. ತನ್ನ ದೇಶದ ಬಡಜನರ ಪರದಾಟವನ್ನು ದೃಶ್ಯ ಮಾಧ್ಯಮಗಳಲ್ಲಿ ಕಂಡು ವಿಕೃತ ಆನಂದ ಅನುಭವಿಸಿರಬೇಕು.

ಹಿಂದಿನ ಕಾಂಗ್ರೆಸ್ ಸರ್ಕಾರದ 10 ವರ್ಷಗಳ ಆಡಳಿತ ನೋಡಿದ ಜನತೆ ಬದಲಾವಣೆ ಬಯಸಿ ಹೆಚ್ಚಿನ ಅನುಕೂಲಗಳನ್ನು ನಿರೀಕ್ಷಿಸಿ ಮೋದಿ ಸರ್ಕಾರವನ್ನು ಅಭೂತವಾಗಿ ಆಯ್ಕೆ ಮಾಡಿದ್ದರು. ಆದರೆ ಹಿರಿಯ ಜನರ ನಿರೀಕ್ಷೆ ಇರಲಿ ಯುವ ಜನತೆಯ ಉದ್ಯೋಗದ ನಿರೀಕ್ಷೆಯನ್ನೂ ನಿರ್ಲಕ್ಷಿಸಿದ್ದರಿಂದ ದೊಡ್ಡ ರಾಜ್ಯಗಳ ಚುನಾವಣೆಗಳಲ್ಲಿ ಬಿಜೆಪಿ ಪಕ್ಷ ಸೋಲುತ್ತಾ ಬಂದಿದೆ. 2017ರಲ್ಲಿ ನಡೆಯುವ ದೊಡ್ಡ ರಾಜ್ಯ ಚುನಾವಣೆಗಳಾದ ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಮತ್ತು ಮಾಯಾವತಿ ನಡುವೆ ಸ್ಪರ್ಧೆ ಇದ್ದರೆ, ಪಂಜಾಬ್‌ನಲ್ಲಿ ಕೇಜ್ರಿವಾಲ್ ಪಕ್ಷ ಮುಂದು, ಗುಜರಾತ್‌ನಲ್ಲಿ ಕಾಂಗ್ರೆಸ್ ಪಕ್ಷ ಮುಂದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಇದರಿಂದ ಬಿಜೆಪಿ ಕಂಗಾಲಾಗಿದೆ. ಆದ್ದರಿಂದಲೇ ಅದು ಕೆಳವರ್ಗದ ಮತ್ತು ಬಡಜನರ ವಿರುದ್ಧ ತಿರುಗಿಬಿದ್ದಿದೆ. ಅದರ ಪಾಪಕಾರ್ಯದಲ್ಲಿ ಕೆಲವು ಪತ್ರಿಕೆಗಳು ಮತ್ತು ಪೂರ್ಣ ಪ್ರಮಾಣದಲ್ಲಿ ಟಿ.ವಿ. ಮಾಧ್ಯಮಗಳು ಕೈಜೋಡಿಸಿವೆ.

ಈಗ ತಂದಿರುವ ರೂ. 2000 ನೋಟು ಸಹ ಜಾರಿಗೆ ಬಂದ ಒಂದೆ ದಿನಕ್ಕೆ ನಕಲಿ ಆಗಿ ಹರಿದಾಡುತ್ತಿದೆ ಎಂದು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದೆ. ಅತ್ಯುನ್ನತ ಹುದ್ದೆಯಲ್ಲಿರುವ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಮತ್ತು ಕೆಲವು ನ್ಯಾಯಾಧೀಶರು ಇದರ ಪೂರ್ವಾಪರವನ್ನಾಗಲಿ, ಬಡವರಿಗಾಗುತ್ತಿರುವ ತೊಂದರೆಯನ್ನಾಗಲಿ ಯೋಚಿಸದೇ ಇದನ್ನು ಸ್ವಾಗತಿಸಿರುವುದು ದುರಂತ.

- ಹೆಚ್. ಕೆ. ಈರಪ್ಪ, ಬೆಂಗಳೂರು

ಲಾಭ ಯಾಕೆ ಬಡವರಿಗೆ ಸಿಗುತ್ತಿಲ್ಲ?

ಹಳೆಯ 500, 1000 ರೂ. ಬದಲಾಗಿ ಹೊಸ 500, 2000 ರೂ.ಗಳ ಕರೆನ್ಸಿಯನ್ನು ಜಾರಿಗೆ ತರುತ್ತಿರುವುದನ್ನು 'ರಾಜಕೀಯ ಚಾಣಾಕ್ಷತೆ' ಎಂದು ಕೆಲ ಮಾಧ್ಯಮಗಳು ಮತ್ತು ಕೆಲ ಭಟ್ಟಂಗಿಗಳು ಬಣ್ಣಿಸುತ್ತಿದ್ದಾರೆ. ಪ್ರಧಾನಮಂತ್ರಿಗಳು ಕೂಡ ಇತ್ತೀಚಿನ ಸ್ವಯಂ ಕಪ್ಪು ಹಣದ ಘೋಷಣೆಯ ಅಡಿಯಲ್ಲಿ ಸರ್ಕಾರಕ್ಕೆ ಸುಮಾರು 1,25,000 ಕೋಟಿ ರೂ. ದಕ್ಕಿರುವದಾಗಿ ತಿಳಿಸಿದರು. ಹಾಗಾದರೆ ಈ ಕ್ರಮಗಳ ಲಾಭ ಸಾಮಾನ್ಯರಿಗೆ ಏಕೆ ಆಗುತ್ತಿಲ್ಲ? ಎಲ್ಲಕ್ಕಿಂತ ಹೆಚ್ಚಾಗಿ ಪೆಟ್ರೋಲ್ ದರ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆ ಆದಾಗಲೂ ಭಾರತದ ನಗರ-ಪಟ್ಟಣಗಳಲ್ಲಿ ರೂ. 73ಕ್ಕೆ ಏರಿದೆ. ಧಾನ್ಯಗಳು, ಅವಶ್ಯಕ ವಸ್ತುಗಳ ಬೆಲೆ ಇಳಿಕೆಗೆ, ನಮ್ಮ ರೈತರ ಸಬ್ಸಿಡಿಗೆ ಈ ಹಣವನ್ನು ಏಕೆ ಬಳಸಲಾಗಿಲ್ಲ?

- ಲಕ್ಷ್ಮಣ ನಾಯ್ಕ್, ಬೆಳಗಾವಿ



ಅನಾಣ್ಯೀಕರಣದ ಬಗ್ಗೆ ನಾಗರಿಕರ ಹೇಳಿ

15ನೇ ನವೆಂಬರ್ 2016 ಈ ಕೆಳಗೆ ಸಹಿ ಮಾಡಿರುವ ನಾವುಗಳು, ಭ್ರಷ್ಟಾಚಾರವನ್ನು ತಡೆಗಟ್ಟುವ ಹಾಗೂ ಕಪ್ಪುಹಣ ಮತ್ತು ಖೋಟಾನೋಟು ಚಲಾವಣೆಯನ್ನು ನಿರ್ಮೂಲಿಸುವ ಪ್ರಯತ್ನವನ್ನು ಬೆಂಬಲಿಸುತ್ತೇವೆ. ಹಾಗೆಯೆ ಭಯೋತ್ಪಾದಕ ಶಕ್ತಿಗಳಿಗಾಗಲಿ ಅಥವ ಜನರಲ್ಲಿ ದ್ವೇಷವನ್ನು ಬಿತ್ತಿ ಸಮಾಜವನ್ನು ಒಡೆಯುವ, ದೇಶದಲ್ಲಿ ಅಶಾಂತಿ ಉಂಟುಮಾಡುವ ಶಕ್ತಿಗಳಿಗಾಗಲಿ, ಹಣಕಾಸು ಒದಗಿಸುವವರನ್ನು ನಾವು ವಿರೋಧಿಸುತ್ತೇವೆ. ಆದರೆ 500 ಮತ್ತು 1000 ರೂಪಾಯಿ ನೋಟುಗಳನ್ನು ಅಮಾನ್ಯ ಮಾಡಿದ ನಿರ್ಧಾರ ಅಪಾರ್ಥಕ್ಕೀಡಾಗಿದೆ. ಈ ಕ್ರಮದಿಂದ ಕಪ್ಪುಹಣದ ಸಮಸ್ಯೆಯನ್ನು ಪರಿಹರಿಸಲಾಗದು ಎಂಬುದಕ್ಕೆ ಕೆಳಗಿನ ಅಂಶಗಳನ್ನು ಗಮನಿಸಬಹುದು.

1. ಹೆಚ್ಚಿನ ಮುಖಬೆಲೆಯ ನೋಟುಗಳಿಂದ ಕಪ್ಪುಹಣದ ದಾಸ್ತಾನು ಹೆಚ್ಚಿದೆಯೆಂಬುದು ಸರ್ಕಾರದ ನಿಲುವಾಗಿದ್ದರೆ, 500 ಮತ್ತು 1000 ಮುಖಬೆಲೆಯ ಹೊಸ ನೋಟುಗಳನ್ನು ಪುನರ್ ಚಲಾವಣೆಗೆ ತರುವ ಕ್ರಮ ವಿವೇಚನಾರಹಿತವಾದುದು. ಅದರಲ್ಲೂ 2000 ಮುಖಬೆಲೆಯ ನೋಟುಗಳನ್ನು ಬಿಡುಗಡೆ ಮಾಡಿರುವ ಕ್ರಮವಂತೂ ವಿವರಣೆಗೆ ನಿಲುಕದ ಒಗಟಾಗಿದೆ.

2. ಕಾನೂನುಬದ್ಧ ವ್ಯವಹಾರಗಳಲ್ಲಿ ತೆರಿಗೆ ವಂಚಿಸುವ ಮೂಲಕ ಹಾಗೂ ನಾನಾರೀತಿಯ ಕಾನೂನುಬಾಹಿರ ವಹಿವಾಟುಗಳ ಮೂಲಕ ಕಪ್ಪುಹಣ ಉತ್ಪತ್ತಿಯಾಗುತ್ತದೆ. ಹೀಗೆ ಕಪ್ಪುಹಣ ಉತ್ಪತ್ತಿಯಾಗುವುದನ್ನು ತಡೆಗಟ್ಟಲು ಯಾವುದೇ ಕ್ರಮಕೈಗೊಳ್ಳದೆ, ಕೇವಲ ನೋಟುಗಳನ್ನು ರದ್ದುಪಡಿಸುವ ಕ್ರಮ ನಿರರ್ಥಕ ಎಂಬುದು 1978ರಲ್ಲೇ ಸಾಬೀತಾಗಿದೆ.


3. ಕಳೆದ 5 ವರ್ಷಗಳ ಆದಾಯ ತೆರಿಗೆ ದಾಳಿಗಳಲ್ಲಿ ಕಂಡುಬಂದಿರುವಂತೆ, ನಗದು ರೂಪದಲ್ಲಿರುವ ಕಪ್ಪುಹಣ ಶೇಕಡ 5 ರಿಂದ 6ರಷ್ಟು ಮಾತ್ರ. ಮೇಲಾಗಿ, ಭಾರೀ ಪ್ರಮಾಣದ ಕಪ್ಪುಹಣವನ್ನು ಹೊಂದಿರುವವರು ದಲ್ಲಾಳಿಗಳು ಹಾಗೂ ಮಧ್ಯವರ್ತಿಗಳ ಮೂಲಕ ತಮ್ಮ ಅಕ್ರಮ ಗಳಿಕೆಯನ್ನು ಚಿನ್ನದ ಗಟ್ಟಿ, ಆಭರಣಗಳು, ರಿಯಲ್ ಎಸ್ಟೇಟ್ ಮತ್ತು ವಿದೇಶಿ ಕರೆನ್ಸಿಗಳಿಗೆ ಬದಲಾಯಿಸಿಕೊಳ್ಳಲು ಶಕ್ಯರಾಗಿದ್ದಾರೆ. ವಾಸ್ತವದಲ್ಲಿ, ಕಮೀಷನ್ ಹಣಕ್ಕಾಗಿ ಕಪ್ಪುಹಣವನ್ನು ಬಿಳಿಹಣವನ್ನಾಗಿ ಪರಿವರ್ತಿಸಲು ಸಂಘಟಿತ ಜಾಲವೇ ಹುಟ್ಟಿಕೊಂಡಿದೆ.

4. ನ್ಯಾಷನಲ್ ಇನ್ವೆಸ್ಟಿಗೇಷನ್ ಏಜೆನ್ಸಿ(ಎನ್.ಐ.ಎ)ಗಾಗಿ ಕೊಲ್ಕೊತ್ತಾದ ನ್ಯಾಷನಲ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನವರು ನಡೆಸಿದ ಸರ್ವೆ ಪ್ರಕಾರ ದೇಶದಲ್ಲಿ 400 ಕೋಟಿ ಮೌಲ್ಯದ ಖೋಟಾನೋಟುಗಳು ಚಲಾವಣೆಯಲ್ಲಿವೆ ಎಂಬುದು ತಿಳಿದುಬಂದಿದೆ. ಇದು ಅಮಾನ್ಯಗೊಂಡಿರುವ 500 ಮತ್ತು 1000 ರೂಪಾಯಿ ನೋಟುಗಳ ಒಟ್ಟು ಮೊತ್ತವಾದ 14,180 ಶತಕೋಟಿ ಮೊತ್ತದಲ್ಲಿ ಕೇವಲ 0.028% ಮಾತ್ರ.

5. ಒಬ್ಬರು ಮಾಜಿ ಆರ್.ಬಿ.ಐ ಗವರ್ನರ್ ಮತ್ತು ವಿಶ್ವಬ್ಯಾಂಕ್‌ನ ಹಾಲಿ ಪ್ರಧಾನ ಅರ್ಥಶಾಸ್ತ್ರಜ್ಞರಂಥಹ ತಜ್ಞರು ಕೂಡ ಈ ಅನಾಣ್ಯೀಕರಣ ಕ್ರಮವನ್ನು ವಿರೋಧಿಸಿದ್ದಾರೆ.

6. ದೇಶದಲ್ಲಿ ಒಟ್ಟು ಚಲಾವಣೆಯಲ್ಲಿರುವ ಹಣದಲ್ಲಿ 86% ಹಣವು 500 ಮತ್ತು 1000 ರೂಪಾಯಿಗಳ ರೂಪದಲ್ಲಿದೆ. ದೇಶದಲ್ಲಿ ನಡೆಯುವ ಒಟ್ಟು ವ್ಯವಹಾರದಲ್ಲಿ ನಗದು ವ್ಯವಹಾರದ ಪಾಲು ಶೇ. 97ರಷ್ಟು. ಈ ಕ್ರಮದಿಂದಾಗಿ ದೇಶಾದ್ಯಂತ ಜನರು ತಮ್ಮ ದೈನಂದಿನ ಅಗತ್ಯ ವಸ್ತುಗಳನ್ನು ಕೊಳ್ಳಲಿಕ್ಕಾಗದೆ, ಹಲವೆಡೆ ಜೀವರಕ್ಷಕ ಔಷಧಿಗಳನ್ನು, ಸೇವೆಗಳನ್ನು ಪಡೆದುಕೊಳ್ಳಲಾಗದೆ ಪರಿತಪಿಸುತ್ತಿದ್ದು, ಒಟ್ಟಾರೆ ಅವ್ಯವಸ್ಥೆಗೆ ದಾರಿ ಮಾಡಿದೆ. ಈ ಕ್ರಮದ ನೇರ ಪರಿಣಾಮವಾಗಿ ಒಂದು ಹಸುಗೂಸನ್ನೂ ಒಳಗೊಂಡು 5 ಜನರು ಈಗಾಗಲೇ ಪ್ರಾಣ ಕಳೆದುಕೊಂಡಿದ್ದಾರೆ.

7. ಹಣಕಾಸು ಸಚಿವಾಲಯದ ಬ್ಯಾಂಕಿಂಗ್ ವಿಭಾಗ ಕ್ರೋಢೀಕರಿಸಿದ ಅಂಕಿಅಂಶಗಳೇ ಹೇಳುವಂತೆ ಒಟ್ಟು ಜನಸಂಖ್ಯೆಯ ಶೇಕಡ 30ರಷ್ಟು ಜನರು ಮಾತ್ರ ಬ್ಯಾಂಕಿಂಗ್ ಸೌಲಭ್ಯ ಹೊಂದಿದ್ದಾರೆ. ಕಾರ್ಯನಿರ್ವಹಿಸುತ್ತಿರುವ ಬ್ಯಾಂಕುಗಳ ಮೂರನೇ ಒಂದು ಭಾಗದಷ್ಟು ಕೇವಲ 60 ನಗರ/ಪಟ್ಟಣಗಳಲ್ಲೇ ಕೇಂದ್ರೀಕೃತಗೊಂಡಿವೆ. ಪರಿಣಾಮವಾಗಿ, ಬ್ಯಾಂಕಿಂಗ್ ವ್ಯವಸ್ಥೆಯೂ ಇಲ್ಲದ ಗ್ರಾಮೀಣ ಪ್ರದೇಶದ ಜನರು ಹಲವೆಡೆ ಈ ಬಗ್ಗೆ ಸರಿಯಾದ ಮಾಹಿತಿಯೂ ಇಲ್ಲದೆ ತೀವ್ರ ತೊಂದರೆಗೊಳಗಾಗಿದ್ದಾರೆ.



8. ಡಿಜಿಟಲ್ ಪಾವತಿ ವ್ಯವಸ್ಥೆ ಕೂಡ ಪರಿಹಾರ ಒದಗಿಸಲು ವಿಫಲವಾಗಿದ್ದು, ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್‌ಗಳ ಮೂಲಕ ಹಣ ಪಾವತಿ ಹೆಚ್ಚಾಗಿದ್ದರಿಂದ ಸಂಬಂಧಿಸಿದ ಸರ್ವರ್‌ಗಳ ಕಾರ್ಯ ಕುಂಠಿತಗೊಂಡಿರುವ ವರದಿಗಳು ಈಗಾಗಲೇ ಬರುತ್ತಿವೆ.

9. ಅನಾದಿಯಿಂದಲೂ ಬ್ಯಾಂಕಿಂಗ್ ವ್ಯವಸ್ಥೆ ವಿಶ್ವಾಸ ಉಳಿಸಿಕೊಂಡಿರುವ ಕಾರಣದಿಂದ ಕರೆನ್ಸಿ ನೋಟುಗಳು ಮೌಲ್ಯ ಪಡೆದುಕೊಂಡಿವೆ. ಬೇಕಾಬಿಟ್ಟಿ ಕರೆನ್ಸಿ ರದ್ದು ಮಾಡಿದ್ದರ ಪರಿಣಾಮವಾಗಿ ಜನರ ವಿಶ್ವಾಸ ಶಿಥಿಲಗೊಂಡಿದೆ. ಹೀಗಾಗಿ ಆರಂಭಿಕವಾಗಿ ಕಂಡುಬರುತ್ತಿರುವ ಅವ್ಯವಸ್ಥೆಯಷ್ಟೇ ಅಲ್ಲದೇ ದೀರ್ಘಕಾಲೀನ ದುಷ್ಪರಿಣಾಮ ಬೀರುವ ಸಾಧ್ಯತೆಯಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ನೋಡಿದಾಗ, ಕರೆನ್ಸಿ ರದ್ದತಿಯ ಮೂಲಕ ಕಪ್ಪುಹಣವನ್ನು ನಿರ್ಮೂಲಗೊಳಿಸುವ ಸರ್ಕಾರದ ಘೋಷಿತ ಉದ್ದೇಶ ಈಡೇರಲಾರದು ಎಂಬುದು ನಿಚ್ಚಳವಾಗಿದೆ. ಬದಲಿಗೆ ಈ ಕ್ರಮವು ಇಡೀ ದೇಶದ ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದೆ. ಅಲ್ಲದೆ ಇತ್ತೀಚಿನ ಕೆಲವು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಸರ್ಕಾರದ ಉದ್ದೇಶವೇ ಪ್ರಶ್ನಾರ್ಹವಾಗಿದ್ದು, ಸರ್ಕಾರ ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾದ ಅಗತ್ಯವಿದೆ.

1. 1.14 ಲಕ್ಷ ಕೋಟಿ ವಸೂಲಿಯಾಗದ ಸಾಲವನ್ನು ಕಳೆದ 3 ವರ್ಷಗಳಲ್ಲಿ ಸರ್ಕಾರಿ ಬ್ಯಾಂಕುಗಳು ಮನ್ನಾ ಮಾಡಿವೆ. ಇದೇ ವೇಳೆಯಲ್ಲಿ ಲಕ್ಷಾಂತರ ಕೋಟಿ ರೂಪಾಯಿಗಳ ಸಾಲ ಬಾಕಿ ಬರಬೇಕಿದೆ. ಹೀಗಿರುವಾಗ ಸಾಲಮನ್ನಾದ ಫಲಾನುಭವಿ ಮತ್ತು ದೊಡ್ಡ ಮೊತ್ತದ ಸಾಲ ಬಾಕಿದಾರರಾಗಿರುವ ವ್ಯಕ್ತಿಗಳು ಮತ್ತು ಕಂಪನಿಗಳ ಹೆಸರನ್ನು ಸರ್ಕಾರ ಯಾಕೆ ಬಹಿರಂಗಪಡಿಸುತ್ತಿಲ್ಲ?

2. ವಿದೇಶದಲ್ಲಿ ಬಚ್ಚಿಟ್ಟಿರುವ ಕಪ್ಪುಹಣವನ್ನು ತಂದು ಪ್ರತಿಯೊಬ್ಬ ನಾಗರಿಕರ ಅಕೌಂಟಿಗೆ 15 ಲಕ್ಷ ಹಣ ಜಮಾ ಮಾಡುತ್ತೇವೆಂಬುದು ಚುನಾವಣಾ ಆಶ್ವಾಸನೆಯ ಒಂದು ಪ್ರಮುಖ ಅಂಶವಾಗಿತ್ತು, ಸಾಗರೋತ್ತರ ಬ್ಯಾಂಕುಗಳಲ್ಲಿ ಹಣ ಬಚ್ಚಿಟ್ಟಿರುವವರ ಬಗ್ಗೆ ತನ್ನ ಬಳಿಯಿರುವ ಪಟ್ಟಿಯನ್ನು ಸರ್ಕಾರ ಬಹಿರಂಗಪಡಿಸುತ್ತಿಲ್ಲ ಯಾಕೆ?

3. ಬಿಜೆಪಿ ನಾಯಕರಿಗೆ ಮತ್ತು ಮಿತ್ರರಿಗೆ ಈ ಅನಾಣ್ಯೀಕರಣ ಕ್ರಮದ ಬಗ್ಗೆ ಮೊದಲೇ ಮಾಹಿತಿ ಕೊಟ್ಟು, ಅವರು ತಮ್ಮ ಸಂಪತ್ತು ತೊಂದರೆಗೆ ಸಿಲುಕದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿತ್ತೆ? (ಈ ಅಧಿಕೃತ ಘೋಷಣೆ ಹೊರಬೀಳುವ ಕೆಲವೇ ಗಂಟೆಗಳ ಮೊದಲು ಪಶ್ಚಿಮ ಬಂಗಾಳದ ಬಿಜೆಪಿ ಘಟಕ ತನ್ನ ಖಾತೆಗೆ 500 ಮತ್ತು 1000 ಮುಖಬೆಲೆಯ 3 ಕೋಟಿ ಹಣ ಜಮಾ ಮಾಡಿದ ವರದಿಯಾಗಿದೆ. ಅಧಿಕೃತ ಘೋಷಣೆ ಹೊರಬೀಳುವ ಮೊದಲೇ ಬಿಜೆಪಿ ನಾಯಕರೊಬ್ಬರು ತಮ್ಮ ಕೈಯಲ್ಲಿ 2000 ಮುಖಬೆಲೆಯ ನೋಟುಗಳ ಕಂತೆ ಹಿಡಿದಿರುವ ಚಿತ್ರಗಳನ್ನು ಪ್ರಚುರಪಡಿಸಿದ್ದಾರೆ. ಅಧಿಕೃತ ಘೋಷಣೆ ಹೊರಬಿದ್ದಿದ್ದು ನವೆಂಬರ್ 8ರ ರಾತ್ರಿ 8.00 ಗಂಟೆಗೆ. ಹಾಗಿದ್ದರೂ ಸಹ, ಮಾರನೆಯ ಬೆಳಗ್ಗೆ ದಿನಪತ್ರಿಕೆಗಳಲ್ಲಿ ಡಿಜಿಟಲ್ ಹಣಪಾವತಿ ಕಂಪನಿಯೊಂದು ಈ ಕ್ರಮವನ್ನು ಸ್ವಾಗತಿಸಿ ಪೂರ್ಣ ಪುಟದ ಜಾಹಿರಾತುಗಳನ್ನು ಪ್ರಕಟಿಸಿತ್ತು.)

4. 2.5 ಲಕ್ಷಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಡಿಪಾಸಿಟ್ ಮಾಡಿದವರ ಖಾತೆಗಳ ಬಗ್ಗೆ ನಿಗಾ ಇಡಲಾಗುವುದು, ತನಿಖೆ ನಡೆಸಲಾಗುವುದು, 200% ದಂಡ ವಿಧಿಸಲಾಗುವುದು ಎಂದು ಸರ್ಕಾರ ಪ್ರಚಾರ ಮಾಡಿದ್ದರ ಉದ್ದೇಶವೇನು? (ಇದರ ಹಿಂದೆ, ಜನರು ತಮ್ಮ ಹಣವನ್ನು ಡಿಪಾಸಿಟ್ ಮಾಡದಂತೆ ಭಯಭೀತಗೊಳಿಸುವ ಮೂಲಕ ತಮ್ಮ ಯೋಜನೆ ಯಶಸ್ವಿಯಾಯಿತೆಂದು ಪ್ರಚಾರ ಮಾಡಿಕೊಳ್ಳುವ ಉದ್ದೇಶ ಕಾಣುತ್ತಿದೆ ಮತ್ತು ತಮ್ಮ ಹಣವನ್ನು ವಿಭಾಗಿಸಿ ಬೇರೆಬೇರೆ ಖಾತೆಗಳಿಗೆ, ಬೇರೆಬೇರೆ ಜನರ ಹೆಸರುಗಳಲ್ಲಿ ಜಮಾ ಮಾಡಲು ಕೊಟ್ಟ ಮುನ್ಸೂಚನೆಯೂ ಆಗಿದೆ.)

5. ಹೊಸ ನೋಟುಗಳಿಗೆ ಬದಲಾವಣೆ ಮಾಡಿಕೊಳ್ಳಲು ಅರ್ಜಿಯನ್ನು ಭರ್ತಿಮಾಡಿ, ಗುರುತಿನ ಪ್ರಮಾಣಪತ್ರ ಲಗತ್ತಿಸುವುದು ಕಡ್ಡಾಯವಾಗಿರುವುದರಿಂದ ಗುರುತಿನ ಪತ್ರ ಹೊಂದಿಲ್ಲದ ಎಷ್ಟೋ ಬಡವರು ಹಾಗೂ ಅನಕ್ಷರಸ್ಥರಿಗೆ ಈ ಕ್ರಮದಿಂದ ಭಾರೀ ಕಿರುಕುಳ ಉಂಟಾಗಿದೆ.

6. ಈ ಅನಾಣ್ಯೀಕರಣಕ್ಕೆ ಆಗುವ ಒ... ವೆಚ್ಚವೆಷ್ಟು? (ಚಲಾವಣೆಯಲ್ಲಿರುವ ಕರೆನ್ಸಿ... ಹೊಸ 500 ಮತ್ತು 2000 ಮುಖಬೆಲೆ... ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತ... 20,000 ಕೋಟಿ ವೆಚ್ಚವಾಗುತ್ತದೆಂದು ಅಂದಾಜಿಸಲಾಗಿದೆ. ಜೊತೆಗೆ, ನಗದು ವ... ಪ್ರಮುಖವಾಗಿ ಆಧರಿಸಿರುವ (ಸಗಟು ಮ... ಚಿಲ್ಲರೆ ಅಂಗಡಿಗಳು, ಬೀದಿಬದಿ ವ್ಯಾಪಾರಿ... ಸಾರಿಗೆ-ಸಂಪರ್ಕ ಇತ್ಯಾದಿ) ವ್ಯವಹಾರಗಳಿಗೆ... ಹೆಚ್ಚಿನ ನಷ್ಟವುಂಟಾಗಲಿದೆಯಲ್ಲದೆ, ಉತ್ಪಾ... ಕುಂಠಿತಗೊಳ್ಳಲಿದೆ.)

7. ನೋಟುಗಳ ರದ್ದತಿ ಕ್ರಮ ಮಾಡ... ನಿಶ್ಚಿತ ಎಂದುಕೊಂಡರೂ, ಸರಿಯಾದ ಪೂರ್ವಯೋಜನೆ / ತಯಾರಿ ಅಂದರೆ ಹ... ನೋಟುಗಳ ಮುದ್ರಣ, ವಿತರಣಾ ವ್ಯವಸ್ಥೆ... ಎಟಿಎಂಗಳ ನವೀಕರಣ ಇತ್ಯಾದಿ ಸಜ್ಜುಗೊ... ತರಾತುರಿಯಲ್ಲಿ ಜಾರಿ ಮಾಡಿದ್ದೇಕೆ? (ಬ್ಯಾ... ತೆರೆದ ಕೆಲವೇ ಗಂಟೆಗಳಲ್ಲಿ ನಗದು ಖಾಲಿ... ದೃಶ್ಯ ಸಾಮಾನ್ಯವಾಗಿ ಕಂಡುಬರುತ್ತಿದೆ, ಬ... ಎಟಿಎಂಗಳು ಹಣವಿಲ್ಲದೆ ಕಾರ್ಯ ನಿರ್ವ...

8. ಚುನಾವಣೆಗಳಲ್ಲಿ ಹಣದ ಬಲ ಪ್ರದರ್ಶನವಾಗುತ್ತಿರುವ ಬಗ್ಗೆ ನಾವೆಲ್ಲ ಚಿಂತಿತರಾಗಿದ್ದೇವೆ. ಪ್ರಭುತ್ವ ನಿಧಿಯ ಮ... ಚುನಾವಣೆ ನಡೆಸುವಂತಹ ಕಾನೂನನ್ನು ... ಪ್ರಸ್ತಾಪಿಸುತ್ತಿಲ್ಲ, ಯಾಕೆ? ಮಾಹಿತಿ ಹಕ್ಕು... ಅಡಿಯಲ್ಲಿ ಬರಲು ನಿರಾಕರಿಸುವ ಮೂ... ಪಕ್ಷ ತನ್ನ ಹಣಕಾಸಿನ ಮೂಲವನ್ನು ಪಾರದರ್ಶಕಗೊಳಿಸಬೇಕೆಂಬ ಪ್ರಸ್ತಾಪವನ್ನು ಖಂಡತುಂಡವಾಗಿ ವಿರೋಧಿಸುತ್ತಿರುವುದೇ... ಕೈಗೊಂಡಿರುವ ಬೇಕಾಬಿಟ್ಟಿ ಕ್ರಮದಿಂದಾ... ದೇಶದಲ್ಲಿ ಗಲಭೆಪೀಡಿತ ಸನ್ನಿವೇಶ ಸೃಷ್ಟಿ... ಜನರಿಗೆ ತಮ್ಮ ದೈನಂದಿನ ಅಗತ್ಯ ವಸ್ತು... ಆರೋಗ್ಯ ಸೇವೆಗೆ ಬೇಕಾದ ಹಣವನ್ನು ಪಡೆದುಕೊಳ್ಳಲು ಸರ್ಕಾರ ಈ ಕೂಡಲೇ ... ಕ್ರಮಕೈಗೊಳ್ಳಬೇಕೆಂದು ನಾವು ಆಗ್ರಹಿಸು... ಇಲ್ಲವಾದಲ್ಲಿ, ಈ ಅನಾಣ್ಯೀಕರಣ ಕ್ರಮ... ಹಿಂತೆಗೆದುಕೊಳ್ಳಬೇಕು ಅಥವ ಜನಸಾಮಾ... ಬಳಿಯಿರುವ ಹಳೆಯ ನೋಟುಗಳನ್ನು ... ದಲ್ಲಿ ಬದಲಿಸಿಕೊಳ್ಳುವವರೆಗೆ ಈ ಕ್ರಮ... ತಡೆಹಿಡಿಯಬೇಕೆಂಬುದು ನಮ್ಮ ಆಗ್ರಹ... ತೆರಿಗೆ ಸಂಗ್ರಹ ವ್ಯವಸ್ಥೆಯನ್ನು ಪ್ರಾಮಾಣಿ... ಸರಿತಿದ್ದಬೇಕೇ ಹೊರತು, ಜನಸಾಮಾನ್ಯರು... ಸುರಿಸಿ ಕಾನೂನುಬದ್ಧವಾಗಿ ಗಳಿಸಿದ ಹ... ಪಡೆದುಕೊಳ್ಳಲು ಅರ್ಜಿ ಫಾರಂ ಭರ್ತಿಮ... ಸಾಲುಗಳಲ್ಲಿ ನಿಲ್ಲುವಂತೆ ಮಾಡುವ ಮೂ... ಜನರನ್ನು ಕ್ರಿಮಿನಲ್‌ಗಳಂತೆ ನಡೆಸಿಕೊಳ್ಳ... ಎಂದು ಈ ಮೂಲಕ ಒತ್ತಾಯಿಸುತ್ತೇವೆ.

ಸಹಿ ಹಾಕಿರುವವರು ಪ್ರಭಾತ್ ಪಟ... ಪ್ರಶಾಂತ್ ಭೂಷಣ್, ಅರುಣಾ ರಾಯ್, ... ವಿಲ್ಸನ್, ಟಿ.ಎಂ.ಕೃಷ್ಣ ಜಯಂತಿ ಘೋಷ... ನಯಾಂತರ ಸೆಹಗಲ್, ಹರ್ಷ್ ಮಂದರ್... ಶ್ರೀವಾಸ್ತವ್, ಸಿ.ಪಿ.ಚಂದ್ರಶೇಖರ್, ನಿಖಿ... ಶಾಂತಾ ಸಿನ್ಹಾ, ಅನಿಕೇತ್ ಅಲಂ, ದೀಪ... ಜಗದೀಪ್ ಚೊಕ್ಕರ್, ಅಚಿನ್ ವನಾಯ... ಪಟವರ್ಧನ್, ಅಮರ್ ಕನ್ವರ್, ಅಮಿತಾ... ಅಣ್ಣೈ ರಾಜಾ, ಡಾ. ಆನಂದ್ ತೇಲ್ತುಂಡೆ... ಜೋಷಿ, ಇ.ಎ.ಎಸ್.ಶರ್ಮ, ಕಲ್ಪನಾ ಕಣ್... ಹಿಮಾಂಶು ಥಕ್ಕರ್, ಜಯತಿ ಘೋಷ್, ... ಸಾರಾಭಾಯ್ ಮನೋಜ್ ಮಿಟ್ಟಲ್.

ಅನುವಾದ: ದೊಡ್ಡಿಪಾಳ್ಯ ನರಸಿಂ...

ುರಿ ತಪ್ಪಿರುವ ತಥಾಕಥಿತ "ಮಹಾಯಜ್ಞ" ಅಥವಾ "ಸರ್ಜಿಕಲ್ ದಾಳಿ"

ರೂ. 500 ಮತ್ತು ರೂ. 1000 ಮುಖಬೆಲೆಯ ನೋಟುಗಳನ್ನು ಅಮಾನ್ಯಗೊಳಿಸುವ ಮೋದಿ ಸರ್ಕಾರದ ್ ನಿರ್ಧಾರ ಆಪ್ತವಲಯಗಳಿಗೆಲ್ಲ ಅನಿರೀಕ್ಷಿತ ಲ್ಲ, ಆದರೆ ಜನಸಾಮಾನ್ಯರ ಮಟ್ಟಿಗಂತೂ ತೀರಾ ೀಕ್ಷಿತವಾಗಿರುವುದರೊಂದಿಗೆ ಭಾರಿ ಕ್ಲೇಶಕರವೂ ಆಗಿ ಣಮಿಸಿದೆ. ನವಂಬರ್ 8ರಂದು ತನ್ನ ಎಂದಿನ ಭಾವಯುಕ್ತ ಜನಮರುಳ ಶೈಲಿಯಲ್ಲಿ ನಾಟಕೀಯ ಣ ಬಿಗಿದ ಮೋದಿ ಪ್ರಾಮಾಣಿಕ ರಿಕ್ಷಾವಾಲ, ತರಕಾರಿ ಾರಿ, ಶ್ರಮಜೀವಿ ಮೊದಲಾದವರ ಬಗ್ಗೆ ಭಾರಿ ಅನುಕಂಪ ವನಂತೆ ನಟಿಸುತ್ತಾ ಭ್ರಷ್ಟಾಚಾರ, ಕಾಳಧನ, ೋತ್ಪಾದನೆಗಳ ವಿರುದ್ಧ "ಮಹಾಯಜ್ಞ"ಕ್ಕೆ ಕರೆಕೊಟ್ಟಿದ್ದಾನೆ. ಈ "ಮಹಾಯಜ್ಞ"ಕ್ಕೆ ಆಹುತಿಯಾಗುತ್ತಿರುವವರು ಉಲ್ಲೇಖಿಸಿದ ಅದೇ ವರ್ಗಗಳಿಗೆ ಸೇರಿದ ಸಾಮಾನ್ಯ ಬ ಕುಟುಂಬ ದಿನಗಳೆದಂತೆ ಹೆಚ್ಚೆಚ್ಚು ಸ್ಪಷ್ಟವಾಗತೊಡಗಿದೆ. ್ ಮೋದಿಬಂಟರು ಯಥಾಪ್ರಕಾರ ಶಂಖ, ಟೆಗಳೊಂದಿಗೆ ತಮ್ಮ ಸರ್ವಾಧಿಕಾರಿ ನಾಯಕನ ದಿಟ್ಟ ವನ್ನು ಕೊಂಡಾಡುತ್ತಾ ಟೀಕಿಸುವವರ ವಿರುದ್ಧ ಹಾಯುತ್ತಿದ್ದಾರೆ. ಅದೇ ವೇಳೆ ಆಚೆಯೂ ಅಲ್ಲ ಈಚೆಯೂ ಎನ್ನುವಂತಿದ್ದ ಸುಮಾರು 3 ಲಕ್ಷಕ್ಕೂ ಅಧಿಕ ಮೋದಿಯ ್ ಅನುಯಾಯಿಗಳ ಹೆಬ್ಬೆರಳುಗಳೆಲ್ಲ ಅಧೋಮುಖ ವೆ. ನವಂಬರ್ 9ರಂದು ನೋಟು ರದ್ಧತಿ ಕ್ರಮವನ್ನು ಗಳಿದ ವ್ಯಾಪಾರಿಗಳ ಸಂಘ (Confederation of India Traders) ನಂತರ ಅದರ ಸದಸ್ಯರಿಗೆ ತ್ತಿರುವ ಕೆಟ್ಟ ಅನುಭವಗಳ ಹಿನ್ನೆಲೆಯಲ್ಲಿ ಮಾರನೆ ದಿನವೆ ಡನಾತ್ಮಕ ಹೇಳಿಕೆ ನೀಡಿದೆ. ತಮ್ಮ ಸಮಸ್ಯೆಗಳನ್ನು ತೆರೆದಿಟ್ಟ ದ ಪ್ರಧಾನ ಕಾರ್ಯದರ್ಶಿ, ಸಾಕಷ್ಟು ನಗದು ಲಭ್ಯವಿರದ ಣ ಗ್ರಾಹಕರಿಗೆ ಚಿಲ್ಲರೆ ವ್ಯಾಪಾರಿಗಳಿಂದ ಖರೀದಿಸಲಾ ತ್ತಿಲ್ಲ, ಚಿಲ್ಲರೆ ವ್ಯಾಪಾರಿಗಳಿಗೆ ಡಿಸ್ಟ್ರಿಬ್ಯೂಟರ್‌ಗಳ ಹಣ ಾಯ ಮಾಡಲು ಸಾಧ್ಯವಾಗುತ್ತಿಲ್ಲ, ಡಿಸ್ಟ್ರಿಬ್ಯೂಟರ್‌ಗಳಿಗೆ ಾದಕರ ಹಣವನ್ನು ಪಾವತಿಸಲು ಆಗುತ್ತಿಲ್ಲ ಎಂದು ರಿದ್ದಾರೆ. ಅಂಧಾಭಿಮಾನಿಗಳಿಂದ "ಸರ್ಜಿಕಲ್ ದಾಳಿ" ದು ಬಣ್ಣಿಸಲ್ಪಟ್ಟಿರುವ ಈ ಕಾರ್ಯಾಚರಣೆ ಈಗಾಗಲೆ ಕನಿಷ್ಠ ಬತ್ತು ಅಮಾಯಕ ಭಾರತೀಯ ಪ್ರಜೆಗಳ ಬಲಿ ದುಕೊಂಡಿದೆ. ಮುಗಿಯುವಷ್ಟರಲ್ಲಿ ಇನ್ನೆಷ್ಟು ಪ್ರಾಣಬಲಿ ದುಕೊಳ್ಳಲಿದೆಯೊ ತಿಳಿಯದು.

ನವಂಬರ್ 9ರ ಮುಂಜಾನೆಯಿಂದ ಪ್ರಾರಂಭವಾಗಿ ಗಲೂ ಮುಂದುವರಿಯುತ್ತಿರುವ ಜನಸಾಮಾನ್ಯರ ಪಾಟಲುಗಳನ್ನು ಗಮನಿಸಿದಾಗ ಇದೊಂದು ಸರಿಯಾದ ರ್ವಸಿದ್ಧತೆ ಇಲ್ಲದ, ಸಂವೇದನಾರಹಿತ ಹಾಗೂ ಕ್ಷತೆಯಿಂದ ಕೂಡಿದ ಕಾರ್ಯಾಚರಣೆ ಎಂಬುದು ಕಸ್ಪಷ್ಟ. ಇವತ್ತು ದೇಶದಲ್ಲಿ ಸುಮಾರು 80000 ಬ್ಯಾಂಕು ಖೆಗಳಿದ್ದು ಹಳೆ ನೋಟುಗಳನ್ನು ಬದಲಾಯಿಸುವ ಮತ್ತು ು ಮಾಡುವ ಪ್ರಕ್ರಿಯೆಯಲ್ಲಿ ಪ್ರತಿ ಶಾಖೆಯ ಸಿಬ್ಬಂದಿ ಸರಿ 15000 ಗಿರಾಕಿಗಳ ಜೊತೆ ವ್ಯವಹರಿಸಬೇಕಾಗಿದೆ ದರೆ ಇದರ ಅಗಾಧತೆಯನ್ನು ಅರ್ಥಮಾಡಿಕೊಳ್ಳಬಹುದು. ಭದಲ್ಲಿ ಎಟಿಎಂಗಳಲ್ಲಿ ಬದಲಾವಣೆ ಮಾಡಲು ಎರಡು ಸಾಕೆಂದ ಸರ್ಕಾರ ಈಗ ಮೂರು ವಾರಗಳು ಬೇಕೆನ್ನುತ್ತಿದೆ. ಗೆ ಹೊಸ ನೋಟುಗಳ ಮುದ್ರಣ, ವಿತರಣೆ ಇತ್ಯಾದಿ ಯೆಗಳಿಗೆ ಅತ್ಯಂತ ದಕ್ಷತೆಯಿಂದ ಕೂಡಿದ ಲಾಜಿಸ್ಟಿಕ್ಸ್ ಗತ್ಯ. ಇದರ ಕೊರತೆಯೆ ಇವತ್ತಿನ ಎಲ್ಲಾ ಸಮಸ್ಯೆಗಳಿಗೆ ಖ್ಯ ಕಾರಣ. ಪರಿಣಾಮವಾಗಿ ಕೇವಲ ನಗದು ಹಣದ ಹೊಂದಿಕೊಂಡಿರುವ ರೈತರು, ಬಡವರು, ಸಾಮಾನ್ಯರು, ದಿನಗೂಲಿ ಕಾರ್ಮಿಕರು, ಗೃಹಿಣಿಯರು, ಮಂದಿರು, ಬ್ಯಾಂಕ್ ಖಾತೆ ಇಲ್ಲದವರು ಮುಂತಾದವರ ಬದುಕು ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಡ್ರೈವರ್, ಕಂಡಕ್ಟರ್, ಕೆಲಸದಾಕೆ, ಪ್ಲಂಬರ್, ಮೆಕ್ಯಾನಿಕ್, ವೈಟರ್, ಬೀದಿಬದಿ ಪಾರಿಗಳಂತಹವರು ಬ್ಯಾಂಕು, ಎಟಿಎಂಗಳ ಮುಂದೆ ಗಟ್ಟಲೆ ಕ್ಯೂನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಇದ್ದರೆ ೋಚ್ಯವಿದ್ದರು, ಗೃಹಿಣಿಯರು ಮುಂತಾದವರ ಸಂಕಷ್ಟ ಹೇಳತೀರದಾಗಿದೆ. ಇವರೆಲ್ಲ ಕೋಟಿಗಟ್ಟಳೆ ಹಣವನ್ನು ಖಾತೆಗೆ ಜಮಾ ಮಾಡಲು ಬಂದವರೇನಲ್ಲ, ಇವರು ತಮ್ಮ ಸಣ್ಣಪುಟ್ಟ ಕಾಯದ ಹಣವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರು ರು. ದೈನಂದಿನ ಖರ್ಚುವೆಚ್ಚಗಳಿಗಾಗಿ ನಗದಿನ ಮೇಲೆ ಲಂಬಿಸಿರುವವರು. ಆದರೆ ನೈಜ ಕಾಳದಂಧೆಕೋರರು ಸಾಗಿ ಕಮಿಷನ್ ಏಜೆಂಟರುಗಳ ಮೂಲಕ ತಮ್ಮ ಕೆಲಸ ಟಿಸಿಕೊಳ್ಳುತ್ತಿದ್ದಾರೆ!

ಕಪ್ಪುಹಣ ಮತ್ತು ನೋಟು ರದ್ದತಿ

ಹಾಗೆ ನೋಡಿದರೆ ಬಚ್ಚಿಟ್ಟ ಕಪ್ಪುಹಣ ಹೊರತೆಗೆಯಲೆನ್ನ ುವ ನೋಟು ರದ್ದತಿ ಕಾರ್ಯಕ್ರಮಗಳು ಈ ಹಿಂದೆಯೂ ೆ. 1946ರಲ್ಲಿ ರೂ. 500, 1000, 10000 ಮತ್ತು 78ರಲ್ಲಿ ರೂ. 1000, 5000, 10,000ದ ನೋಟುಗಳ ರದ್ಧತಿ ನಡೆದಿದ್ದರೆ 2014ರಲ್ಲಿ ನಿರ್ದಿಷ್ಟ ಶ್ರೇಣಿಯ ರೂ. 500, 1000ದ ನೋಟುಗಳನ್ನು ಅಮಾನ್ಯಗೊಳಿಸಲಾಗಿತ್ತು. ಆದರೆ ಈಗಿನದ್ದಕ್ಕೆ ಹೋಲಿಸಿದರೆ ಹಿಂದಿನ ಮೂರೂ ಸಂದರ್ಭಗಳಲ್ಲಿ ಜನಸಾಮಾನ್ಯರು ಅನುಭವಿಸಿದ ಸಂಕಷ್ಟದ ಪ್ರಮಾಣ ಕಡಿಮೆ ಎಂದು ತಿಳಿದುಬರುತ್ತದೆ. ಪ್ರಸಕ್ತ ಕಾರ್ಯಾಚರಣೆಯಲ್ಲಿ ಚಲಾವಣೆಯಲ್ಲಿರುವ ಹಣದ ಶೇಕಡಾ 86ರಷ್ಟು, ಅಂದರೆ ಸುಮಾರು ರೂ. 14 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಬದಲಾಯಿಸಲಾಗುತ್ತದೆ ಎಂದು ಹೇಳುತ್ತಿರುವ ಮೋದಿ ಸರ್ಕಾರ ಇದರಿಂದಾಗಿ ಎಷ್ಟು ಕಪ್ಪುಹಣ ಹೊರಬೀಳಲಿದೆ ಎಂಬ ಮಾಹಿತಿಯನ್ನು ನೀಡದಿರುವುದು ಗಮನಾರ್ಹ. ಈಗಾಗಲೆ ಉಲ್ಲೇಖಿಸಲಾದ ಹಿಂದಿನ ಮೂರೂ ನೋಟು ರದ್ದತಿ ಕಾರ್ಯಕ್ರಮಗಳು ಕಪ್ಪುಹಣದ ಬೇರನ್ನು ಕಿತ್ತೊಗೆಯುವಲ್ಲಿ ಸಂಪೂರ್ಣ ಅಸಫಲವಾಗಿವೆ. ಈ ಕ್ರಮಗಳು ಕೇವಲ ತಾತ್ಕಾಲಿಕ ಉಪಶಮನಗಳಲ್ಲದೆ ಇನ್ನೇನೂ ಅಲ್ಲ ಎಂಬುದಕ್ಕೆ ಕಪ್ಪುಹಣ ಮಾಯವಾಗುವ ಬದಲು ಇನ್ನಷ್ಟು ಬೆಳೆದು ಹೆಮ್ಮರವಾಗಿರುವುದೇ ಸಾಕ್ಷಿ.

ಕಪ್ಪುಹಣ ನಗದಿನ ರೂಪದಲ್ಲಿರುತ್ತದೆ, ಅದನ್ನೆಲ್ಲ ಪಲ್ಲಂಗದ ಅಡಿಯಲ್ಲಿ ಅಥವಾ ಕಪಾಟುಗಳಲ್ಲಿ ಅಥವಾ ಟ್ರಂಕುಗಳಲ್ಲಿ ತುಂಬಿ ಭೂಮಿಯೊಳಗೆ ಅಡಗಿಸಿಡಲಾಗುತ್ತದೆ ಎಂದು ಸರಳವಾಗಿ ಅರ್ಥೈಸಿಕೊಂಡವರೆ ಹೆಚ್ಚು. ಆದರೆ ವಾಸ್ತವ ಬೇರೆಯೇ ಇದೆ. ನಗದು ರೂಪದಲ್ಲಿರುವ (ಉದಾ: ಚುನಾವಣೆಗಳ ಕಾಲಗಳಲ್ಲಿ) ಕಪ್ಪುಹಣದ ಪ್ರಮಾಣ ತುಂಬಾ ಕಡಿಮೆ. ಅಲ್ಲದೆ ಕಪ್ಪುಹಣದ ಬಹ್ವಂಶ ದೇಶದೊಳಗೆ ಇಲ್ಲ; ಅದು ವಿದೇಶಗಳಲ್ಲಿರುವ ಹಲವಾರು ತೆರಿಗೆ ಧಾಮಗಳಲ್ಲಿ ಸುರಕ್ಷಿತವಾಗಿದೆ. (ಒಂದು ಅಂದಾಜಿನಂತೆ 2008ರ ತನಕ ಸುಮಾರು 462 ಬಿಲಿಯ ಡಾಲರುಗಳು). ಬಿಳಿಯ ಹಾಗೆ ಕಪ್ಪುಹಣವೂ ಸದಾ ಚಲಾವಣೆಯಲ್ಲಿ ಇರುತ್ತದೆ; ಅದನ್ನು ನಾನಾ ಕಾಳದಂಧೆಗಳಲ್ಲಿ ಹೂಡಲಾಗುತ್ತದೆ. ಇತ್ತೀಚೆಗೆ ಸೋರಿಕೆಯಾದ "ಪನಾಮಾ ಪೇಪರ್ಸ್" ಪ್ರಕಾರ ಭಾರತದ ಅನೇಕ ಧನಾಢ್ಯರ ಹೆಚ್ಚಿನ ಹಣವೆಲ್ಲಾ ವಿದೇಶಗಳಲ್ಲಿದೆ. ವಿದೇಶಗಳಲ್ಲಿರುವ ಕಪ್ಪುಹಣ ತಂದು ಪ್ರತಿಯೊಬ್ಬನ ಕಿಸೆಗೆ ರೂ. 15 ಲಕ್ಷ ಇಳಿಬಿಡುವ ಭರವಸೆ ಕೊಟ್ಟವರಿಗೆ ಆ ಕಪ್ಪುಹಣ ನಗದಿನ ರೂಪದಲ್ಲಿಲ್ಲ ಎನ್ನುವುದು ಗೊತ್ತಿತ್ತು!

ಕಾನೂನುಬಾಹಿರ ಅಥವಾ ತೆರಿಗೆ ವಂಚನೆಯ ವಹಿವಾಟುಗಳೆಲ್ಲವೂ ಕಪ್ಪುಹಣದ ವ್ಯಾಪ್ತಿಗೆ ಬರುತ್ತವೆ. ಕಪ್ಪುಹಣ ಉತ್ಪತ್ತಿಯಾಗುವುದು ಕೈಗಾರಿಕಾ ಉತ್ಪಾದನೆಯಲ್ಲಿ ಹಾಗೂ ರಫ್ತು ಪ್ರಮಾಣದಲ್ಲಿ ಅಸಲಿಗಿಂತ ಕಡಮೆ ತೋರಿಸುವ ಮೂಲಕ (ಉದಾಹರಣೆಗೆ 1000 ಟನ್ ಅದಿರು ಮಾರಿ 800 ಟನ್‌ಗಳಷ್ಟನ್ನೆ ದಾಖಲಿಸುವುದು), ಆಮದು ದರಪಟ್ಟಿಯಲ್ಲಿ ಅಸಲಿಗಿಂತ ಹೆಚ್ಚು ತೋರಿಸುವ ಮೂಲಕ, ಹವಾಲಾ ದಂಧೆ, ರಿಯಲ್ ಎಸ್ಟೇಟ್ ದಂಧೆ ಇತ್ಯಾದಿಗಳ ಮೂಲಕ. ಆದರೆ ಇದರ ಸಿಂಹಪಾಲು ವಿದೇಶಗಳಲ್ಲಿ ಸುರಕ್ಷಿತವಾಗಿರುತ್ತದೆ. ಕಳೆದ ಒಂದು ವರ್ಷದಲ್ಲೆ ಸುಮಾರು 83 ಬಿಲಿಯ ಡಾಲರು ಮೌಲ್ಯದ ಕಾಳದಂಧೆ ನಡೆದಿದೆ ಎಂದರೆ ಕಾಳಧನದ ಪ್ರಮಾಣ ಎಷ್ಟೊಂದು ಅಗಾಧವಾಗಿದೆ ಎಂದು ಊಹಿಸಬಹುದು. ದೊಡ್ಡ ದೊಡ್ಡ ಕಾರ್ಪೊರೇಟು ಕುಳಗಳು ಇಂತಹ ಬಿಲಿಯಾಂತರ ಡಾಲರು ಕಪ್ಪುಹಣವನ್ನು ಬಿಳಿಯಾಗಿಸಿರುವುದನ್ನು ಎಂ.ಬಿ.ಷಾ ನೇತೃತ್ವದ ವಿಶೇಷ ತನಿಖಾ ತಂಡ ಪತ್ತೆಹಚ್ಚಿದೆ. ತೆರಿಗೆ ವಂಚಿಸಿದ ದುಡ್ಡನ್ನೆಲ್ಲ ಸ್ಥಿರಾಸ್ತಿ, ಚಿನ್ನ, ಆಭರಣ ಮುಂತಾದವುಗಳಲ್ಲಿ ಹೂಡಲಾಗುತ್ತದೆ. ಇಂತಹ "ಕಪ್ಪು ವಹಿವಾಟು"ಗಳನ್ನು ತಡೆಗಟ್ಟದೆ ಬರೀ ನೋಟು ರದ್ದತಿಯಿಂದ ಕಪ್ಪುಹಣದ ಉತ್ಪಾದನೆಯನ್ನು ನಿಲ್ಲಿಸಲು ಸಾಧ್ಯವಿಲ್ಲ. 1978ರಲ್ಲಿ ಮೊರಾರ್ಜಿ ದೇಸಾಯಿ ಸರ್ಕಾರ ನೋಟು ರದ್ದತಿ ಮಾಡಿದ ಸಂದರ್ಭದಲ್ಲಿ ಐ.ಜಿ.ಪಟೇಲ್ ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿದ್ದರು. ಅವರು ತಮ್ಮ 'Glimpses of Indian Economic Policy: An Insider's View' ಎಂಬ ಪುಸ್ತಕದಲ್ಲಿ ಹೀಗನ್ನುತ್ತಾರೆ: "ಇದು ಅಧಿಕ ಕೆಲಸ, ಅಲ್ಪ ಫಾಯಿದೆಯ ಕ್ರಮ.... ಕಪ್ಪುಹಣವನ್ನು ನೋಟುಗಳ ರೂಪದಲ್ಲಿ ಶೇಖರಿಸಲಾಗುತ್ತದೆಂದು ತಿಳಿಯುವುದು ಭೋಳೆತನ. ಹಾಗೊಂದು ವೇಳೆ ಇದ್ದರೂ ಅದನ್ನು ಏಜಂಟ್‌ಗಳ ಮೂಲಕ ಬದಲಾಯಿಸಿಕೊಳ್ಳಲಾಗುತ್ತದೆ....."!




ಕೃಪೆ: ಸತೀಶ್ ಆಚಾರ್ಯ

ಸೀಮಿತ, ತಾತ್ಕಾಲಿಕ ಯಶಸ್ಸು

ಈ ಹೊತ್ತಿನ ನೋಟು ರದ್ದತಿಯಿಂದಲೂ ಒಂದು ಸೀಮಿತ, ತಾತ್ಕಾಲಿಕ ಯಶಸ್ಸು ದೊರೆಯಬಹುದು. ಆದರೆ ಕಾಳಧನಿಕರಿಗೆ ಅನ್ಯಮಾರ್ಗಗಳು ಇದ್ದೇ ಇವೆ. ಹೊಸ ರೂ. 500 ಮತ್ತು 2000ದ ನೋಟುಗಳು ಚಲಾವಣೆಗೆ ಬಂದ ನಂತರ ಕಪ್ಪುಹಣ ಮತ್ತು ಖೋಟಾ ನೋಟು ಮರುಕಳಿಸುವುದಿಲ್ಲ ಎನ್ನುವುದಕ್ಕೆ ಏನು ಗ್ಯಾರಂಟಿ? ಹಾಗೆ ನೋಡಿದರೆ ಹೊಸ ರೂ 2000ದ ನೋಟುಗಳು ಕಪ್ಪುಹಣ ಶೇಖರಣೆಗೆ ಇನ್ನಷ್ಟು ಅನುಕೂಲಕರವಾಗಲಿವೆ. ನವಂಬರ್ 8ರ ಮೋದಿ ಭಾಷಣಕ್ಕೂ ಮುನ್ನ ಈ ನೋಟಿನ ವಿನ್ಯಾಸ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿರುವುದರೊಂದಿಗೆ ಈಗಾಗಲೆ ನಕಲಿ ನೋಟುಗಳೂ ಕಾಣಿಸಿಕೊಳ್ಳತೊಡಗಿರುವುದು ಬಿಗು ಭದ್ರತೆಯ ಮಾತುಗಳೆಲ್ಲ ಬರಿದೆ ಜೊಳ್ಳು ಎಂಬುದನ್ನು ತೋರಿಸುತ್ತಿದೆ. ಹಿರಿಯ ಸರಕಾರಿ ಅಧಿಕಾರಿಯೊಬ್ಬರು ಹೇಳಿರುವಂತೆ ಹೊಸ ನೋಟು ಮುದ್ರಿಸುವ ನಿರ್ಧಾರ 6 ತಿಂಗಳ ಹಿಂದಿನದು. "ನೋಟಿನ ಭದ್ರತಾ ಅಂಶಗಳನ್ನು ಬದಲಾಯಿಸುವುದಕ್ಕೆ 5ರಿಂದ 6 ವರ್ಷಗಳು ತಗಲುತ್ತವೆ" ಎಂದಿರುವ ಇವರು "ಭಾರತದಲ್ಲಿ 2005ರ ನಂತರ ನೋಟುಗಳ ಭದ್ರತಾ ಅಂಶಗಳನ್ನು ಮೇಲ್ದರ್ಜೆಗೆ ಏರಿಸಲಾಗಿಲ್ಲ. ಆದುದರಿಂದ ಮೈಸೂರಿನ ಮುದ್ರಣಾಲಯದಲ್ಲಿ ತಯಾರಾದ ಹೊಸಾ ನೋಟುಗಳಲ್ಲಿ ಬಣ್ಣ, ವಿನ್ಯಾಸಗಳನ್ನಷ್ಟೆ ಬದಲಾಯಿಸಲಾಗಿದೆ ಹೊರತು ಬೇರೇನೂ ಬದಲಾವಣೆಗಳಿಲ್ಲ. ಹೊಸಾ ನೋಟುಗಳ ಭದ್ರತಾ ಅಂಶಗಳು ಹಳೆಯವೆ ಆಗಿರುವುದರಿಂದ ಅವುಗಳನ್ನು ನಕಲು ಮಾಡುವುದು ಅಸಾಧ್ಯವೇನಲ್ಲ, ಪಾಕಿಸ್ತಾನದ ಸರಕಾರಿ ಮುದ್ರಣಾಲಯದಲ್ಲಿ ಖೋಟಾನೋಟುಗಳನ್ನು ಅಚ್ಚುಹಾಕಲಾಗುತ್ತದೆ" ಎಂಬ ಆಘಾತಕಾರಿ ಮಾಹಿತಿಯನ್ನು ಹೊರಗೆಡವಿದ್ದಾರೆ!

ಪ್ರತಿಪಕ್ಷಗಳೆ ಪ್ರಮುಖ ಗುರಿ?

ಇತ್ತೀಚಿನ ಕೆಲವೊಂದು ಬೆಳವಣಿಗೆಗಳನ್ನು ನೋಡಿದರೆ ಮೋದಿ ಸರ್ಕಾರದ ದಿಢೀರ್ ನಿರ್ಧಾರದ ಬಗ್ಗೆ ಬಿಜೆಪಿ ಮತ್ತದರ ಮಿತ್ರರಿಗೆ ಪೂರ್ವಮಾಹಿತಿ ಇದ್ದಿರಲೆಬೇಕೆಂದು ತೋರುತ್ತದೆ. ಉದಾಹರಣೆಗೆ ಪ್ರಸಕ್ತವರ್ಷದ ಜುಲೈನಿಂದ ಸೆಪ್ಟಂಬರ್ ವರೆಗಿನ ಮೂರು ತಿಂಗಳ ಅವಧಿಯಲ್ಲಿ ಸಾವಿರಾರು ಕೋಟಿ ರೂಪಾಯಿ ಬ್ಯಾಂಕು ಖಾತೆಗಳಿಗೆ ಜಮಾ ಆಗಿದೆ. ಇನ್ನೊಂದು ವರದಿಯ ಪ್ರಕಾರ ಜನಧನ ಖಾತೆಗಳು ಇದ್ದಕ್ಕಿದ್ದಂತೆ ತುಂಬಿ ತುಳುಕಲಾರಂಭಿಸಿವೆ. ನವಂಬರ್ 8ರಂದು ಸುಮಾರು ಒಂದು ಕೋಟಿ ರೂಪಾಯಿಗಳನ್ನು ಕೋಲ್ಕತ್ತಾದ ಬ್ಯಾಂಕೊಂದರ ಖಾತೆಯಲ್ಲಿ ಜಮೆಮಾಡುವ ಸಂದರ್ಭದಲ್ಲಿ ಬಿಜೆಪಿ ಪ್ಯಾನ್ ಸಂಖ್ಯೆಯನ್ನು ಉಲ್ಲೇಖಿಸಿರುವ ವಿಚಾರ ಬಯಲಾಗಿದೆ. ಈ ವಿದ್ಯಮಾನಗಳನ್ನು ಅಲಕ್ಷಿಸಲು ಸಾಧ್ಯವಿಲ್ಲ. ಸದ್ಯದಲ್ಲೆ ಉತ್ತರ ಪ್ರದೇಶ, ಪಂಜಾಬ್, ಗುಜರಾತ್ ಮತ್ತಿತರ ರಾಜ್ಯಗಳಲ್ಲಿ ಚುನಾವಣೆ ನಡೆಯಲಿರುವುದರಿಂದ ಮೋದಿ ಸರ್ಕಾರದ ಆಪ್ತವಲಯದಲ್ಲಿರುವ ಉದ್ಯಮಪತಿಗಳೆಲ್ಲರಿಗೂ ಅನಧಿಕೃತ ನಗದಿನ ವಿಲೇವಾರಿಗೆ ಸಾಕಷ್ಟು ಸಮಯಾವಕಾಶ ಸಿಕ್ಕಿರಬೇಕೆಂದು ಊಹಿಸುವುದು ತಪ್ಪಾಗಲಾರದು. ಆದರೆ ಅಮಿತ್ ಶಾ ತನ್ನ ಪಕ್ಷ ಮಹಾ ಸಾಚಾ, ತಾವೆಲ್ಲ ಸತ್ಯಸಂಧರು, ಉಳಿದ ಪಕ್ಷಗಳೆಲ್ಲವೂ ಕಪ್ಪುಹಣದಲ್ಲಿ ಮುಳುಗೇಳುತ್ತಿವೆ ಎಂದು ಬಿಂಬಿಸಲು ಹೊರಟಿದ್ದಾನೆ! ಜನರಿಗೆ ಮಂಕುಬೂದಿ ಎರಚಲೆತ್ನಿಸುತ್ತಿರುವ ಇವರೆಲ್ಲ ಮತದಾರರನ್ನು ಹುಂಬರೆಂದು ಭಾವಿಸಿರುವಂತಿದೆ. "ನೋಟು ಅಮಾನ್ಯ ಮಾಡುವ ಕ್ರಮದಿಂದ ಅನ್ಯ ಪಕ್ಷಗಳಿಗೇಕೆ ನೋವಾಗುತ್ತಿದೆ; ಅವು ಭ್ರಷ್ಟ ಮಾರ್ಗಗಳಲ್ಲಿ ಹಣ ಸಂಗ್ರಹಿಸಿರದಿದ್ದರೆ ಇದನ್ನು ಮೆಚ್ಚುತ್ತಿದ್ದವು" ಎನ್ನುವ ಶಾ ಮಾತುಗಳಲ್ಲಿ ಒಂದು ನಿಗೂಢ ಅರ್ಥ ಹುದುಗಿರುವಂತಿದೆ. ಈ ಸಂದರ್ಭದಲ್ಲಿ ಮೋದಿ ಸರ್ಕಾರದ ಆರಂಭದ ದಿನಗಳಲ್ಲಿ ಸಂಘ ಪರಿವಾರದ ಹಲವು ನಾಯಕರುಗಳು ಕಾಂಗ್ರೆಸ್ ಪಕ್ಷದ ನಿರ್ನಾಮಕ್ಕೆ ಕರೆಕೊಡುತ್ತಿದ್ದುದನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ಕೇವಲ ಕಾಂಗ್ರೆಸ್ ಪಕ್ಷದ ನಿರ್ನಾಮಕ್ಕೆ ಕರೆ ಏಕೆಂದರೆ ಕಾಂಗ್ರೆಸ್ ಪಕ್ಷಕ್ಕಿರುವ ರಾಷ್ಟ್ರೀಯ ಮಟ್ಟದ ಬೆಂಬಲ, ಪ್ರಭಾವ ಮಿಕ್ಕುಳಿದ ಪಕ್ಷಗಳಿಗೆ ಇಲ್ಲ. ಅಂದರೆ ಸಂಘಿಗಳ ಅಂತಿಮ ಉದ್ದೇಶ ಪ್ರಜಾಸತ್ತೆಯ ಪ್ರಮುಖ ಆಧಾರಗಳಲ್ಲೊಂದಾದ ಪ್ರತಿಪಕ್ಷಗಳನ್ನು ಇಲ್ಲವಾಗಿಸಿ ಏಕಪಕ್ಷೀಯ, ಫ್ಯಾಸಿಸ್ಟ್ ಆಡಳಿತವನ್ನು ಹೇರುವುದಾಗಿದೆ. 1978ರಲ್ಲಿ ಮೊರಾರ್ಜಿ ದೇಸಾಯಿ ಸರ್ಕಾರ ನೋಟು ಅಮಾನ್ಯ ಮಾಡಿದಾಗ "ಉಳಿದ ಪಕ್ಷಗಳೆ ಪ್ರಮುಖ ಗುರಿ ಆಗಿದ್ದವು" ಎಂದಿದ್ದ ಮಾಜಿ ವಿತ್ತಸಚಿವ ಸಿ.ಸುಬ್ರಮಣಿಯನ್‌ರ ಅರ್ಥಗರ್ಭಿತ ಮಾತು ಇಂದಿಗೂ ಅನ್ವಯಿಸುತ್ತದೆ.



ಶುದ್ದ ಬೂಟಾಟಿಕೆ

ನೋಟು ರದ್ದತಿ ವಿಷಯದಲ್ಲಿ ಸಂಘಿಗಳ ಮಹಾ ಬೂಟಾಟಿಕೆಯನ್ನು ಬಯಲಿಗೆಳೆಯಲು ಈ ಕೆಳಗಿನ ಎರಡು ನಿದರ್ಶನಗಳು ಸಾಕು:

ಜನವರಿ 2014ರಲ್ಲಿ ಯುಪಿಎ ಸರ್ಕಾರ 2005ಕ್ಕೂ ಹಿಂದಿನ 500, 1000 ನೋಟುಗಳನ್ನು ಚಲಾವಣೆಯಿಂದ ಹಿಂತೆಗೆಯುವ ಪ್ರಸ್ತಾಪವನ್ನು ಮುಂದಿಟ್ಟಾಗ ಬಿಜೆಪಿ ಅದನ್ನೊಂದು ಗಿಮಿಕ್ಕು ಎಂದು ಬಣ್ಣಿಸಿತ್ತು! ಮನಮೋಹನ್ ಸಿಂಗ್ ಸರ್ಕಾರದ ಪ್ರಸ್ತಾಪವನ್ನು ವಿರೋಧಿಸುತ್ತ ಸರ್ಕಾರ ಈ ಮೂಲಕ ವಿದೇಶಗಳಲ್ಲಿರುವ ಕಾಳಧನದ ವಿಷಯವನ್ನು ಮರೆಮಾಚಲೆತ್ನಿಸುತ್ತಿದೆ ಎಂದು ಆರೋಪಿಸಿತ್ತು! ಅಷ್ಟೇ ಅಲ್ಲ ಅದೊಂದು ಬಡವರ ವಿರೋಧಿ ಕ್ರಮ, ಅದರಿಂದಾಗಿ ಜನಸಾಮಾನ್ಯರು, ಬ್ಯಾಂಕ್ ಅಕೌಂಟ್ ಇಲ್ಲದವರು ಸಂಕಷ್ಟಕ್ಕೀಡಾಗಲಿದ್ದಾರೆ; ಅದರಿಂದ ಚಲಾವಣೆಯಲ್ಲಿರುವ ಕಪ್ಪುಹಣವನ್ನು ತೆಗೆದುಹಾಕಲು ಸಾಧ್ಯವಿಲ್ಲ; ಕಾಳಧನ ಹೊಂದಿರುವವರು ಅದನ್ನೆಲ್ಲಾ ಹೊಸ ನೋಟುಗಳಿಗೆ ಬದಲಾಯಿಸುತ್ತಾರೆ ಎಂದೂ ಹೇಳಿತ್ತು!

ಇದೇ ಬಿಜೆಪಿ 2011ರಲ್ಲಿ ಕಪ್ಪುಹಣದ ಸಮಸ್ಯೆಗೆ ಪರಿಹಾರ ಕಂಡುಹುಡುಕಲೆಂದು ಒಂದು ವಿಶೇಷ ಕಾರ್ಯಪಡೆಯನ್ನು ರಚಿಸಿತ್ತು. ಈಗಿನ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಕೂಡಾ ಅದರ ಸದಸ್ಯನಾಗಿದ್ದ. ಆ ಕಾರ್ಯಪಡೆ ನೀಡಿದ 23 ಸಲಹೆಗಳಲ್ಲಿ ರೂ 500, 1000 ನೋಟುಗಳ ರದ್ದತಿಯ ವಿಷಯವೆ ಇರಲಿಲ್ಲ! ಅಷ್ಟೇ ಅಲ್ಲ, ಸ್ವದೇಶಿ ಕಪ್ಪುಹಣಕ್ಕಿಂತ ವಿದೇಶಿ ಕಪ್ಪುಹಣವೆ ಹೆಚ್ಚು ಅಪಾಯಕಾರಿ ಆಗಿರುವುದರಿಂದ ವಿದೇಶಗಳಲ್ಲಿರುವ ಕಪ್ಪುಹಣದ ಮೇಲೆ ಕೇಂದ್ರೀಕರಿಸಬೇಕು ಎಂದು ಸಲಹೆ ಮಾಡಿತ್ತು! ಅದೇ ರೀತಿ 2014ರಲ್ಲಿ ಮೋದಿ ಸರ್ಕಾರ ರಚಿಸಿದ ವಿಶೇಷ ತನಿಖಾ ತಂಡ ಕೂಡ ರೂ. 500, 1000 ನೋಟುಗಳ ರದ್ದತಿಯ ವಿಷಯವನ್ನು ಎತ್ತಿಯೆ ಇಲ್ಲ!

ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ಚುನಾವಣಾ ಕಾಲದ ಭರವಸೆಗಳನ್ನು ಈಡೇರಿಸಲು ವಿಫಲವಾದ ಮೋದಿ ಸರ್ಕಾರದ ಮೇಲೆ ಒತ್ತಡಗಳು ಹೆಚ್ಚತೊಡಗಿವೆ. ಕಪ್ಪುಹಣವನ್ನು ಹೊರಹಾಕಲೆಂದು ಜಾರಿಗೊಳಿಸಿದ್ದ ಸ್ವಯಂಘೋಷಣೆ ಯೋಜನೆ ನಿರೀಕ್ಷಿತ ಫಲಿತಾಂಶ ಕೊಟ್ಟಿಲ್ಲ, ಖೋಟಾನೋಟುಗಳ ಚಲಾವಣೆ ಹೆಚ್ಚಿದ್ದು, ಅದರಿಂದಾಗಿ ಉಗ್ರಗಾಮಿ

▶▶ 16

ದೇವರುಗಳನ್ನು ಸೃಷ್ಟಿಸಿದ ಕಥೆ

ದೊಡ್ಡವರಿಗಾಗಿ ಮಕ್ಕಳ ಕಥೆ

ಒಂದು ಹಳ್ಳಿಯಲ್ಲಿ ಒಬ್ಬ ಹಿರಿಯಜ್ಜ ಇದ್ದ. ಅವನು ಕಥೆ ಹೇಳೋದಕ್ಕೆ ಖ್ಯಾತಿ ಪಡೆದಿದ್ದ. ಒಂದು ರಾತ್ರಿ ಹಳ್ಳಿಯ ಮಕ್ಕಳೆಲ್ಲಾ ಹಿರಿಯಜ್ಜನ ಗುಡಿಸಲಿಗೆ ಹೋಗಿ ಒಂದು ಕಥೆ ಹೇಳುವಂತೆ ಕಾಡಿಸಿ, ಪೀಡಿಸಿದರು. ಹಿರಿಯಜ್ಜ ಅವರ ಹಠಕ್ಕೆ ಸೋತು, "ಮಕ್ಕಳೆ, ಯಾವ ಕಥೆ ಹೇಳಲಿ" ಎಂದು ಕೇಳಿದ. ಮಕ್ಕಳೆಲ್ಲಾ "ಯಾವುದಾದರು ಸರಿ" ಎಂದು ಬೊಬ್ಬೆ ಹಾಕಿದರು. "ಹಾಗಾದರೆ ಕೇಳಿ. ದೇವರನ್ನು ಸೃಷ್ಟಿಸಿದ ಕಥೆ ಹೇಳುತ್ತೇನೆ" ಎಂದು ಬೊಚ್ಚು ಬಾಯಿ ತೆಗೆದು ಹೇಳಿದ. ಎಲ್ಲಾ ಮಕ್ಕಳು ತಕ್ಷಣ ನಿಶಬ್ದವಾದರು. ಹಿರಿಯಜ್ಜ ಕಥೆ ಹೇಳಲು ಶುರು ಮಾಡಿದ.

"ಒಂದಾನೊಂದು ಕಾಲದಲ್ಲಿ ಒಬ್ಬ ರಾಜನಿದ್ದ ಅವನಿಗೆ ಏನು ತೋಚಿತೋ ಏನೋ ತನ್ನ ರಾಜ್ಯದಲ್ಲಿದ್ದ ಎಲ್ಲಾ ದೇವರುಗಳು, ದೇವಾಲಯಗಳು, ಪುರೋಹಿತರು, ಜ್ಯೋತಿಷ್ಯ, ಹೋಮ, ಹವನ, ವಾಸ್ತುಶಾಸ್ತ್ರಗಳನ್ನೆಲ್ಲಾ ನಿಷೇಧಿಸಿದ. ದೇವರು-ದಿಂಡ್ರು ಅಂತ ಮತ್ತೆ ಯಾರಾದರು ಹೇಳಿ, ಜನರನ್ನು ಮೋಸ ಮಾಡಲು ಪ್ರಯತ್ನಿಸಿದರೆ ಅಂತವರಿಗೆ ಘೋರ ದಂಡ ಮತ್ತು ಶಿಕ್ಷೆ ವಿಧಿಸಲಾಗುವುದು ಎಂದು ಆದೇಶ ಹೊರಡಿಸಿದ. ದೇವಾಲಯಗಳನ್ನು



ನಿರ್ಮಿಸಲು ಹಣ ನೀಡುತ್ತಿದ್ದ ಶ್ರೀಮಂತರು ಮತ್ತು ವ್ಯಾಪಾರಿಗಳ ಮೇಲೆ ಹೆಚ್ಚಿನ ತೆರಿಗೆ ಹಾಕಿದ. ಶ್ರೀಮಂತರು, ವ್ಯಾಪಾರಿಗಳು ಮತ್ತು ದೇವಸ್ಥಾನದ ಪುರೋಹಿತರಲ್ಲಿದ್ದ ಕಳ್ಳತನದ ಎಲ್ಲಾ ಚಿನ್ನ, ಆಭರಣಗಳನ್ನು ಕಸಿದುಕೊಂಡ. ರಾಜ್ಯದ ಜನರು ಕಷ್ಟಪಟ್ಟು ದುಡಿದರೆ ಮಾತ್ರ ಎಲ್ಲರಿಗು ಅನ್ನ, ನೀರು, ದುಡ್ಡು ಎಂದು ಘೋಷಿಸಿದ. ಇದರಿಂದ ರಾಜ್ಯದ ಎಲ್ಲರಿಗು ಮೊದಮೊದಲು ಗಾಬರಿಯಾಯಿತು. ಜನ ಬಂಡಾಯ ಏಳುತ್ತಾರೆ ಎಂದು ಅನೇಕರು ತಿಳಿದರು. ಆದರೆ ರೈತ, ಅಕ್ಕಸಾಲಿಗ, ಬಡಗಿ, ಕುಂಬಾರ, ಕಟುಕ, ಕಸ ಗುಡಿಸುವವರು, ಹೆಂಗಸರು, ಗಂಡಸರು, ಊರ ಹೊರಗಿನ ಗುಡಿಸಲಿನಲ್ಲಿದ್ದ ಜನ; ಸೈನಿಕರು, ಯಾರೂ ರಾಜನ ವಿರುದ್ಧ ತಿರುಗಿ ಬೀಳಲಿಲ್ಲ. ರಾಜ ನಮ್ಮ ಒಳ್ಳೆದಕ್ಕೆ ಇದನ್ನೆಲ್ಲಾ ಮಾಡುತ್ತಿದ್ದಾನೆಂದು ತಿಳಿದು ಸುಮ್ಮನಾದರು. ಆದರೆ ದೇವರು, ಜ್ಯೋತಿಷ್ಯ, ಶಾಸ್ತ್ರ ಹೋಮ, ಹವನ, ವಾಸ್ತು ಶಾಸ್ತ್ರಗಳನ್ನು ನಂಬಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಪುರೋಹಿತರಿಗೆ ಕಷ್ಟವಾಯಿತು. ಇನ್ನು ಮುಂದೆ ಹೆಂಗಪ್ಪಾ ನಮ್ಮ ಸಂಸಾರ? ನಮ್ಮ ಹೊಟ್ಟೆಗೆ ಯಾರು ಹಿಟ್ಟು ಕೊಡೋದು? ನಮ್ಮ ಆಸ್ತಿ-ಪಾಸ್ತಿ ಎಲ್ಲಾ ಮುಳುಗಿಹೋಯಿತು ಎಂದು ಚಿಂತಾಕ್ರಾಂತರಾದರು.

ಇತ್ತ ಕಡೆ ರಾಜ್ಯದ ಜನರು ದೇವರು-ದಿಂಡ್ರು, ಜ್ಯೋತಿಷ್ಯ ವಾಸ್ತುಗಳನ್ನೆಲ್ಲಾ ಮರೆತರು. ರಾಜನ ಆಜ್ಞೆಯಂತೆ ಕಷ್ಟಪಟ್ಟು ದುಡಿದು, ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹಣ, ಆದಾಯ ಬರುವಂತೆ ಮಾಡಿದರು. ಅವರಿಗೆ ಈಗ ದುಡಿಮೆಯೆ ದೇವರಾಯಿತು. ಎಲ್ಲವೂ ಚೆನ್ನಾಗಿ ಸಾಗುತ್ತಿತ್ತು. ಆದರೆ ಶ್ರೀಮಂತರು, ವ್ಯಾಪಾರಿಗಳು ಮತ್ತು ಪುರೋಹಿತರು ಬಹಳ ದಿನ ಸುಮ್ಮನಿರಲಿಲ್ಲ. ಒಂದು ದಿನ ಎಲ್ಲರೂ ಗುಟ್ಟಾಗಿ ಕಾಡಿನ ಒಂದು ಗುಹೆಯಲ್ಲಿ ರಹಸ್ಯ ಸಭೆ ನಡೆಸಿದರು. ಅದರಲ್ಲಿ ಒಬ್ಬ ಪುರೋಹಿತ ಎದ್ದು ನಿಂತು, "ಗೆಳೆಯರೆ, ಇನ್ನು ಮುಂದೆ ನಾವು ಸುಮ್ಮನಿದ್ದರೆ ನಮಗೆ ಉಳಿಗಾಲವಿಲ್ಲ, ಏನಾದರು ಮಾಡಲೇ ಬೇಕು" ಎಂದು ಹೇಳಿದ. ಸಭೆಯಲ್ಲಿ ಸೇರಿದ್ದ ಎಲ್ಲರೂ ಪುರೋಹಿತನಿಗೆ, "ನಮ್ಮ ಊರಿನ ಹಿರಿಯ ಪುರೋಹಿತ ನೀನು. ನೀನು ಹೇಳಿದ ಉಪಾಯಕ್ಕೆ ನಾವು ಬದ್ಧ. ಏನಾದರೂ ಮಾಡು. ನಾವು ಕಳೆದುಕೊಂಡಿರುವುದನ್ನೆಲ್ಲಾ ಮತ್ತೆ ಪಡೆದುಕೊಳ್ಳಬೇಕು" ಎಂದು ಒಕ್ಕೊರಲಿನಿಂದ ಕೂಗಿದರು. ಆಗ ಪುರೋಹಿತ ಎಲ್ಲರಿಗೂ ಒಂದು ಉಪಾಯವನ್ನು ಅವರ ಕಿವಿಯೊಳಗೆ ಗುಟ್ಟಾಗಿ ಹೇಳಿದ. ಶಾಸ್ತ್ರ ಪುರಾಣಗಳ ಮೇಲೆ ಆಣೆ ಮಾಡಿ ಅಲ್ಲಿದ್ದವರನ್ನೆಲ್ಲಾ ಮರಳು ಮಾಡಿದ. ಏನಪ್ಪ ಆ ಉಪಾಯ?

ಏನಪ್ಪ ಅಂದ್ರೆ, ಅವರೆಲ್ಲರೂ ಮರುದಿನ ರಾತ್ರಿ ರಾಜನಿಗೆ ಮತ್ತು ರಾಜ್ಯದ ಜನರಿಗೆ ಗೊತ್ತಾಗದ ಹಾಗೆ ಎತ್ತು, ಹಸು, ಹಾವು, ಹುಲಿ, ಸಿಂಹ, ಕಾಗೆ, ನವಿಲು, ಕುರಿ, ಕೋಳಿ, ಹಂದಿಗಳನ್ನು ಹಿಡಿದು, ಕೊಂದು, ಅವುಗಳ ಮುಕಳಿಯಿಂದ ಒಳಗೆ ಹೋಗಿ ಬಚ್ಚಿಟ್ಟುಕೊಂಡು, ದೇವರ ಹಾಗೆ ನಟಿಸಿ ಜನರನ್ನು ಮರಳು ಮಾಡುವ ಉಪಾಯ ಅದು. ಆದರೆ ಅವರು ಒಳಗೆ ಹೋದ ತಕ್ಷಣ ಕೊಂದ ಪ್ರಾಣಿಗಳ ಮುಕಳಿ ಮುಚ್ಚಿಕೊಂಡು ಬಿಡ್ತು. ಒಳಗೆ ಹೋದವರಿಗೆ ಹೊರಗೆ ಬರಲು ಆಗಲಿಲ್ಲ. ಹೆಂಗಪ್ಪಾ ಈಗ ಹೊರಗೆ ಬರೋದು ಎಂದು ಒಳಗಿದ್ದವರಿಗೆ ಚಿಂತೆಯಾಯಿತು. ಜೊತೆಗೆ ಹಸಿವು ಕೂಡ ಹೆಚ್ಚಾಗ ತೊಡಗಿತು. "ಯೋಚನೆ ಮಾಡಬೇಡಿ, ಏನಾದರೊಂದು ಉಪಾಯ ಮಾಡುತ್ತೇನೆ" ಎಂದು ಪುರೋಹಿತ ಎಲ್ಲರಿಗೂ ಒಳಗಿನಿಂದ ಹೇಳಿದ.

ಮರುದಿನ ಬೆಳಗ್ಗೆ ರಾಜ್ಯದ ಜನರೆಲ್ಲಾ ತಮ್ಮತಮ್ಮ ಕೆಲಸಕ್ಕೆ ಹೋಗುತ್ತಿರಬೇಕಾದರೆ ಅಲ್ಲಿ ಬಿದ್ದುಕೊಂಡಿರುವ ಪ್ರಾಣಿಗಳನ್ನು ನೋಡಿ, ಅವುಗಳನ್ನು ಕೋಲಿನಿಂದ ಉಳ್ಳಾಡಿಸಿದರು. ಹಸುವಿನ ಮುಕುಳಿಯ ಒಳಗಿದ್ದ ಪುರೋಹಿತ ಇದನ್ನೆ ಕಾಯುತ್ತಿದ್ದ. ಒಳಗಿನಿಂದ "ಲೇ, ಊರಿನ ದಡ್ಡ ಮಕ್ಕಳೆ, ನಾನು ನಿಮ್ಮ ಮನೆ ದೇವರು ಮುಕಳಿಯಾಗ ಹೊಕ್ಕೊಂಡು ಇದಿವಿ. ನೀವೆಲ್ಲರೂ ದೇವರಿಗೆ ನಡೆದುಕೊಳ್ಳದೆ ಭಾಳ ದಿವಸ ಆಗ್ಯೆತೆ. ನಿಮ್ಮ ದೇವರನ್ನ ನೀವು ಮರೆತಿದ್ದೀರ. ನಾವು ಸುಮ್ಮನಿರಲ್ಲ. ನಿಮ್ಮ ಊರಿಗೆ ಕೆಟ್ಟ ಬರ ತರ್ತೀವಿ. ಇಲ್ಲಾಂದ್ರೆ ನಿಮ್ಮನ್ನ ಕೊಚ್ಚಿಕೊಂಡು ಹೋಗುವ ಹಾಗೆ ಮಳೆ ಬರಿಸ್ತೀವಿ. ನಿಮ್ಮ ಮನೆ ಎಲ್ಲಾ ಹಾಳು ಮಾಡುತ್ತೀವಿ. ಎಚ್ಚರ" ಎಂದು ಹೇಳಿದ. ಆ ಪ್ರಾಣಿಗಳ ಒಳಗಡೆಯಿಂದ ದೇವರು ಮಾತಾನಾಡುತ್ತಿರುವುದು ಎಂದು ಊರಲ್ಲೆಲ್ಲಾ ಸುದ್ದಿ ಹಬ್ಬಿತು. ಮತ್ತಷ್ಟು ಜನ ಅಲ್ಲಿ ಬಂದು ಜಮಾಯಿಸಿದರು. ಪ್ರಾಣಿಯ ಮುಕಳಿಯ ಒಳಗಿರುವವರು ನಿಜವಾಗಿಯೂ ದೇವರುಗಳೆ ಎಂದು ನಂಬಿ, ಅವರ ಕೋಪಕ್ಕೆ ಗುರಿಯಾಗುತ್ತೇವೆ ಎಂದು ಭಯದಿಂದ ನಡುಗಿದರು. ಅಲ್ಲಿದ್ದ ಕೆಲ ಊರ ಜನರು, "ಯಪ್ಪಾ ಸ್ವಾಮಿ, ನಮ್ಮದು ತಪ್ಪಾಯಿತು. ನಮ್ಮನ್ನ ಕ್ಷಮಿಸು. ನಮಗೆ ಏನೂ ಮಾಡಬೇಡ" ಎಂದು ಎಲ್ಲರೊಡಗೂಡಿ ಅಡ್ಡ ಬಿದ್ದರು. ಮತ್ತೊಮ್ಮೆ ಪುರೋಹಿತ ಎಲ್ಲರಿಗೂ ಭಯ ಬರುವ ಹಾಗೆ ಹೇಳಿದ, "ಹಾಗಾದರೆ ನೀವು ನಾನು ಹೇಳಿದ ಹಾಗೆ ಕೇಳಬೇಕು. ನೀವು ಮೊದಲಿದ್ದ ಹಾಗೆ ದೇವರನ್ನು ಮಾಡಬೇಕು. ನಮ್ಮನ್ನು ಕೂಡ ಪೂಜೆ ಮಾಡಬೇಕು. ನಿಮ್ಮ ಹೆಣ್ಣುಮಕ್ಕಳು, ಗಂಡುಮಕ್ಕಳು, ನೀವು ಎಲ್ಲರೂ ಬರಬೇಕು. ಇಲ್ಲಿರುವ ಎಲ್ಲಾ ಪ್ರಾಣಿಗಳು ಮೊದಲಿನ ದೇವರುಗಳಿಗೆ ಸೇರಿದ್ದು. ನೀವೆಲ್ಲರೂ ಇವನ್ನು ಆ ದೇವರ ಬಳಿ ಇಡಬೇಕು. ಪೂಜಿಸಬೇಕು. ಇಲ್ಲಾಂದ್ರೆ ನಿಮ್ಮ ವಂಶಾನ ಹಾಳು ಮಾಡುತ್ತೀನಿ". ಊರಿನ ಜನ ಹೆದರಿ ಹಸುವಿನ ಮುಕಳಿಯೊಳಗಿದ್ದ ಪುರೋಹಿತನ ಮಾತು ಕೇಳಿ ಎಲ್ಲಾ ಪ್ರಾಣಿಗಳ ಮುಂದೆ ಪೂಜೆ ಶುರು ಮಾಡಿದರು. ಮುಕಳಿಯೊಳಗಿದ್ದ ಪುರೋಹಿತ ಮತ್ತೊಮ್ಮೆ, "ಎಲವೋ ದಡ್ಡ ನನ್ನ ಮಕ್ಕಳೆ, ಕೇವಲ ಪೂಜೆ ಮಾಡಿದರೆ ಸಾಲದು. ಊಟಕ್ಕೆ ಏರ್ಪಾಟು ಮಾಡಿ; ಊರಿನ ಪುರೋಹಿತರನ್ನು ಕರೆದು ಕಾಣಿಕೆ ನೀಡಿ. ಹೊಡೆದು ಹಾಕಿರುವ ದೇವಾಲಯಗಳನ್ನು ಮತ್ತೆ ಕಟ್ಟಿ. ಅಲ್ಲಿ ಮೊದಲು ಇದ್ದ ದೇವರುಗಳನ್ನು ಮತ್ತೆ ತರಬೇಕು. ಇಲ್ಲದಿದ್ದರೆ ನಿಮ್ಮನ್ನೆಲ್ಲಾ ಕೊಂದು ಹಾಕುತ್ತೀವಿ" ಎಂದು ಗುಡುಗಿದ.

ಊರ ಜನ ಹೆದರಿ ಮುಕಳಿಯೊಳಗಿದ್ದ ಪುರೋಹಿತನ ಹಾಗೆ ನಡೆದುಕೊಂಡರು. ದೇವರಿಗೆ ಅಡಿಗೆ ಮಾಡಿದರು. ಒಡೆದುಹೋಗಿದ್ದ ದೇವಸ್ಥಾನಗಳನ್ನು ಮತ್ತೆ ಕಟ್ಟಿದರು. ಅಲ್ಲಿ ಮೊದಲಿದ್ದ ದೇವರುಗಳ ಜೊತೆಗೆ ಮತ್ತಷ್ಟು ದೇವರುಗಳನ್ನು ಸೇರಿಸಿದರು. ಪೂಜೆಗೆ ಹತ್ತು ಕಾಯಿ, ಹತ್ತು ಗೊನಿ ಬಾಳೆಹಣ್ಣು, ಕರ್ಪೂರ, ಬೆಂಕಿ, ಊದುಬತ್ತಿ ಎಲ್ಲಾ ತಂದು, ಆ ಪ್ರಾಣಿಗಳ ಮುಕಳಿಯನ್ನು ತೊಳೆದು ಪೂಜೆ ಮಾಡಿದರು. ಹಂದಿಯ ಮುಕಳಿಯೊಳಗಿದ್ದ ವಾಸ್ತು ಶಾಸ್ತ್ರಿ ಒಳಗಿನಿಂದ ನುಡಿದ, "ಒಂದೆರಡು ಸೇರು ... ತಂದು ನಮ್ಮ ಮುಕಳಿಯನ್ನು ಚೆನ್ನಾಗಿ ನೀಪಬೇಕು. ... ಕೈಗಳು ತೂರೋ ಹಂಗೆ ಅಗಲ ಮಾಡಿ ಅದ್ದ ... ಮಾಡಬೇಕು. ಮಾಡಿ ಹತ್ತು ತಟ್ಟೆಗಳಲ್ಲಿ ಎಡೆ ... ಕೊಡಬೇಕು" ಎಂದು ಗುಟುರಿದ. ಅಲ್ಲಿದ್ದ ಎಲ್ಲಾ ಪ್ರಾ... ಮುಂದೆ ಊರಿನ ಜನ ವಾಸ್ತು ಶಾಸ್ತ್ರಿ ಹೇಳಿ... ಮಾಡಿದರು. ಹತ್ತು ತಟ್ಟೆಗಳಲ್ಲಿ ಇದ್ದ ಊಟವ... ಪ್ರಾಣಿಗಳ ಮುಕಳಿಯೊಳಗಿದ್ದ ಶ್ರೀಮಂತರು, ವ್ಯಾಪಾ... ಮತ್ತು ಪುರೋಹಿತರು ತಿಂದು ಹಾಕಿದರು. ... ತಿಂದು ಸುಸ್ತಾಗಿಹೋದರು. ಮುಕಳಿ... ಏಸು ದಿನ ಅಂತ ಇದ್ದಾರು? ... ಇದ್ದು ಬೇಸರ ಬಂದು ಊರಜ... ಗೊತ್ತಾಗದ ಹಾಗೆ ತಪ್ಪಿಸಿಕೊಳ್ಳ... ಹೇಗೆ ಎಂದು ಊರ ಜ... ಅರ್ಥವಾಗದ ಭಾಷೆಯಲ್ಲಿ ಪುರೋ... ಮುಕಳಿಯೊಳಗಿದ್ದ ಇತರರಿಗೆ ಹೇಳಿದ. ... ಜನರು ಅವನ ಮಾತುಗಳು "ಶಾಸ್ತ್ರದ ಮಂತ್ರ... ಅವು" ಎಂದು ಕೈ ಮುಗಿದರು.

ಕೋಳಿಯ ಮುಕಳಿಯೊಳಗಿದ್ದ ವಾ... ಪುರೋಹಿತ ಹೇಳಿಕೊಟ್ಟ ಹಾಗೆ ಹೇಳಿದ, "... ಮೂರ್ಖ ಜನರೆ, ಇಲ್ಲಿ ಬಂದಿರುವ ಹೆಣ್ಣು ಮಕ್ಕ... ಸಾಲಾಗಿ ನಿಲ್ಲಿಸಿ, ಅವರ ಜಡೆ, ಜಡೆಗೆ ಗಂಟು ಹಾಕ... ಹುಡುಗರ ಜುಟ್ಟು, ಜುಟ್ಟಿಗೆ ಗಂಟು ಹಾಕಿ, ನಾಯ... ಬಾಲ, ಬಾಲಗಳನ್ನು ಗಂಟು ಹಾಕಬೇಕು. ದೊಡ... ಒಬ್ಬರಿಗೊಬ್ಬರು ಹಗ್ಗದಿಂದ ಕಟ್ಟಿಕೊಳ್ಳಬೇಕು. ... ಕೈಯಲಿರುವ ಕೋಲುಗಳನ್ನು ಒಟ್ಟಿಗೆ ದ... ಎಸೆಯಬೇಕು. ಇದಾದ ಮೇಲೆ ಆಕಾಶದ ಕಡೆ ... ಮಾಡಿ, ಕಣ್ಣು ಮುಚ್ಚಿಕೊಂಡು ದೇವರನ್ನು ಪ್ರಾರ್ಥಿಸ... ಇಲ್ಲದಿದ್ದರೆ ನಾವು ನಿಮ್ಮ ವಂಶ ನಿರ್ವಂಶ ಮಾಡುತ್ತ... ಊರಿನ ಜನ ಕೋಳಿಯ ಮುಕಳಿಯಿಂದ ... ಆದೇಶದಂತೆ ನಡೆದುಕೊಂಡರು. ಅವರೆಲ್ಲರೂ ... ಮುಚ್ಚಿಕೊಂಡು, ಆಕಾಶ ಕಡೆ ಮುಖ ಮಾಡಿಕೊ... ಪ್ರಾರ್ಥಿಸುತ್ತಿರುವಾಗ ಪ್ರಾಣಿಗಳ ಮುಕಳಿಯೊಳಗಿದ್ದ... ವ್ಯಾಪಾರಿಗಳು, ಶ್ರೀಮಂತರು ಮತ್ತು ಪುರೋಹಿ... ಹೊರಗೆ ಬಂದು ಅಲ್ಲಿರುವವರಿಗೆ ಗೊತ್ತಾಗ... ಓಡಿಹೋಗಿ ಊರನ್ನು ಸೇರಿ. ತಮ್ಮತಮ್ಮ ಮನೆಯ... ಹೋಗಿ ಗಡದ್ದಾಗಿ ನಿದ್ದೆ ಮಾಡಿದರು.

****

"ಕೆಲವು ದಿನಗಳ ನಂತರ ಪುರೋಹಿತನ ... ಕೇಳಿ ಊರಜನರು ಹಳೆಯ ರಾಜನನ್ನು ಗಡಿ... ಮಾಡಿದರು. ಹೊಸ ರಾಜನನ್ನು ನೇಮಕ ಮಾಡಿ... ಈಗ ಹೊಸ ರಾಜ ಆದೇಶ ನೀಡಿದಂತೆ ರಾ... ನೂರಾರು ದೇವರುಗಳು, ದೇವಾಲಯಗಳು ಸೃಷ್ಟಿಯ... ಸಾವಿರಾರು ಪೂಜಾರಿಗಳು ಹುಟ್ಟಿಕೊಂಡಿ... ದೇವರುಗಳನ್ನು ಮೆಚ್ಚಿಸಲು ಹೋಮ, ಯಜ್ಞ... ಇತ್ಯಾದಿಗಳು ಲೆಕ್ಕವಿಲ್ಲದಷ್ಟು ಹೆಚ್ಚಿವೆ. ಶ್ರೀಮ... ವ್ಯಾಪಾರಿಗಳು ಮತ್ತು ಪುರೋಹಿತರು ಈಗ ತಮ್ಮ ... ಮಕ್ಕಳ ಜೊತೆಗೆ ತಿಂದುಂಡು ಊರೆಲ್ಲಾ ... ಮುಚ್ಚಿಕೊಳ್ಳುವಂತೆ ಊಸು ಬಿಡುತ್ತಿದ್ದಾರೆ ಎಂದು" ... ಹಿರಿಯಜ್ಜ ಕಥೆ ಮುಗಿಸಿ, ಮಕ್ಕಳ ಕಡೆ ನೋಡಿದ... ಮುಗಿಯುವ ಮೊದಲೆ ಹಳ್ಳಿಯ ಮಕ್ಕಳೆಲ್ಲರೂ ... ಮಾಡುತ್ತಿದ್ದರು.

(ಕನ್ನಡದ ಒಂದು ಜಾನಪದ ಕಥೆಯಿಂದ ಸ್ಫೂರ್ತಿಗೊ...)

■ ಡಾ.ವಿಜಯಕುಮಾರ್ ಎಂ.ಬೋ...

15 ಸರ್ಜಿಕಲ್ ದಾಳಿ

ಚಟುವಟಿಕೆಗಳು ಹೆಚ್ಚಾಗಿವೆ ಎಂದು ತಿಳಿಯಲಾಗಿದೆ. (ಆದರೆ ಖೋಟಾನೋಟುಗಳ ಪ್ರಧಾನ ಉದ್ದೇಶ ದೇಶದ ಆರ್ಥಿಕತೆಯನ್ನು ಅಸ್ತವ್ಯಸ್ತಗೊಳಿಸುವುದಾಗಿದೆ. ವ್ಯವಸ್ಥೆ ದಕ್ಷವಾಗಿ ಕಾರ್ಯಾಚರಿಸಿ ಅಂತಹ ನೋಟುಗಳನ್ನು ಪತ್ತೆಹಚ್ಚಿ ಕಾಲಕಾಲಕ್ಕೆ ಬದಲಾಯಿಸುತ್ತಿದ್ದಲ್ಲಿ ಖೋಟಾನೋಟುಗಳ ಸಮಸ್ಯೆಯನ್ನು ನಿಯಂತ್ರಿಸುವುದು ಕಷ್ಟವಿಲ್ಲವೆಂದು ತಜ್ಞರು ಹೇಳುತ್ತಾರೆ. ಆದರೆ ಮಾಹಿತಿ ಇದ್ದರೂ ಸಕಾಲದಲ್ಲಿ ಸೂಕ್ತಕ್ರಮ ತೆಗೆದುಕೊಳ್ಳುವಲ್ಲಿ ಮೋದಿ ಸರ್ಕಾರ ವಿಫಲವಾಗಿದೆ). ದೇಶಾದ್ಯಂತ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವುದರ ವಿರುದ್ಧ, ಮಾಧ್ಯಮಗಳನ್ನು ಹತ್ತಿಕ್ಕುವ ಯತ್ನದ ವಿರುದ್ಧ, ಅಘೋಷಿತ ತುರ್ತುಪರಿಸ್ಥಿತಿ ನಿರ್ಮಾಣವಾಗಿರುವುದರ ವಿರುದ್ಧ ವ್ಯಾಪಕ ಖಂಡನೆಗಳು ವ್ಯಕ್ತವಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಬಂದಿರುವ ನೋಟು ಅಮಾನ್ಯ ಕಾರ್ಯಕ್ರಮದ ಹಿಂದೆ ಒಂದೇ ಏಟಿಗೆ ಮೂರು ಹಕ್ಕಿಗಳನ್ನು ಹೊಡೆದುರುಳಿಸುವ ಉದ್ದೇಶ ಇರುವಂತಿದೆ. ಒಂದು ಕಪ್ಪುಹಣ ನಿಯಂತ್ರಣ, ಎರಡನೆಯದು ಖೋಟಾನೋಟುಗಳ ಚಲಾವಣೆ ನಿಲ್ಲಿಸುವುದು, ಮೂರನೆಯದು ಪ್ರತಿಪಕ್ಷಗಳ ನಿರ್ನಾಮ. ಆದರೆ ಇದರ ದುಷ್ಪರಿಣಾಮಗಳನ್ನು ಜನಸಾಮಾನ್ಯರು ಅನುಭವಿಸುವಂತಾಗಿದೆ. ಅತ್ತ ಕಾರ್ಪೊರೇಟು ಕುಳಗಳು, ಕಾಳದಂಧೆಕೋರರು, ಕಾಳಧನಿಕರೆಲ್ಲ ನಿರಾತಂಕವಾಗಿದ್ದಾರೆ. ನಮ್ಮ ಚುನಾವಣೆಗಳಿಗೆ ಖರ್ಚಾಗುತ್ತಿರುವ ಕೋಟಿಗಟ್ಟಲೆ ದುಡ್ಡಿನ ಹೆಚ್ಚಿನಂಶ ಬರುತ್ತಿರುವುದೆ ಇಂತಹ ಮೂಲಗಳಿಂದ ಎಂಬುದು ಇದುವರೆಗೆ ತೆರೆದ ರಹಸ್ಯವಾಗಿತ್ತು. ಆದರೆ ಇತ್ತೀಚಿನ "ಸಹಾರಾ ಪೇಪರ್ಸ್" ಪ್ರಕರಣ ಆ ರಹಸ್ಯದ ಕವಚವನ್ನು ಪೂರ್ತಿ ಕಳಚಿಹಾಕಿದೆ. ಎರಡು ದೊಡ್ಡ ಕಾರ್ಪೊರೇಟು ಸಂಸ್ಥೆಗಳು ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಹಲವಾರು ಪ್ರಮುಖ ರಾಜಕಾರಣಿಗಳಿಗೆ ಕೋಟಿಗಟ್ಟಲೆ ಸಂದಾಯ ಮಾಡಿರುವ ಕುರಿತು ದಾಖಲೆಗಳು ಲಭ್ಯವಾಗಿವೆ ಎಂದು ಸಾಮಾಜಿಕ ಕಾರ್ಯಕರ್ತರೂ ವಕೀಲರೂ ಆಗಿರುವ ಪ್ರಶಾಂತ್ ಭೂಷಣ್ ತಿಳಿಸಿದ್ದಾರೆ. ಇದು ಹಿಮಗಡ್ಡೆಯ ಬರೀ ತುದಿ ಅಷ್ಟೆ! ಆದುದರಿಂದ "ಸರ್ಜಿಕಲ್ ದಾಳಿ"ಗಳು ನಡೆಯಬೇಕಿರುವುದು ಕೇವಲ ನಗದು ಕಪ್ಪುಹಣದ ಮೇಲಲ್ಲ, ಅವು "ಕಪ್ಪು ವಹಿವಾಟು"ಗಳನ್ನೂ ರಾಜಕಾರಣಿಗಳು ಮತ್ತು ಬಂಡವಾಳಶಾಹಿ ನಡುವಿನ ನಂಟುಗಳನ್ನೂ ಗುರಿಯಾಗಿಸಬೇಕಿದೆ. ಆಗಷ್ಟೆ ಕಪ್ಪುಹಣದ ನಿಯಂತ್ರಣದ ಜತೆಗೆ ಹಳಿ ತಪ್ಪಿರುವ ಪ್ರಜಾಸತ್ತೆಯನ್ನು ಪೂರ್ವಸ್ಥಿತಿಗೆ ತರುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯೊಂದನ್ನು ಇರಿಸಿದಂತಾಗಬಹುದು. ಆದರೆ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು?

■ ಸುರೇಶ್ ಭಟ್ ಬಾಕ್ರಬೈಲ್



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಚಿಕ್ಕದೇವರಾಯನ ವಿಜಯವೂ, ಜಂಗಮರ ಕೊಲೆಯೂ!

ಸಾಕ್ಷಿ ಕಥನಗಳು

ಮಹಾಭಾರತವು ಮಹಾಕಾವ್ಯವಾಗಿರುವುದರಲ್ಲಿ ಾವ ಸಂದೇಹವೂ ಇಲ್ಲ. ಆದರಷ್ಟೇ, ಕೆಲವೊಮ್ಮ ದಕ್ಕಿಂತ ಬದುಕಿಗೆ ಹತ್ತಿರವಾಗಿರುವಂತಹ ಆಯಾ ಸ್ಥಳದಲ್ಲಿ ಟ್ಟಿರುವಂತಹ ಕಾವ್ಯಗಳು ಬರೀ ಮೌಖಿಕ ಪರಂಪರೆ ಲ್ಲಿಯೇ ಉಳಿದುಹೋಗಿರುವುದರಿಂದ, ಅಕ್ಷರ ರೂಪದಲ್ಲಿ ಖಲಾಗಿಲ್ಲದೇ ಇರುವುದರಿಂದ ಉಳಿಯದೇ, ಬೆಳೆಯದೇ, ಳಿಯದೇ ಹೋಗಿರುವುದೇ ಹೊರತು, ದೇಸಿ ಕಾವ್ಯಗಳು ನ್ನೂ ಅಭೂತಪೂರ್ವ ಒಳನೋಟ ಗಳಿಂದ, ಜೀವನಾನು ವಗಳಿಂದ ಕೂಡಿವೆ. ನಮ್ಮ ಕನ್ನಡದ ದೇಸಿಕಾವ್ಯಗಳಾದ ಂಟೇಸ್ವಾಮಿ, ಮಹದೇಶ್ವರ, ರಾಚಪ್ಪಾಜಿ, ದೊಡ್ಡಮ್ಮ ಯಿಯಂತಹ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಷಯಗಳು ಸಾಂಸ್ಕೃತಿಕವಾಗಿ ಲಭ್ಯವಾದಂತೆ, ಮನುಷ್ಯನ ನಸ್ಸಿನ ವ್ಯಕ್ತಿಗತ ಹೋರಾಟಗಳನ್ನು, ದ್ವಂದ್ವಗಳನ್ನು, ಅದು ುಟ್ಟುವ ಕ್ರೌರ್ಯಗಳನ್ನು ತಿಳಿಸುವಂತಹ ಸಾರಂಗಧರನ ೇಸಿ ಕಾವ್ಯಗಳೂ ಇವೆ. ಅವುಗಳನ್ನು ಈಗ ಕನ್ನಡ ಶ್ವವಿದ್ಯಾಲಯಗಳ ಪ್ರಯತ್ನಗಳಿಂದ ಅಕ್ಷರರೂಪದಲ್ಲಿ ಳಿದಿರುವಷ್ಟು ದಾಖಲಾಗಿವೆ. ಅವುಗಳನ್ನು ಅಮರ ೊಳಿಸುವ ನಿಟ್ಟಿನಲ್ಲಿ ಕೆಲಸಗಳು ನಡೆಯುತ್ತಿವೆ.

ಉತ್ಪ್ರೇಕ್ಷೆ, ರಸಭಾವ ಮತ್ತು ಕುತೂಹಲಕರವಾಗಿ ವಂತಹ ಕಥನಗುಣ ಇವುಗಳನ್ನು ತಮ್ಮದೇ ಜೀವನಾನು ವಕ್ಕೆ, ತಾವು ಸಾಕ್ಷೀಕರಿಸುವ ಸಮಾಜಕ್ಕೆ ಅನ್ವಯಿಸಿ ೊಂಡು ಹೇಳುವಂತಹ ಅಥವಾ ನಿರೂಪಿಸುವಂತಹ ಲೆ ಬಹಳ ಪುರಾತನವಾದದ್ದು. ಆದರಿಂದಲೇ ನಮ್ಮ ೂರ್ವಿಕರ ದ್ವಂದ್ವಗಳನ್ನು, ಹೋರಾಟಗಳನ್ನು, ಒಲವು ಲುವುಗಳನ್ನು, ಪ್ರಭಾವಗಳನ್ನು ಮತ್ತು ಶೋಷಣೆಗಳನ್ನು ಾವು ಇಂದು ಅನೇಕ ಕಾವ್ಯಗಳಲ್ಲಿ ನೋಡಲು ಸಾಧ್ಯವಾಗಿದೆ. ಾವ್ಯದ ಶಕ್ತಿಯೇ ಇದು.

ಒಂದು ಸಾಲಿನ ಗಾದೆಯಿಂದ ಹಿಡಿದು ಮಹಾಭಾರತ ಂತಹ ಲಿಖಿತ ದಾಖಲೆಯ ಕಾವ್ಯದವರೆಗೂ ಇದು ಮರ್ಥವಾಗಿ ನಿರೂಪಿತ. ಕನ್ನಡದಲ್ಲಿ ಈ ಮೊದಲು ಉಲ್ಲೇಖಿಸಿದಂತಹ ಕಾವ್ಯಗಳು ಮೈಸೂರು ಸುತ್ತಮುತ್ತಲ ಯಲುಸೀಮೆಯ ಪ್ರದೇಶಗಳದ್ದಾದರೆ ಇನ್ನು ದಕ್ಷಿಣ ನ್ನಡ, ಉತ್ತರ ಕನ್ನಡ, ಮಲೆನಾಡು, ಗಡಿನಾಡುಗಳ ಬೇರೆ ಬೇರೆ ಮೌಖಿಕ ಕಾವ್ಯಗಳೇ ಇವೆ. ಕರ್ನಾಟಕದಲ್ಲಿಯೇ ಷ್ಟು ವೈವಿಧ್ಯತೆ ಇರುವುದಾದರೆ, ಭಾರತದ ಉಳಿದೆಲ್ಲಾ ಾಗಗಳ ಮೌಖಿಕ ಕಾವ್ಯಗಳ, ಜಾನಪದ ಸಂಪತ್ತನ್ನು ಊಹಿಸಿಕೊಂಡರೇನೇ ಅದೆಷ್ಟು ಅಗಾಧವಾಗಿದೆ ಎಂದು ತಿಳಿಯುತ್ತದೆ. ಪರಿಚಯಾತ್ಮಕವಾಗಿ ಒಂದಷ್ಟು ಎಲ್ಲವನ್ನೂ ಉಲ್ಲೇಖಿಸುತ್ತಾ ಹೋಗಬಹುದೇ ಹೊರತು, ಎಲ್ಲವನ್ನೂ ಮೂಲಾಗ್ರವಾಗಿ ಸಂಪೂರ್ಣ ಶೋಧಿಸಿ ತಿಳಿಯುವ ಮತ್ತು ತಿಳಿಸುವ ಕಾರ್ಯ ಬಹುಶಃ ಒಬ್ಬರಿಗೆ ಒಂದು ನ್ಮ ಸಾಲದೇನೋ.

ಜಯವೆಂಬ ಕಥೆಯು ಸ್ಥಳದಿಂದ ಸ್ಥಳಕ್ಕೆ ಸಾಗುವಾಗ ಅಲ್ಲಿನ ಸ್ಥಳೀಯ ದೇಸೀ ಕತೆಗಳನ್ನೂ, ಬದುಕುಗಳನ್ನೂ ತನ್ನೊಳಗೆ ಹೊಂದುತ್ತಾ ಹೋದಂತೆ ಬೆಳೆಯುತ್ತಾ ಹೋಯಿತು. ಇದರಲ್ಲಿ ಕನ್ನಡದ ಜನಪದರು ಸೇರಿಸಿರುವ ಕಥೆಯಿಂದ ಹಿಡಿದು ಭಾರತದ ಇತರ ಎಲ್ಲಾ ಸಂಸ್ಕೃತಿಯವರೂ ಸಲ್ಲಿಸಿರುವ ಕಾಣ್ಕೆಗಳಿವೆ. ಆದ್ದರಿಂದಲೇ ಇದನ್ನು ಮಹಾಭಾರತ ಎಂದು ಕರೆಯುವುದು ಹಾಗೂ ಈ ಹೆಸರಿಗೆ ಇದು ಅರ್ಹವಾಗಿದೆ ಕೂಡ.

ಸರ್ವಜ್ಞ ಮಹಾಭಾರತವನ್ನು ಸೋದರರ ವಧೆ, ಾದರದ ಕಥೆ ಎಂದು ಜರಿದಿದ್ದಾನೆ. ಅದಕ್ಕೆ ಕಾರಣ ಅದನ್ನು ಶಿಷ್ಟವರ್ಗವು ಅತಿಯಾಗಿ ಆಧರಿಸಿ ಅದನ್ನು ಬಿಟ್ಟರೆ ಇನ್ನೊಂದಿಲ್ಲ ಎನ್ನುವಂತೆ ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಸಮಾಜದ ಮೇಲೆ ಹೇರಿಕೆ ತರುವ ಪ್ರಯತ್ನ ಮಾಡಿದ್ದರಿಂದಲೋ ಅಥವಾ ಅವನಿಗೆ ಆಪ್ತವಾಗಿದ್ದ ಶರಣ ಕಥನಗಳನ್ನು ಅವರು ತಿರಸ್ಕರಿಸಿದಂತೆ ಅನುಭವವಾಗಿ ದ್ದರಿಂದಲೋ ಇರಬಹುದು. ಸರ್ವಜ್ಞ ಹಾಗೆಂದಿದ್ದಾನೆ ಎಂದ ಕೂಡಲೇ ನಾವು ಅದನ್ನು ಒಪ್ಪಬೇಕೆಂದೇನಿಲ್ಲ. ತನ್ನ ಕಾಲಘಟ್ಟದಲ್ಲಿ ತನ್ನ ಅನುಭವದ ಆಧಾರದಲ್ಲಿ ಆತ ವಿತಳೆ, ಹಾಗೆಂದಿದ್ದಾನೆಂದು ಗಮನಿಸಬೇಕಾಗುತ್ತದೆ.

ಹಾಗೆಯೇ ಪುರಾಣವೆಂಬುದು ಪುಂಡರಗೋಷ್ಠಿ ಎಂದು ಹೇಳುವ ಅಲ್ಲಮನ ಮಾತನ್ನೂ, ಹಿನ್ನೆಲೆ ಮತ್ತು ಸನ್ನಿವೇಶ ಪ್ರಭಾವಗಳನ್ನು ಗಮನಿಸದೇ ಒಪ್ಪಿಕೊಂಡುಬಿಟ್ಟರೆ ಬಹುದೊಡ್ಡ ಮಾನವಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಅಧ್ಯಯನವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಅಂಬೇಡ್ಕರ್ ರವರೂ ಕೂಡ ಪುರಾಣದ ಕತೆಗಳನ್ನು ಹೆಂಗಸರಿಗೆ ಮತ್ತು ಮಕ್ಕಳಿಗೆ ರಂಜಿಸುವಂತಹ ಮಾದರಿ ಎಂದು ತಿರಸ್ಕರಿಸು ವುದಕ್ಕೂ ಕೂಡ ಕಾರಣ ಇಲ್ಲದಿಲ್ಲ. ಇಂತಹ ಕತೆಗಳನ್ನು ಹೇಳುತ್ತಾ, ಅದನ್ನು ಬರಿಯ ಕಪೋಲಕಲ್ಪಿತ ಕತೆಗಳಷ್ಟೇ ಎನ್ನುವಂತೆ ಬದುಕಿನಿಂದ ದೂರ ಮಾಡುತ್ತಾ, ದೇವರು, ದೆವ್ವ, ಅನ್ಯಲೋಕಗಳ ಬಗ್ಗೆ ಭ್ರಾಮಕ ವರ್ತುಲಗಳನ್ನು ಸೃಷ್ಟಿಸುತ್ತಾ ಮೌಢ್ಯವನ್ನು ಬಲಪಡಿಸುತ್ತಾ ಅದರ ಮೂಲಕ ಶೋಷಣೆ ಮಾಡುತ್ತಿದ್ದದ್ದೇ ಮುಖ್ಯ ಕಾರಣವಾಗಿತ್ತು. ಆದರೆ ಅಷ್ಟಕ್ಕೇ ಈಗ ಪುರಾಣಗಳನ್ನು ಸರಿಸಿಬಿಡುವ ಹಾಗಿಲ್ಲ. ಯಾವುದೇ ಇತರ ವಿಚಾರಗಳು, ವೈಜ್ಞಾನಿಕ ವಿಷಯಗಳು ಬೀರುವ ಪ್ರಭಾವಗಳಿಗಿಂತ ಪೌರಾಣಿಕ ಕಾವ್ಯಗಳು ಮನುಷ್ಯನ ಮನಸ್ಥಿತಿಯನ್ನು ಗಟ್ಟಿಯಾಗಿಯೇ ಮೂಲದಲ್ಲಿಯೇ ಪ್ರಭಾವಿಸುತ್ತಿವೆ.

ಪ್ರಜಾಪ್ರಭುತ್ವದ ರಾಷ್ಟ್ರವಾಗಿ ನಮ್ಮ ಭಾರತ ಹೊಮ್ಮಿ ಕೆಲವೇ ವರ್ಷಗಳಾಗಿರುವುದು. ಆದರೆ ನಮ್ಮ ಜನರ ಮೂಲ ಮನೋಧೋರಣೆಯಲ್ಲಿ ರಾಜವೈಭವವೇ ಇನ್ನೂ ಬುಸುಗುಟ್ಟುತ್ತಿರುವುದು. ಒಂದು ಸುಂದರ ಮಗುವನ್ನು ನೋಡಿದಾಗ ರಾಜಕುಮಾರನೆಂದೋ, ರಾಜಕುಮಾರಿಯೆಂದೋ ಕರೆಯುವುದು. ಸೌಂದರ್ಯ, ಗಾಂಭೀರ್ಯಗಳೆಲ್ಲಾ ಇನ್ನೂ ರಾಜ ಕುಟುಂಬದವರ ಸುಪರ್ದಿನಲ್ಲೇ ಇರುವುದು ಅಥವಾ ಇರಿಸಿರುವುದು. ಫೇಸ್ಬುಕ್‌ಗಳಲ್ಲಿಯೂ ಕೂಡ ತಮ್ಮನ್ನು ತಾವು ಕಿಂಗ್, ಸಾಮ್ರಾಟ್, ಚಕ್ರವರ್ತಿ ಎಂದು ತಂದೆ ತಾಯಿ ಇಟ್ಟಿರುವ ಹೆಸರುಗಳ ಜೊತೆಗೆ ಸೇರಿಕೊಂಡು ಅಹಂಗೊಂದು ಹೆಮ್ಮೆಯ ಗರಿ ತೊಡಿಸುವುದು. ಫ್ಯೂಡಲ್ ಮನಸ್ಥಿತಿಗಳು ನಮ್ಮ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಹೋಗಿಯೇ ಇಲ್ಲ. ಸಣ್ಣ ಸಣ್ಣ ಏರಿಯಾಗಳಲ್ಲೂ ಬಹುದೊಡ್ಡ ಪಾಳೇಗಾರರನ್ನು ಕಾಣಬಹುದು. ಇದಕ್ಕೆ ಕಾರಣ ಇಲ್ಲದಿಲ್ಲ. ಚರಿತ್ರೆ ಎಂದರೆ ರಾಜರ ಕಥೆ, ಪುರಾಣವೆಂದರೆ ದೇವರ ಕಥೆಗಳನ್ನಾಗಿ ಮಾಡಿರುವ ಹಿರಿಯರ ಎಡವಟ್ಟುಗಳು ಇವು.

ಹಳತು ಹೊನ್ನಲ್ಲ


ಹಳತೆಲ್ಲಾ ಹೊನ್ನಲ್ಲ. ಹಾಗಂತ ಬರೀ ಹೊಲಸೂ ಅಲ್ಲ. ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮವನ್ನು ಇಂದಿನ ಕಾಲಘಟ್ಟದ ವೈಚಾರಿಕತೆಗೆ ಮತ್ತು ವಿಕಸಿತ ಪ್ರಸ್ತುತಕ್ಕೆ ಅಳವಡಿಸಿಕೊಳ್ಳುವುದಿರಲಿ, ಅನ್ವಯಿಸಿಕೊಳ್ಳಲೂ ಆಗದು.

ಪೆಣ್ಣಲ್ಲವೆ ನಮ್ಮನ್ನೆಲ್ಲಾ ಪಡೆದ ತಾಯಿ
ಪೆಣ್ಣಲ್ಲವೇ ನಮ್ಮನ್ನೆಲ್ಲಾ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

ಇದು ಸಂಚಿಯ ಹೊನ್ನಮ್ಮ ಹೆಣ್ಣನ್ನು ಬಣ್ಣಿಸುವ ಮತ್ತು ಅಭಿಮಾನದಿಂದ ಹೇಳುವ ರೀತಿ.

ಆದರೆ, ಅಂದಿನ ರಾಣಿಯ ಕೃಪೆಯಿಂದ ತನ್ನ ಬರವಣಿಗೆಗೆ ಪ್ರೋತ್ಸಾಹವನ್ನು ಕಂಡುಕೊಂಡ ಹೆಣ್ಣು ಹೊನ್ನಮ್ಮ. ಆಯಾ ಕಾಲದಲ್ಲಿ ಹೆಣ್ಣು ಮಕ್ಕಳು ತಂದೆ, ತಾಯಿ, ಗಂಡ, ಪರಪುರುಷರು, ಅತ್ತೆ, ಮಾವ, ಓರಗಿತ್ತಿ ಇವರಿಗೆಲ್ಲಾ ಹೇಗಿರಬೇಕೆಂದು ನೀತಿಪಾಠ ಮಾಡುವಳು. ಸಾಲದ್ದಕ್ಕೆ ಮಹಾಭಾರತ ಮತ್ತು ಮನುಧರ್ಮಶಾಸ್ತ್ರದಲ್ಲಿ ಹೇಳಿರುವಂತಹ ವಿಚಾರಗಳನ್ನೇ ತನ್ನ ಕೃತಿಯಲ್ಲಿ ಹೇಳಿದ್ದೇನೆ ಎಂದು ಪ್ರಾಮಾಣಿಕವಾಗಿ ಹೇಳಿಕೊಳ್ಳುವಳು.

ಮನುಧರ್ಮಶಾಸ್ತ್ರವನ್ನು ತಿರಸ್ಕರಿಸುವ ನಾವು ಮನುಧರ್ಮಶಾಸ್ತ್ರದಲ್ಲಿ ಹೇಳಿರುವಂತಹ ವಿಷಯಗಳನ್ನು



ತನ್ನ ಕೃತಿಯಲ್ಲಿ ಹೇಳಿರುವ ಹೊನ್ನಮ್ಮನನ್ನು ತಿರಸ್ಕರಿಸುವ ಅಗತ್ಯವಿಲ್ಲ. ಏಕೆಂದರೆ, ಹೊನ್ನಮ್ಮನ ಕೃತಿಯನ್ನು ಅಭ್ಯಸಿಸಿದರೆ, ಅಂದಿನ ಕಾಲಘಟ್ಟದಲ್ಲಿ ಮನುಧರ್ಮಶಾಸ್ತ್ರವು ಎಷ್ಟರ ಮಟ್ಟಿಗಿನ ಪ್ರಭಾವವನ್ನು ಬೀರಿತ್ತು, ಅದು ಹೊನ್ನಮ್ಮನಂತಹ ಮಹಿಳೆಯನ್ನೂ ತನ್ನ ಅಧೀನಕ್ಕೆ ತೆಗೆದುಕೊಂಡಿತ್ತು ಎಂಬ ಸಾಮಾಜಿಕ ಪರಿಸ್ಥಿತಿಯ ಅರಿವಾಗುತ್ತದೆ. ಹೊನ್ನಮ್ಮ ಮನುಧರ್ಮಶಾಸ್ತ್ರವನ್ನು ಮಾಡಿರುವವಳಲ್ಲ, ಆದರೆ ಒಪ್ಪಿರುವವಳು. ಆಕೆಯ ಒಪ್ಪುವಿಕೆಗೆ ಕಾರಣಗಳು, ಪ್ರೇರಣೆಗಳು ನಮ್ಮ ಅಧ್ಯಯನದ ವಸ್ತುಗಳಾಗುತ್ತವೆ.

ಹೊನ್ನಮ್ಮ ಹೆಣ್ಣನ್ನು ವಸ್ತುವನ್ನಾಗಿ ಬಳಸಿಕೊಳ್ಳುವ, ಪುರುಷಾಧಿಕ್ಯದ ನಿಯಂತ್ರಣದಲ್ಲಿರುವಂತಹ ಆ ಕಾಲಘಟ್ಟದಲ್ಲಿ ಹೆಣ್ತನದ ಮಹತ್ವವನ್ನು ಹೇಳುವುದನ್ನು ಮರೆಯುವುದಿಲ್ಲ. ಪಾಪ, ಆಕೆಗೆ ಅಷ್ಟೇ ಆಕೆಗಿದ್ದ ಅಭಿವ್ಯಕ್ತಿಯ ಧೈರ್ಯ.

ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು
ಪೆಣ್ಣಿಂದ ಭೃಗು ಪೆರ್ಚಿದನು
ಹೆಣ್ಣಿಂದ ಜನಕರಾಯನು ಜಸವಡೆದನು
ಪೆಣ್ಣ ನಿಂದಿಸಲೇಕೆ ಪೆರರು

ಪಾರ್ವತಿಯಂತಹ ಹೆಣ್ಣನ್ನು ಹೆತ್ತ ಹಿಮವಂತನು ಪುರಾಣದಲ್ಲಿ ಸ್ಥಾನ ಪಡೆದನು, ಸೀತೆಯ ತಂದೆಯಾಗಿ ಜನಕನು ಕೀರ್ತಿಯನ್ನು ಪಡೆದನು ಎಂದು ಹೇಳುವ ಹೊನ್ನಮ್ಮ, ರಾಮನ ಹೆಂಡತಿಯಾದ್ದರಿಂದ ಸೀತೆ ಸ್ಥಾನ ಎಂದು ಹೇಳುವುದಿಲ್ಲ. ಅದನ್ನು ರಾಮನಾಭಿಮಾನಿಗಳು ಹೇಳುವರು. ತನ್ನ ಹೆಣ್ತನದ ಗುರುತನ್ನು ಎತ್ತಲು ಜನಕನ, ಹಿಮವಂತನ ಹೆಸರುಗಳನ್ನು ಎತ್ತುತ್ತಾ ತಾನು ಗಂಡನಿಗೆ ವಿಧೇಯಳಾಗೇ ಉಳಿಯುವಳು.

ಮುಂದುವರಿದಂತೆ, ಓದುವ ಮಕ್ಕಳಿಗೆ ಕಾಲಕಾಲಕ್ಕೆ ಸ್ನಾನ ಊಟಗಳನ್ನು ಸಿದ್ಧಪಡಿಸಿ, ಪಾಠ ಕಲಿಸುವ ಉಪಾಧ್ಯಾಯರು ಮಕ್ಕಳನ್ನು ಶಿಕ್ಷಿಸಿದರೆ, ಅದನ್ನು ಆಕ್ಷೇಪಿಸದೇ ಅವರನ್ನು ಅನುಮೋದಿಸಬೇಕು. ಹೊಟ್ಟೆಯಲ್ಲಿ ಹುಟ್ಟಿದ ಮಗನಾದರೂ ವಯಸ್ಸಿಗೆ ಬಂದಾಗ ಅವನು ಹೊಸ ಹರೆಯದ ಗಂಡಸು ಎಂದು ಭಾವಿಸಿ ಅವನನ್ನು ಪ್ರೀತಿಯಿಂದ ದೃಷ್ಟಿಸಿ ನೋಡಬಾರದು. ಅವನ ಮೈಕಟ್ಟನ್ನು ಒಳಪುಗಳನ್ನು ಪತಿವ್ರತೆಯರು ವರ್ಣಿಸಬಾರದು. ಗುರು, ಹಿರಿಯ, ತಂದೆ, ಸೋದರ, ಮಗ, ರಕ್ಷಿಸುವ ರಾಜ, – ಯಾರಾದರೇನು? ತನಗೆ ಹನ್ನೆರಡು ವರ್ಷವಾದ ತರುವಾಯ ಅವರಲ್ಲಿ ಯಾರೊಡನೆಯೂ ಸೇರದೇ ದೂರವಿರಬೇಕು. ಹಸಿವಿನಿಂದ ಬಳಲಿ ಭಿಕ್ಷುಕನು (ಆಗಂತುಕನು) ಬೇಡಿದಾಗ ಅದು ವೇಳೆಯಲ್ಲ ಎಂದು ಕೂಗಾಡದೇ ಕೋಪದ ನುಡಿಗಳಿಂದ ಅವನಿಗೆ ನೋವುಂಟು ಮಾಡದೇ ಇದ್ದುದ್ದನ್ನು ಒಳ್ಳೆಯ ಮಾತಿನಿಂದ ನೀಡಬೇಕು.



Chikka Deva Raja Wodeyar

ಹೀಗೆಲ್ಲಾ ಹೇಳುವ ಹೊನ್ನಮ್ಮ ತನ್ನ ರಾಜನಿಷ್ಠೆಯನ್ನು ಉಳಿಸಿಕೊಂಡೇ; ಸಮಾಜದಲ್ಲಿ ಒಪ್ಪಿತ ರೀತಿಗಳನ್ನು ಹೇಳುತ್ತಲೇ, ಅವಗಣನೆಗೆ ಒಳಗಾಗಬಹುದಾದ ತನ್ನ ಹೆಣ್ತನದ ಸ್ಥಾನವನ್ನೂ ಕೂಡ ಕೊಂಡಾಡಿಕೊಂಡು ಅಭಿಮಾನ ಪ್ರದರ್ಶನ ಮಾಡುತ್ತಾಳೆ.

ಇನ್ನು ಅದೇ ಚಿಕ್ಕದೇವರಾಯನ ಮಂತ್ರಿ ಮತ್ತು ಕವಿಯಾಗಿದ್ದ ತಿರುಮಲಾಚಾರ್ಯರು ಚಿಕ್ಕದೇವರಾಯ ವಂಶಾವಳಿ, ಚಿಕ್ಕದೇವರಾಯ ವಿಜಯವೆಂಬೆಲ್ಲಾ ಕೃತಿಗಳನ್ನು ರಚಿಸಿ ಅದರಲ್ಲಿ ಇನ್ನಿಲ್ಲದಿರುವಂತೆ ಅಭೂತಪೂರ್ವವಾಗಿ ಚಿಕ್ಕದೇವರಾಯನನ್ನು ಕೊಂಡಾಡುತ್ತಾನೆ. ಕೃಷ್ಣನ ಅಪರಾವತಾರ ಎಂದು ವರ್ಣಿಸುತ್ತಾನೆ. ಸುಮಾರು ಒಂದು ಶತಮಾನದಷ್ಟು ವಿಸ್ತಾರವಾದ ಚಿಕ್ಕದೇವರಾಯ ವಂಶಾವಳಿ ಎಂಬ ಕೃತಿಯಲ್ಲಿ ದಳವಾಯಿಯೊಬ್ಬನಿಂದ ಇಮ್ಮಡಿ ರಾಜರಸನಿಗೆ ಆದ ವಿಷಪ್ರಾಶನ, ಕಂಠೀರವ ನರಸರಾಜ ಆ ದಳವಾಯಿಯ ಕೊಲೆ ಮಾಡಿದ್ದು, ದೊಡ್ಡದೇವರಾಜ ಮತ್ತು ಚಿಕ್ಕದೇವರಾಜ ಹುಂಗಳದಲ್ಲಿ ಬಂಧನದಲ್ಲಿದ್ದೆಲ್ಲಾ ಉಲ್ಲೇಖವಾಗುವುದಿಲ್ಲ. ಏಕೆಂದರೆ ಅವು ಚಿಕ್ಕದೇವರಾಯನ ಘನತೆಯನ್ನೇನೂ ಹೆಚ್ಚಿಸುವುದಲ್ಲ.

ಜಂಗಮ ಕ್ರಾಂತಿ

1686ರಲ್ಲಿ ಚಿಕ್ಕದೇವರಾಜ ಒಡೆಯರ್ ತನಗೇನೋ ಮೈಸೂರಿನ ಸಾರ್ವಭೌಮ ಪ್ರಭು ಎಂಬ ಸ್ಥಿರಪಟ್ಟವನ್ನೇನೋ ಗಟ್ಟಿಸಿಕೊಂಡ. ಆದರೆ ರಾಜ್ಯಬೊಕ್ಕಸವನ್ನು ಸಿರಿವಂತವಾಗಿಸುವ ಭರದಲ್ಲಿ, ಖಜಾನೆಯನ್ನು ತುಂಬಿಸಿ ಇತರ ರಾಜರುಗಳಿಗೆ ಸವಾಲೆಸೆಯುವಂತೆ ರಾಜ್ಯವನ್ನು ಅಭಿವೃದ್ಧಿಪಡಿಸುವ ದಿಕ್ಕಿನಲ್ಲಿ ಅವನ ಕಂದಾಯದ ಅಥವಾ ತೆರಿಗೆ ಕಟ್ಟಿಸಿಕೊಳ್ಳುವ ದಾಹ ಅತ್ಯಧಿಕವಾಗಿದ್ದು ಅದು ಕ್ಷೋಭೆಯನ್ನೇ ಉಂಟುಮಾಡಿತ್ತು. ಯಾರೊಬ್ಬ ಪ್ರಜೆಯೂ ತನ್ನ ಸ್ವಾತಂತ್ರ್ಯದಲ್ಲಿ ತನ್ನ ಆಸ್ತಿಯನ್ನು ವೃದ್ಧಿಸಿಕೊಳ್ಳದಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಅಷ್ಟೇ ಅಲ್ಲದೇ ತೆರಿಗೆಯ ಭಾರಕ್ಕೆ ಕುಸಿದ ರೈತರೂ ಕಂಗಾಲಾದರು. ಎತ್ತಿಗೊಂದು ತೆರಿಗೆ ಬಾಲಕ್ಕೊಂದು ತೆರಿಗೆ ಎನ್ನುವಂತಾದಾಗ ಅವರ ನೆರವಿಗೆ ಬಂದವರು ಕಂತೆ ಭಿಕ್ಷೆ ಪಡೆಯುತ್ತಾ ಬಂದಂತಹ ಜಂಗಮರು.

ಕೂಲಿ ಮಠ, ದೇಗುಲ ಮಠ, ಜಂಗಮ ಮಠಗಳಂತಹ ಎಷ್ಟೋ ವಿರಕ್ತಮಠಗಳ ಜಂಗಮರು ರಾಜನ ಎದುರು ಹಾಕಿಕೊಳ್ಳದ ರೈತರ ದನಿಯಾಗಲು ನಿರ್ಧರಿಸಿದರು.


ಈ ಜಂಗಮರ ಬೆಂಬಲ ಮತ್ತು ತಮ್ಮದೇ ಕಷ್ಟಗಳ ಒತ್ತಡದಿಂದ ರೈತ ಚಳವಳಿಯಾಯಿತು. 1684ರಲ್ಲಿ ನಂಜನಗೂಡು ತಾಲ್ಲೂಕಿನ ಹದಿನಾರು ಎಂಬ ಹಳ್ಳಿಯಲ್ಲಿ ರೈತರು ತಮ್ಮ ಮೇಲೆ ಹೇರಿದ ತೆರಿಗೆಗಳ ವಿರುದ್ಧ ಪ್ರತಿಭಟಿಸಿದರು. ಅದರ ಸಂಕೇತವಾಗಿ ಹಳ್ಳಿಯ ಚೌಕಗಳಲ್ಲಿ ಅರಳೀಮರಗಳಿಗೆ ತಮ್ಮ ನೇಗಿಲುಗಳನ್ನು ತಲೆಕೆಳಗಾಗಿ ನೇತುಬಿಟ್ಟು ತಮ್ಮ ಪ್ರತಿಭಟನೆ ತೋರಿದರು.

ಈ ತೆರಿಗೆ ವಿಧಿಸುವ ವಿಚಾರದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದ ವಿಶಾಲಾಕ್ಷ ಪಂಡಿತನ ದೃಷ್ಟಿಯು ರೈತರಿಂದ ಜಂಗಮರ ಕಡೆಗೂ ಹೊರಳಿತು. ರೈತರ ಪರವಾಗಿ ದನಿ ಎತ್ತತೊಡಗಿದ್ದ ಜಂಗಮರಿಗೂ ಧಾರ್ಮಿಕ ತೆರಿಗೆ ವಿಧಿಸಲಾಯಿತು. ಇಂಥಾ ವಿಪರೀತಕ್ಕೆ ಹೋಗುತ್ತಿರುವುದನ್ನು ಕಂಡ ಜಂಗಮರು ಮತ್ತು ರೈತರು ಒಗ್ಗಟ್ಟಿನಿಂದ ಚಿಕ್ಕ ದೇವರಾಜನನ್ನು ಕಂಡು ತಮ್ಮ ಸಮಸ್ಯೆಯನ್ನು ವಿವರಿಸಿ ಅಹವಾಲನ್ನು ಒಪ್ಪಿಸಲು ಯತ್ನಿಸುವಾಗಲೇ ಅವರನ್ನು ಮಾತುಕತೆಗೆಂದೇ ಕರೆಯಿಸಿಕೊಂಡು ಹೆಚ್ಚೂ ಕಡಿಮೆ 400 ರಿಂದ 1000ದವರೆಗೂ ಜಂಗಮರನ್ನು ಮತ್ತು ಅವರ ಸಂಗಡವಿದ್ದ ಪ್ರತಿಭಟನಾ ನಿರತ ರೈತರನ್ನು ಕೊಲ್ಲಿಸಲಾಯಿತು. ತಮ್ಮ ಮೇಲಾಗುತ್ತಿದ್ದ ಶೋಷಣೆಯನ್ನು ಪ್ರತಿಭಟಿಸಲು ಮುಂದಾದ ನಿಶಸ್ತ್ರ ಮತ್ತು ಅಮಾಯಕ ಜನರ ಕಗ್ಗೊಲೆಯ ಸುಳಿವು ತಿರುಮಲಾಚಾರ್ಯನೆಂಬ ಆಸ್ಥಾನದ ವಿದ್ವಾಂಸ ಬರೆಯುವ ಚಿಕ್ಕದೇವರಾಯ ವಿಜಯದಲ್ಲಾಗಲಿ, ಚಿಕ್ಕದೇವರಾಯನ ವಂಶಾವಳಿಯಲ್ಲಾಗಲಿ, ಅರಮನೆಯ ರಾಣಿವಾಸದಲ್ಲಿ ಊಳಿಗದವಳಾಗಿ ಜೀವಿಸಿದ ಸಂಚಿಯ ಹೊನ್ನಮ್ಮ ಬರೆಯುವ ಹದಿಬದೆಯ ಧರ್ಮದಲ್ಲಾಗಲಿ ಸಿಗುವುದಿಲ್ಲ. ಆಗ ರಾಜನ ಆಶ್ರಯದಲ್ಲಿ, ಈಗ ಸರ್ಕಾರದ ಆಶ್ರಯದಲ್ಲಿ ಕೂತು ಬರೆಯುವ ಸಾಹಿತಿಗಳು ರಾಜನಿಂದಾಗಲಿ, ಸರ್ಕಾರದಿಂದಾಗಲಿ ಜನತೆಗೆ ಆಗುವ ದ್ರೋಹವನ್ನು, ಕೇಡನ್ನು ಬರೆಯುವುದಿಲ್ಲ. ಇನ್ನೂ ವಿಪರೀತವಾಗಿ ಹೋಗುವವರು ಅದನ್ನು ಸಮರ್ಥಿಸಲೂ ಹೇಸುವುದಿಲ್ಲ.

ಏನೇ ಆಗಲಿ, 1984ರಲ್ಲಿ ನಡೆದ ಜಂಗಮ ಚಳವಳಿ ನಮ್ಮ ಮೈಸೂರು ಭಾಗದ ಬಹಳ ಮಹತ್ತರವಾದ ಕ್ರಾಂತಿ. ಒಕ್ಕಲಿಗರೂ ಮತ್ತು ಲಿಂಗಾಯತರೂ ಒಟ್ಟಾಗಿ ಪ್ರಭುತ್ವವನ್ನು ಎದುರಿಸಿದ, ಶೋಷಣೆಗೆ ರಕ್ತ ಹರಿಸಿದ ಬಹುಮುಖ್ಯವಾದ ವಿಷಯ ಮಾಸಿರುವುದು ಮತ್ತು ಬದಲಾಗಿ ಪ್ರಭುತ್ವಕ್ಕೆ ತಲೆಬಾಗಿಕೊಂಡೇ ಓಲೈಸಲು ಯತ್ನಿಸುವುದು ಬಹಳ ಖೇದಕರವಾದ ವಿಷಯ.

ಪುರಾಣಗಳೂ ಮತ್ತು ಇತಿಹಾಸಗಳೂ ಕೂಡಾ ಇದೇ ರೀತಿಯಲ್ಲಿ ಅವರವರ ನೆಲೆಗಟ್ಟುಗಳಿಂದ ರಚಿಸುವುದಷ್ಟೇ ಅಲ್ಲದೇ, ತಮ್ಮ ಒಲವು ನಿಲುವುಗಳನ್ನು ಗಾಢಗೊಳಿಸುತ್ತಾರೆ. ಅದನ್ನು ಯಥಾವತ್ತಾಗಿ ಗ್ರಹಿಸಿ, ಅದಷ್ಟೇ ಸತ್ಯ ಎಂಬವನು ಮೂರ್ಖನಾಗುತ್ತಾನೆ. ■

ಬಸದಿ ಮತ್ತು ವಿಹಾರಗಳನ್ನು ಮೊದಲು ಹಿಂದಿರುಗಿಸಲಿ



ಟಿಪ್ಪು ಹಿಂದೂ ದೇವಾಲಯ ನಾಶ ಮಾಡಿದ ಎಂದು ಆರೋಪಿಸಲಾಗುತ್ತದೆ. ಆದರೆ ವೈದಿಕರು ಸಾವಿರಾರು ಬೌದ್ಧ ವಿಹಾರ ಹಾಗೂ ಜೈನ ಬಸದಿಗಳನ್ನು ನಾಶ ಮಾಡಿದರು ಅಥವಾ ಅವುಗಳನ್ನು ಬಲಾತ್ಕಾರದಿಂದ ವೈದಿಕ ದೇವಸ್ಥಾನವಾಗಿ ಪರಿವರ್ತಿಸಿದರು. ಶಂಕರಾಚಾರ್ಯರ ಕಾಲದಲ್ಲಿಯೇ ಸಾವಿರಾರು ಬೌದ್ಧ ವಿಹಾರಗಳು ಆಂಧ್ರದ ನಾಗಾರ್ಜುನಕೊಂಡದಲ್ಲಿ ನಾಶವಾದವು ಹಾಗೂ ಲಕ್ಷಾಂತರ ಜನ ಬೌದ್ಧರು ಒಂದೋ ಕೊಲೆಯಾದರು ಅಥವಾ ಹಿಂದೂವಾಗಿ ಬಲಾತ್ಕಾರದ ಮತಾಂತರಕ್ಕೆ ಒಳಗಾದರು. ಟಿಪ್ಪು ಬಗ್ಗೆ ಹುಯಿಲೆಬ್ಬಿಸುವಾಗ ಇವುಗಳ ಬಗ್ಗೆ ಯಾಕೆ ಯಾರೂ ಮಾತನಾಡುತ್ತಿಲ್ಲ? ಇವುಗಳ ಲೆಕ್ಕ ಮಾಡಿದರೆ ಮುಸ್ಲಿಂ ರಾಜರು ಭಾರತದಲ್ಲಿ ನಾಶಗೊಳಿಸಿದ ಹಿಂದೂ ದೇಗುಲಗಳಿಗಿಂತ ಹಾಗೂ ಮಾಡಿದ ಮತಾಂತರಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಬೌದ್ಧ ವಿಹಾರಗಳನ್ನು ಹಿಂದೂಗಳು ನಾಶ ಮಾಡಿದ್ದಾರೆ ಹಾಗೂ ಎಷ್ಟೋ ಪಾಲು ಹೆಚ್ಚು ಬೌದ್ಧರನ್ನು ಹಿಂದೂಗಳಾಗಿ ಮತಾಂತರ ಮಾಡಿದ್ದಾರೆ. ಬೌದ್ಧ ಧರ್ಮ ಹಿಂದೂ ಧರ್ಮದ ಅಂಗ ಎಂದು ಹೇಳುವ ಸಂಘಿಗಳು ಈ ಬೌದ್ಧ ವಿಹಾರಗಳ ನಾಶ ಹಾಗೂ ಬೌದ್ಧರ ಬಲಾತ್ಕಾರದ ಮತಾಂತರದ ಬಗ್ಗೆ ಯಾಕೆ ಬೊಬ್ಬೆ ಹಾಕಿ ಬೀದಿ ನಾಟಕ ಆಡುತ್ತಿಲ್ಲ? ಬೌದ್ಧ ವಿಹಾರಗಳನ್ನು ಮರಳಿ ಬೌದ್ಧರಿಗೆ ಯಾಕೆ ಕೊಡಬಾರದು? ಉದಾಹರಣೆಗೆ ಮಂಗಳೂರಿನ ಕದ್ರಿ ಮಂಜುಶ್ರೀ (ಮಂಜುನಾಥ) ದೇವಳ ಬೌದ್ಧ ವಿಹಾರ ಆಗಿದ್ದು ಅದು ಬೌದ್ಧರಿಗೆ ಮರಳಿ ಹೋಗಬೇಕು. ಅದೇ ಪ್ರಕಾರ ಉಡುಪಿಯಲ್ಲಿ ಆದಿನಾಥ ಮತ್ತು ಚಂದ್ರನಾಥ ಎಂಬ ಜೈನ ಬಸದಿಗಳನ್ನು ಅನಂತೇಶ್ವರ ಮತ್ತು ಚಂದ್ರಮೌಳೇಶ್ವರ ಎಂಬ ವೈದಿಕ ದೇವಳಗಳಾಗಿ ಬಲಾತ್ಕಾರದಿಂದ ಪರಿವರ್ತಿಸಲಾಗಿದೆ. ಇವನ್ನೂ ಮರಳಿ ಜೈನರಿಗೆ ಕೊಡಬೇಕು. ಅನಂತರ ಟಿಪ್ಪು ನಾಶ ಮಾಡಿರುವ ಹಿಂದೂ ದೇವಳಗಳ ಬಗ್ಗೆ ಮಾತನಾಡಲು ಸಂಘಿ ನೇತಾರರಿಗೆ ನೈತಿಕ ಅಧಿಕಾರ ಬರುತ್ತದೆ.


- ಏಕಲವ್ಯ ಮುಂಡಾಲ, ಮಂಗಳೂರು



ಟಿಪ್ಪು ಅಷ್ಟೆಲ್ಲ ಜನರನ್ನು ಕೊಲ್ಲಲು ಹೇಗೆ ಸಾಧ್ಯವಿತ್ತು?

ನಮ್ಮ ಪುರಾಣಕರ್ತರು ಯಾವಾಗಲೂ ಲಕ್ಷ ವರ್ಷ ಕೋಟಿ ವರ್ಷ ಎಂದೇ ಮಾತನಾಡುವುದು. ರಾಮಾಯಣ ಒಂದು ಕೋಟಿ ವರ್ಷ ಹಿಂದೆ ಘಟಿಸಿತಂತೆ- ಹಾಗೂ ಮಹಾಭಾರತ ಎಂಟು ಲಕ್ಷ ವರ್ಷ ಹಿಂದೆ ನಡೆಯಿತಂತೆ, ಆಗ ಮಾನವ ಜಾತಿಯೇ ಭೂಮಿ ಮೇಲೆ ಇರದಿದ್ದರೇನಂತೆ! ಆಗೆಲ್ಲಾ ಸಾಮಾನ್ಯ ಜನರು ಐನೂರು ವರ್ಷ ಜೀವಿಸುತ್ತಿದ್ದರಂತೆ, ಋಷಿಮುನಿಗಳು ಒಂದು ಸಾವಿರ ವರ್ಷ ತಪಸ್ಸು ಮಾಡುತ್ತಿದ್ದರಂತೆ. ಪುರಾಣದ ಇಂತಹ ಮಹಾ ಸುಳ್ಳುಗಳನ್ನು ನಂಬುವ ದಡ್ಡರು ಈಗಲೂ ಇದ್ದಾರೆ. ಅದರಂತೆ ಬ್ರಿಟಿಷ್ ಇತಿಹಾಸದ ವಿಷಯದಲ್ಲೂ ಇಂತಹ ಭಾರಿ ಸುಳ್ಳುಗಳ ಉರುಳಾಟ ನಡೆದಿದೆ ಹಾಗೂ ಅದನ್ನು ಯಾರೂ ಪೋಸ್ಟ್-ಮಾರ್ಟಮ್ ಮಾಡುವ ಗೋಜಿಗೆ ಹೋಗಿಲ್ಲ. ಉದಾಹರಣೆಗೆ ಟಿಪ್ಪು ಸುಲ್ತಾನ್ ಮಂಗಳೂರಿನಲ್ಲಿಯ ಎಂಬತ್ತು ಸಾವಿರ ಕ್ರೈಸ್ತರನ್ನು ಬಂಧಿಸಿ 350 ಕಿಮಿ ದೂರದ ಶ್ರೀರಂಗಪಟ್ಟಣಕ್ಕೆ ಕಾಲುನಡಿಗೆಯಲ್ಲಿ ಕರೆದುಕೊಂಡು ಹೋದನಂತೆ. ನಿಜವಾಗಿ ಆಗ ಮಂಗಳೂರು ನಗರದ ಜನಸಂಖ್ಯೆಯೇ ಐವತ್ತು ಸಾವಿರಕ್ಕಿಂತಲೂ ಕಡಿಮೆಯಿತ್ತು, ಇನ್ನೂ ಜಿಲ್ಲೆಯ ಒಳಪ್ರದೇಶಕ್ಕೆ ಹೋಗಿ ಹಿಂದೂಗಳಂತೆಯೇ ಬಟ್ಟೆ ಧರಿಸುವ ಕುಂಕುಮವಿಟ್ಟು ಹೂ ಮುಡಿಯುವ ಕ್ರೈಸ್ತರನ್ನು ಪತ್ತೆ ಹಚ್ಚಿ ಬಂಧಿಸಿ ಕರೆದೊಯ್ಯುವುದು ಸರಿಯಾದ ರಸ್ತೆಯಿಲ್ಲದ ಆ ಕಾಲದಲ್ಲಿ ಸಾಧ್ಯವಿತ್ತೆ?

ಆ ಕಾಲದಲ್ಲಿ ತುಳುನಾಡಿನಲ್ಲಿ ಐದು ಲಕ್ಷ ಕೊಂಕಣಿ ಭಾಷಿಕರು ಇದ್ದರೆಂದು ಇನ್ಫೋಸಿಸ್‌ನ ಮೋಹನದಾಸ್ ಪೈ ಎಂಬ ಭಯಂಕರ ಇತಿಹಾಸ ಸಂಶೋಧಕ ಹೇಳಿದ್ದಾನೆ. 500 ವರ್ಷಗಳ ಹಿಂದೆ ಪೋರ್ಚುಗೀಜರು ಗೋವಾ ಆಕ್ರಮಿಕೊಂಡಾಗ ಅಲ್ಲಿಯ ಒಟ್ಟು ಜನಸಂಖ್ಯೆ ಇದ್ದಿದ್ದು ಐದು ಲಕ್ಷಕ್ಕಿಂತಲೂ ಕಡಿಮೆ. ಹಾಗಾದರೆ ಪೋರ್ಚುಗೀಜರ ಅಳ್ವಿಕೆಯ ಸಮಯದಲ್ಲಿ ಗೋವೆಯ ಸಂಪೂರ್ಣ ಕೊಂಕಣಿ ಭಾಷಿಕರು ತುಳುನಾಡಿಗೆ ವಲಸೆ ಬಂದರೆ? ಗೋವಾ ಪ್ರದೇಶ ಸಂಪೂರ್ಣ ಮಾನವರಹಿತ ಆಯಿತೆ? ಯಾಕೆಂದರೆ 330 ವರ್ಷಗಳ ಹಿಂದೆ ಅಂದರೆ ಟಿಪ್ಪು ಸಮಯದಲ್ಲಿ ಕೇವಲ ತುಳುನಾಡು ಒಂದರಲ್ಲಿಯೇ ಐದು ಲಕ್ಷ ಕೊಂಕಣಿ ಭಾಷಿಕರು ಇದ್ದರೆ ಆಗ ತುಳುವರು ಕೊಂಕಣಿಗಳಿಗಿಂತ ಕಡಿಮೆ ಸಂಖ್ಯೆಯಲ್ಲಿ ಇದ್ದರೆಂದಾಯಿತು. ಯಾಕೆಂದರೆ ಟಿಪ್ಪು ಸಮಯದಲ್ಲಿ ತುಳುನಾಡಿನ ಒಟ್ಟಾರೆ ಜನಸಂಖ್ಯೆ ಎಂಟು ಲಕ್ಷ ಮೀರುತ್ತಿರಲಿಲ್ಲ.



ನಿಜ ಸಂಗತಿ ಏನೆಂದರೆ ಯಾವುದೇ ಸಮಯದಲ್ಲಿಯೂ ತುಳುನಾಡಿನಲ್ಲಿ ಕೊಂಕಣಿ ಭಾಷಿಕರ ಸಂಖ್ಯೆ ಇಲ್ಲಿಯ ಒಟ್ಟು ಜನಸಂಖ್ಯೆಯ ಶೇ.10 ದಾಟಲಿಲ್ಲ. ಟಿಪ್ಪು ಕಾಲದಲ್ಲಿ ಮಂಗಳೂರಿನ ಒಟ್ಟು ಜನಸಂಖ್ಯೆಯಾದ ಐವತ್ತು ಸಾವಿರದಲ್ಲಿ ಕೊಂಕಣಿ ಕ್ರೈಸ್ತರು ಹೆಚ್ಚೆಂದರೆ ಹತ್ತು ಸಾವಿರ ಇದ್ದಿರಬಹುದು. ಅದರಲ್ಲಿ ಟಿಪ್ಪುವಿನ ಸೈನಿಕರು ಹೆಚ್ಚೆಂದರೆ ಐದು ಸಾವಿರ ಕ್ರೈಸ್ತರನ್ನು ಬಂಧಿಸಲು ಸಾಧ್ಯವಾಗಿರಬಹುದು ಅಷ್ಟೇ. ಆದರೆ ಟಿಪ್ಪುವಿನ ಮೇಲೆ ಎಲ್ಲರಿಗೂ ದ್ವೇಷ ಹುಟ್ಟಿಸಲು ಬ್ರಿಟಿಷ್ ಇತಿಹಾಸಕಾರರು ಈ ಐದು ಸಾವಿರವನ್ನು ಎಂಬತ್ತು ಸಾವಿರ ಎಂದು ಉತ್ಪ್ರೇಕ್ಷಿಸಿ ಬರೆದಿರಬಹುದು.

ಟಿಪ್ಪು ಯುದ್ಧದಲ್ಲಿ ಸತ್ತ ಮೇಲೆ ಅವನ ಬಂಧನದಿಂದ ಬಿಡುಗಡೆಯಾಗಿ ವಾಪಸು ಬಂದ ಕ್ರೈಸ್ತರಿಗೆ ಬ್ರಿಟಿಷರು ಮಂಗಳೂರು ನಗರ ಹಾಗೂ ಸುತ್ತಮುತ್ತ ಹಿಂದೂ ಬಂಟರು ಮತ್ತು ಜೈನರು ವಂಶ ಪರಂಪರೆಯಾಗಿ ಹೊಂದಿದ್ದ ಭೂಮಿಯನ್ನು ಬಲಾತ್ಕಾರದಿಂದ ವಶಪಡಿಸಿಕೊಂಡು ಅದನ್ನು ಕ್ರೈಸ್ತರಿಗೆ ಉಚಿತವಾಗಿ ಹಂಚಿರುವ ಸಂಗತಿ ಇತಿಹಾಸಕಾರರು ಮರೆತ್ತಿದ್ದರೂ ಈ ಸಂತ್ರಸ್ತ ಜಾತಿಗಳ ಕುಟುಂಬಿಕರೊಳಗೆ ಬ್ರಿಟಿಷರ ಈ ಮಹಾದುಷ್ಟ ಕೃತ್ಯದ ಮಾಹಿತಿ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿದೆ. ಆಗ ಬ್ರಿ[...] ದಬ್ಬಾಳಿಕೆಯಿಂದಾಗಿ ಮಂಗಳೂರಿನಲ್ಲಿದ್ದ ಬಂಟರು [...] ಜೈನರು ತಮ್ಮ ಆಸ್ತಿ ಕಳೆದುಕೊಂಡು ನಿರ್ಗತಿಕರಾಗಿ ಜ[...] ಒಳನಾಡಿಗೆ ವಲಸೆ ಹೋದರು. ಇವರ ಆಸ್ತಿ ಬ್ರಿಟಿ[...] ಉಚಿತವಾಗಿ ಪಡೆದ ಕ್ರೈಸ್ತರು ಧನಿಕರಾದರು. ಇಂ[...] ಮಂಗಳೂರು ನಗರದಲ್ಲಿ ದೊಡ್ಡ ದೊಡ್ಡ [...] ಹೊಂದಿರುವವರಲ್ಲಿ ಕ್ರೈಸ್ತರೇ ಅಧಿಕ. ಇವೆಲ್ಲಾ ಆಸ್ತಿ ಮ[...] ಜೈನರು ಮತ್ತು ಬಂಟರದು. ಮಂಗಳೂರು [...] ಈಗಲೂ ಇರುವ 'ಕುಡ್ಲಾ' ಎಂಬ ತುಳು ಹೆಸರು [...] ಬಂಟರ ಮನೆತನದ ಖಾಸಗಿ ಹೆಸರೇ ಆಗಿದೆ. [...] ಹೆಚ್ಚು ಚರ್ಚೆಯಾಗದ ಮಂಗಳೂರಿನ ಬ್ರಿಟಿಷ್ ಇತಿ[...] ಪುಟಗಳಲ್ಲಿ ಅಡಗಿರುವ ಕರಾಳ ಸತ್ಯ ಟಿಪ್[...] ದ್ವೇಷಿಸುವ ಭರದಲ್ಲಿ ಬ್ರಿಟಿಷರು ಮಂಗ[...] ಜೈನ-ಬಂಟರಿಗೆ ಮಾಡಿದ್ದ ಈ ಘ[...] ಅನ್ಯಾಯವನ್ನು ಜನರು ಮರೆತಿದ್ದಾರೆ.


- ಗಿರೀಶ್ ಟಿ ಶೆಟ್ಟಿ, [...]

ಬಲಿಯಾಗುವುದು ಯೋ[...]

ಈಗ ಮಾತುಮಾತಿಗೆ [...] ಮಿಲಿಟರಿಯ ವೀರ ಯೋಧ[...] ಪ್ರತಿಯೊಂದು ವಿಷಯಕ್ಕೂ ಎಳೆದು [...] ತಾವೇನೋ ದೇಶದ ಬಗ್ಗೆ ಭಯಂಕರ [...] ಉಳ್ಳವರು ಎಂದು ನಾಟಕ ಆಡುವುದು [...] ಪರಿವಾರದವರಿಗೆ ಅಭ್ಯಾಸವಾಗಿಹೋಗಿದೆ. ಜರ್ಮನಿ[...] 1920-30 ರ ದಶಕದಲ್ಲಿಯೂ ಹಿಟ್ಲರನ ನಾಜೀ [...] ದೇಶಭಕ್ತಿಯ ನಾಟಕ ಆಡಿ ಆಡಿ ದೇ[...] ಮಿಲಿಟರಿಯವರನ್ನು ಹೊಗಳಿ ಹೊಗಳಿ ಅಟ್ಟಕ್ಕೇರಿಸಿ [...] ಹಿಟ್ಲರ್ ತನ್ನ ಸರ್ವಾಧಿಕಾರ ಹೇರಿದ್ದು. ಭಾರತಕ್ಕೆ ಸ್ವಾ[...] ಸಿಕ್ಕಿ 69 ವರ್ಷವಾಯಿತು. ಹಾಗೂ ಈ 69 ವರ್ಷ[...] ಯಾವುದೇ ಕಠಿಣ ಆರ್ಥಿಕ ನೀತಿ ಅನುಷ್ಠಾನಗೊ[...] ಮುಂಚೆ ಭಾರತದ ಮೂರೂ ಸೇನೆಗಳ ದಂಡನಾಯ[...] ಪ್ರಧಾನಿ ಕರೆಸಿ ಅವರ ಸಲಹೆ ಕೇಳುವ [...] ಅನುಸರಿಸಿರಲೇ ಇಲ್ಲ. ಯಾಕೆಂದರೆ ಪ್ರಜಾಪ್ರಭು[...] ಮಿಲಿಟರಿ ಅಧಿಕಾರಿಗಳಿಗೂ ಸರಕಾರದ ಆರ್ಥಿಕ ನಿ[...] ನೇರ ಸಂಬಂಧ ಇಲ್ಲ. ಇಂತಹ ಸನ್ನಿವೇಶದಲ್ಲಿ [...] ಪ್ರಧಾನಿಗಳು ಕೇವಲ ಆರ್ಥಿಕ ತಜ್ಞರ ಸಲಹೆ ಕೇಳುತ್ತಾ[...] ವಿನಃ ಮಿಲಿಟರಿಯವರಿಂದ ಅಲ್ಲವೇ ಅಲ್ಲ. ಈಗಿನ ನೋ[...] ರದ್ದತಿಯ ವಿಷಯದಲ್ಲಿ ದೇಶದ ಭದ್ರತೆಗೆ ಸಂಬಂ[...]

ಟಿಪ್ಪುವಿನಿಂದ ಲಾಭ ಪಡೆದವರೇ ಇವತ್ತಿನ ಚೆಡ್ಡಿಗಳು

ಟಿಪ್ಪು ಅಷ್ಟು ಜನರನ್ನು ಕೊಂದ ಇಷ್ಟು ಜನರನ್ನು ಮತಾಂತರ ಮಾಡಿದ ಎಂದು ಹಲವು ದಿನಗಳಿಂದ ಕೇಸರಿ ಪತ್ರಿಕೆಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಪೂರ್ವಾಗ್ರಹಪೀಡಿತರ ಅರೆಜ್ಞಾನದ ಲೇಖನಗಳು ಹರಿದಾಡುತ್ತಿವೆ. ಆದರೆ ಮೊಟ್ಟ ಮೊದಲು ಟಿಪ್ಪು ಸೈನ್ಯದ ಒಟ್ಟು ಬಲ ಎಷ್ಟಿತ್ತು ಹಾಗೂ ಅದರಲ್ಲಿ ಮುಸ್ಲಿಂ ಸೈನಿಕರ ಸಂಖ್ಯೆ ಮತ್ತು ಹಿಂದೂ ಸೈನಿಕರ ಸಂಖ್ಯೆ ಶೇಕಡಾವಾರು ಎಷ್ಟಿತ್ತು ಎಂದು ಯಾರೂ ಸ್ಪಷ್ಟಪಡಿಸಿಲ್ಲ. ಟಿಪ್ಪುವಿನಿಂದ ಯಾವ ಯಾವ ಹಿಂದೂ ಜಾತಿ-ಜನಾಂಗಗಳಿಗೆ ಅನ್ಯಾಯವಾಗಿದೆ ಎನ್ನುವ ಐತಿಹಾಸಿಕ ಸಂಶೋಧನೆ ಪತ್ರಿಕೆಗಳಲ್ಲಿ ಹರಿದಾಡುತ್ತಿದೆ, ಆದರೆ ಟಿಪ್ಪುವಿನಿಂದ ಯಾವ ಯಾವ ಹಿಂದೂ ಸಮುದಾಯಗಳಿಗೆ ಉಪಕಾರ ಆಗಿದೆ ಎನ್ನುವ ವಿವರ ಈ ಪತ್ರಿಕೆಗಳಲ್ಲಿ ಎಲ್ಲಿಯೂ ಕಾಣುತ್ತಿಲ್ಲ.



ಟಿಪ್ಪುವಿನಿಂದ ಯಾವ ಯಾವ ನಿರ್ದಿಷ್ಟ ಹಿಂದೂ ಸಮುದಾಯಗಳು ಪ್ರಯೋಜನ ಪಡೆದಿವೆ ಎಂಬುದನ್ನು ಮುಖ್ಯವಾಗಿ ವಿಶ್ಲೇಷಿಸಬೇಕಾಗಿದೆ. ಟಿಪ್ಪುವಿನಿಂದ ಪ್ರಯೋಜನ ಪಡೆದು ಅದನ್ನು ಇಂದಿನ ತಲೆಮಾರಿನವರೆಗೂ ಅನುಭವಿಸುತ್ತಿರುವ ಸಮುದಾಯಗಳಲ್ಲಿ ಬ್ರಾಹ್ಮಣರು, ಅರೆಭಾಷೆ ಗೌಡರು, ಮರಾಠಿ ದರ್ಜಿಗಳು ಮತ್ತು ಮರಾಠ ಕ್ಷತ್ರಿಯರು ಪ್ರಮುಖರು. ಟಿಪ್ಪು ಕಾಲದಲ್ಲಿ ಹೆಚ್ಚಿನ ಎಲ್ಲಾ ಗ್ರಾಮ ಲೆಕ್ಕಿಗರು, ಕಂದಾಯ ಸಂಗ್ರಹಕರು ಬ್ರಾಹ್ಮಣರಾಗಿದ್ದರು. ಟಿಪ್ಪುವಿನ ಕಂದಾಯ ಮಂತ್ರಿ ಆಗಿದ್ದ ಪೂರ್ಣಯ್ಯ ತನ್ನದೇ ಜಾತಿಯವರನ್ನು ಎಲ್ಲೆಡೆ ಗ್ರಾಮಲೆಕ್ಕಿಗ ಮತ್ತು ಕಂದಾಯ ಸಂಗ್ರಹಕರಾಗಿ ನೇಮಿಸಿದ್ದನು. ಟಿಪ್ಪೂ ಆಸ್ಥಾನದಲ್ಲಿ ಪೂರ್ಣಯ್ಯನಲ್ಲದೇ ಇನ್ನೂ ಐದು ಮಂತ್ರಿಗಳು ಬ್ರಾಹ್ಮಣರಾಗಿದ್ದರು. ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಲಿಂಗಾಯತರಿದ್ದರೂ ಅವರನ್ನು ಈ ಬ್ರಾಹ್ಮಣ ಮಂತ್ರಿಗಳು ಉದ್ದೇಶಪೂರ್ವಕವಾಗಿ ಟಿಪ್ಪು ಆಡಳಿತದಿಂದ ದೂರ ಇಟ್ಟಿದ್ದರು.

ಎರಡನೆಯದಾಗಿ, ಟಿಪ್ಪು ಸೈನಿಕರು ಕೊಡಗಿನ ದಂಗೆಯನ್ನು ಅಡಗಿಸಿದ ಮೇಲೆ ದೊಡ್ಡ ಸಂಖ್ಯೆಯಲ್ಲಿ ಎರಡೂ ಕಡೆಯವರು ಸತ್ತರು. ಟಿಪ್ಪೂ ಸೈನ್ಯದಲ್ಲಿಯೂ ಹಿಂದೂ ಕೊಡವ ಯೋಧರು ಇದ್ದರು. ಸತ್ತ ಯೋಧರಲ್ಲಿ ಹೆಚ್ಚಿನವರು ಕೃಷಿಕರಾಗಿದ್ದರು. ಹಾಗಾಗಿ ಆ ಕೊಡಗಿನ ಯುದ್ಧದ ನಂತರ ಕೊಡಗಿನ ಕೃಷಿಗೆ ಭಾರಿ ಹೊಡೆತ ಬಿತ್ತು. ಟಿಪ್ಪು ಕೃಷಿಗೆ ತುಂಬಾ ಮಹತ್ವ ಕೊಡುತ್ತಿದ್ದುದರಿಂದ ಅವನು ನೆರೆಯ ಸುಳ್ಯ ಮತ್ತೂ ಬೆಳ್ತಂಗಡಿ ತಾಲೂಕಿನಿಂದ ಅರೆಭಾಷೆ ಗೌಡ ರೈತರನ್ನು ಕರೆತಂದು ಕೊಡಗಿನಲ್ಲಿ ನೆಲೆಗೊಳಿಸಿ ಅವರಿಗೆ ಯುದ್ಧದಲ್ಲಿ ಸತ್ತ ಕೊಡವರ ಹೊಲಗದ್ದೆಗಳನ್ನು ಕೃಷಿ ಮಾಡಲು ಕೊಟ್ಟನು. ಅರೆಭಾಷೆ ಗೌಡರು ಯೋಧ ಜನಾಂಗ ಅಲ್ಲವಾದುದರಿಂದ ಟಿಪ್ಪುವಿಗೆ ಪುಕ್ಕಲು ಗೌಡರ ಬಗ್ಗೆ ಯಾವುದೇ ಭಯ ಇರಲಿಲ್ಲ. ಅಂದು ಟಿಪ್ಪು ಮಾಡಿದ ಈ ಉಪಕಾರದ ಸಿಹಿಫಲ ಕೊಡಗಿನಲ್ಲಿ ಅರೆಭಾಷೆ ಗೌಡರ ಇಂದಿನ ತಲೆಮಾರೂ ಸವಿಯುತ್ತಿದೆ. ಈ ಕೊಡಗಿನ ಗೌಡರು ಮೂಲತಃ ತುಳುನಾಡಿನವರು ಎನ್ನುವುದಕ್ಕೆ ಸಾಕ್ಷಿ ಅವರ ಅರೆಕನ್ನಡ ಭಾಷೆಯಲ್ಲಿ ಹೇರಳವಾಗಿರುವ ತುಳು ಶಬ್ದಗಳು ಮತ್ತು ಅವರು ಈಗಲೂ ನಂಬುವ ಭೂತಾರಾಧನೆ ಮತ್ತು ನಾಗಾರಾಧನೆ. ವಿಪರ್ಯಾಸವೆಂದರೆ ಟಿಪ್ಪುವಿನಿಂದ ಅರೆಗೌಡರ ಹತ್ತಾರು ತಲೆಮಾರಿಗೆ ಪ್ರಯೋಜನವಾಗಿದ್ದರೂ ಕೊಡಗಿನ ಮತ್ತು ಸುಳ್ಯದ ಅರೆಭಾಷೆ ಗೌಡರಲ್ಲಿ ಹೆಚ್ಚಿನವರು ಈಗ ಟಿಪ್ಪು ದ್ವೇಷಿಗಳು ಹಾಗೂ ಕಟ್ಟಾ ಹಿಂದುತ್ವವಾದಿಗಳು. ಟಿಪ್ಪುವಿನಿಂದಾದ ಪ್ರಯೋಜನದ ಲಾಭ ಈಗಲೂ ಉಣ್ಣುವಾಗ ಈಗಿನ ತಲೆಮಾರಿಗೆ ಅವರ ಆತ್ಮಸಾಕ್ಷಿ ಚುಚ್ಚುವುದಿಲ್ಲವೇ?

ಟಿಪ್ಪುವಿನಿಂದ ಲಾಭ ಪಡೆದ ಮೂರನೆಯ ಹಿಂದೂ ಗುಂಪು ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈಗಲೂ ನೆಲೆಸಿರುವ ಮರಾಠಿ ದರ್ಜಿ (ಸಿಂಪಿಗ) ಜಾತಿಯವರು. ತನ್ನ ರಾಜಕೀಯ ಮಿತ್ರರಾಗಿದ್ದ ಫ್ರೆಂಚ್ ಸೈನಿಕರ ಸುಂದರ ಸಮವಸ್ತ್ರ ನೋಡಿದ ಟಿಪ್ಪು ತನ್ನ ಸೈನಿಕರಿಗೂ ಅಂತಹದ್ದೇ ಸಮವಸ್ತ್ರ ಹೊಲಿಸಲು ನಿರ್ಧರಿಸಿದಾಗ ಅವನಿಗೆ ತನ್ನ ರಾಜ್ಯದ ಕನ್ನಡಿಗರಲ್ಲಿ ಅದಕ್ಕೆ ಸರಿಯಾದ ನುರಿತ ದರ್ಜಿಗಳು ಸಿಗಲಿಲ್ಲವೆಂದು ಅವನು ಮರಾಠಿ ಪ್ರದೇಶದಿಂದ ದರ್ಜಿ ಕುಟುಂಬಗಳನ್ನು ಕರೆತಂದು ಅವರನ್ನು ಮೈಸೂರು ಮಂಡ್ಯದಲ್ಲಿ ನೆಲೆಗೊಳಿಸಿದನು. ಟಿಪ್ಪು ಸತ್ತನಂತರ ಈ ಮರಾಠಿ ದರ್ಜಿ ಜಾತಿಯವರಿಗೆ ಒಡೆಯರ್ ಅರಸರು ಮೈಸೂರಿನಲ್ಲಿ ನೆಲೆ ಒದಗಿಸಿದರು. ಇವತ್ತು ಈ ಮರಾಠಿಗಳು ಮೈಸೂರು ನಗರದಲ್ಲಿ ಹೆಚ್ಚಿನ ಟೈಲರಿಂಗ್ ಅಂಗಡಿಗಳನ್ನು ಹೊಂದಿರುವುದಲ್ಲದೇ ದೊಡ್ಡ ದೊಡ್ಡ ಬಟ್ಟೆ ಮಳಿಗೆಯನ್ನೂ ಹೊಂದಿದ್ದು ಕೋಟ್ಯಾಧೀಶರಾಗಿದ್ದಾರೆ. ಆದರೆ ಮಹಾರಾಷ್ಟ್ರ ಗುಜರಾತಿನಲ್ಲಿರುವ ಅವರದೇ ಜಾತಿಯವರು ಈಗಲೂ ಕಡುಬಡತನದಲ್ಲಿಯೇ ಕೊಳೆಯುತ್ತಿದ್ದಾರೆ. ವಿಪರ್ಯಾಸವೆಂದರೆ ಈಗ ಮೈಸೂರಿನ ಈ ಮರಾಠಿ ದರ್ಜಿ (ಭಾವಸಾರ್) ಜಾತಿಯವರು ತಮಗೆ ಟಿಪ್ಪು ಮಾಡಿರುವ ಉಪಕಾರ ಒಂಚೂರೂ ನೆನಪಿಡದೇ ಸಂಘ ಪರಿವಾರದ ಕಟ್ಟಾ ಅನುಯಾಯಿಗಳಾಗಿದ್ದಾರೆ.

ಟಿಪ್ಪುವಿನಿಂದ ಉಪಕಾರ ಪಡೆದ ನಾಲ್ಕನೆಯ ಗುಂಪು ಮರಾಠಾ (ಕ್ಷತ್ರಿಯ) ಜಾತಿಯವರದ್ದು. ಇವರನ್ನೂ ಟಿಪ್ಪು ಮಹಾರಾಷ್ಟ್ರದಿಂದ ಕರೆತಂದು ತನ್ನ ಅಶ್ವದಳದಲ್ಲಿ ಸೇರಿಸಿದ್ದಲ್ಲದೇ ಅವರನ್ನು ಇಲ್ಲಿಯೇ ಶಾಶ್ವತವಾಗಿ ಉಳಿಸಿಕೊಳ್ಳಲು ಭೂಮಿ ಸಹ ಕೊಟ್ಟಿದ್ದನು. ಈಗಲೂ ಮೈಸೂರಿನ ಮರಾಠರು ಟಿಪ್ಪು ಕೊಟ್ಟ ಆ ಭೂಮಿಯ ಅನ್ನ ಉಣ್ಣುತ್ತಿದ್ದಾರೆ, ಆದರೆ ಇವರೂ ಮೈಸೂರಿನ ಆರೆಸ್ಸೆಸ್ಸಿನ ಬೆನ್ನೆಲುಬು.

ಟಿಪ್ಪು ಸೈನ್ಯದಲ್ಲಿ ಕೇವಲ 20% ಮಾತ್ರ ಮುಸ್ಲಿಮರಿದ್ದು 80% ಸೈನಿಕರು ಹಿಂದೂಗಳಾಗಿದ್ದರು. ಹಿಂದೂ ಸೈನಿಕರಲ್ಲಿ ಹೆಚ್ಚಿನವರು ನಾಯಕ-ವಾಲ್ಮೀಕಿ ಮತ್ತು ಒಕ್ಕಲಿಗ ಸಮುದಾಯದವರಾಗಿದ್ದರು. ಕುರುಬರೂ ಟಿಪ್ಪು ಸೈನಿಕರಾಗಿದ್ದರು. ಇವರೆಲ್ಲಾ ಬಲಾತ್ಕಾರದ ಮತಾಂತರದಲ್ಲಿ ತೊಡಗಿಕೊಂಡಿದ್ದರೆನ್ನುವುದು ಹಾಸ್ಯಾಸ್ಪದ. ಅದು ನಿಜವಾಗಿದ್ದರೆ [...] ಮೈಸೂರು ಮಂಡ್ಯ ಜಿಲ್ಲೆಯಲ್ಲಿ ಕೇರಳದ ಮಲ್ಲಾಪುರಮ್‌ನಂತೆ ಜನಸಂಖ್ಯೆ ಮುಸ್ಲಿಮರಾಗಿರಬೇಕಿತ್ತು. ಆದರೆ ನಿಜದಲ್ಲಿ ಮೈಸೂರು ನಗ[...] ಹಳೆ ಮೈಸೂರಿನ ಯಾವುದೇ ಭಾಗದಲ್ಲಿಯೂ ಮುಸ್ಲಿಮರು 15% ಹೆಚ್ಚಿಲ್ಲ. ಹೀಗಾಗಿ ಟಿಪ್ಪು ಕರ್ನಾಟಕದಲ್ಲಿ ಬಲಾತ್ಕಾರದ ಮತಾಂತ[...] ತೊಡಗಿದ್ದ ಎಂಬುದು ಸುಳ್ಳು ಎಂದು ಸಾಬೀತಾಗುತ್ತದೆ. ಮಲಬಾರ ಪ್ರದೇ[...] ಟಿಪ್ಪು ಮತಾಂತರ ಮಾಡಿದ್ದು ನಿಜ. ಅದಕ್ಕೆ ಕಾರಣ ಅಲ್ಲಿಯ ನಾಯರ[...] ದಂಗೆ ಎದ್ದಿದ್ದನ್ನು ಸದೆಬಡಿದು ಅವರು ಮುಂದೆಂದೂ ಧರ್ಮದ [...] ದಂಗೆ ಎಳಬಾರದು ಎಂಬ ಮುನ್ನೆಚ್ಚರಿಕೆಗಾಗಿ. ಆದರೆ ಅತೀ [...] ಸಂಗತಿಯೆಂದರೆ ಟಿಪ್ಪು ದಾಳಿಯಾದಾಗ ನಾಯರ್ ಮತ್ತು ನಂಬೂದಿ[...] ದಕ್ಷಿಣ ಕೇರಳಕ್ಕೆ ಪಲಾಯನ ಮಾಡಿದರು ಹಾಗೂ ಮುಸ್ಲಿಂ ಆಗಿ ಮತಾ[...] ಆದವರು ಹೆಚ್ಚಿನವರು ಕೆಳಜಾತಿಯ ಈಳವ, ಮೀನುಗಾರ ಮತ್ತು [...] ಜಾತಿಯವರು. ಇವರಿಗೆ ಟಿಪ್ಪು ನಾಯರ್‌ಗಳಿಂದ ವಶಪಡಿಸಿಕೊಂಡ ಭ[...] ಕೊಟ್ಟಿದ್ದನು. ಆದರೆ ಕೇವಲ ಎಂಟೇ ವರ್ಷಗಳ ನಂತರ ಟಿಪ್ಪು ಸತ್ತ [...] ನಾಯರ್ ಮತ್ತು ನಂಬೂದ್ರಿಗಳು ವಾಪಸ್ ಬಂದು ಬ್ರಿಟಿಷರ ಸಹಾಯ[...] ತಮ್ಮ ಜಮೀನುದಾರಿಕೆ ಮರು ಸ್ಥಾಪಿಸಿ ಕೆಳಜಾತಿಯವರನ್ನು ಮತ್ತೆ ಭೀಕ[...] ಶೋಷಿಸತೊಡಗಿದರು. ಕೆಳಜಾತಿ ಮಹಿಳೆಯರು ರವಿಕೆ ಹಾಕುವುದನ್ನು [...] ನಿಷೇಧಿಸಿ ಸೊಂಟದ ಮೇಲೆ ಎಲ್ಲ ಕೆಳಜಾತಿಯ ಹೆಂಗಸರು ಬೆತ್ತಲೆ ಆ[...] ಇರಬೇಕೆಂದು ವಿಧಿಸಿ ಅವರ ಮೊಲೆಯ ಸೈಜಿಗೆ ತಕ್ಕಂತೆ ಮತ್ತ[...] ತೆರಿಗೆ" ವಿಧಿಸಿದರು. ಆಗ ಹೆಚ್ಚಿನ ನವ-ಮುಸ್ಲಿಮರು ಎಂಟೇ ವ[...] ನಂತರ ಮರಳಿ ತಮ್ಮ ಹಿಂದೂ ಮಾತೃಧರ್ಮಕ್ಕೆ ಬರುವುದಾಗಿ ಧಾ[...] ನೇತಾರರಿಗೆ ದುಂಬಾಲು ಬಿದ್ದರೂ ಮೇಲ್ಜಾತಿಯವರು ಇದಕ್ಕೆ ಆಸ್ಪದ ಕೊ[...] ಹಾಗಾಗಿ ಅವರು ಮುಸ್ಲಿಮರಾಗಿಯೇ ಮುಂದುವರಿಯು[...] ಅನಿವಾರ್ಯವಾಯಿತು. ಟಿಪ್ಪು ಏನೋ ರಾಜಕೀಯ ಕಾರಣಕ್ಕಾಗಿ ಮತಾ[...] ಮಾಡಿದ, ಆದರೆ ಅದಕ್ಕಿಂತ ಹೆಚ್ಚಿನ ಸ್ವಾರ್ಥ ತೋರಿದವರು ಮಲಬ[...] ಆಗಿನ ಹಿಂದೂ ಧಾರ್ಮಿಕ ನೇತಾರರು. ಹಾಗಾಗಿ ಮಲಬಾರಿನಲ್ಲಿ [...] ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೆ ಅದಕ್ಕೆ ನೇರ ಹೊಣೆ ಆಗಿನ [...] ವಾಪ್ಸಿಗೆ ತಡೆಯೊಡ್ಡಿದ ಹಿಂದೂ ಧಾರ್ಮಿಕ ನೇತಾರರೇ ಹೊರತು [...] ಅಲ್ಲವೇ ಅಲ್ಲ. ಇಂದು ದೊಡ್ಡದಾಗಿ ಘರ್ ವಾಪ್ಸಿ ಬಗ್ಗೆ ನಾಟಕ ಆಡು[...] ತಮ್ಮ ಪೂರ್ವಜರು ಘರ್ ವಾಪ್ಸಿಗಾಗಿ ಬಂದವರನ್ನೇ ಧಿಕ್ಕರಿಸಿ ಕ[...] ಘೋರ ತಪ್ಪು ಮಾಡಿರುವ ಬಗ್ಗೆ ಅವಲೋಕನ ಮಾಡಲಿ. ತಮ್ಮ ಮಹಾ[...] ಹಿಂದೂ ಪೂರ್ವಜರು ಮಾಡಿದ ತಪ್ಪಿಗೆ ಇಂದಿನ ಮುಸ್ಲಿಮ[...] ಹಿಂದುತ್ವವಾದಿಗಳು ದ್ವೇಷಿಸಿ ಫಲವೇನು?


ನಾವು ಇತಿಹಾಸದಲ್ಲಿ ಬದುಕುವುದನ್ನು ಬಿಟ್ಟು ಈಗಿನ ಕಾಲಕ್ಕೆ [...] ಪ್ರಾಕ್ಟಿಕಲ್ ಆಗಿ ಆಲೋಚಿಸಬೇಕಿದೆ. ಇತಿಹಾಸದಲ್ಲಾದ ಅನ್ಯಾಯದ ನೆ[...] ವರ್ತಮಾನದಲ್ಲಿ ಮುಸ್ಲಿಂ ದ್ವೇಷ ಹುಟ್ಟುಹಾಕಿ ರಾಜಕೀಯ [...] ಬೇಯಿಸಿಕೊಳ್ಳುವವರನ್ನು ಗುರುತಿಸಿ ಅವರನ್ನು ದೂರ ಇಡಬೇಕಿದೆ.

- ಜೆ. ರವಿಕಿರಣ, ಮೈ[...]



ಷಯ ಇರಲಿಲ್ಲ. ಆದರೂ ಮೋದಿ ಮೊನ್ನೆ ನವಂಬರ್ ನೇ ತಾರೀಖಿಗೆ ಸಾಯಂಕಾಲ ಮೂರೂ ಸೇನೆಯ ಂಡನಾಯಕರನ್ನು ಗುಟ್ಟಾಗಿ ಕರೆಸಿ ಅವರನ್ನು ಸಲಹೆ ಳಿದ್ದು ಯಾಕೆ? ನೋಟು ರದ್ದತಿಯಿಂದ ದೇಶ ಜನತೆ ಂಗೆ ಏಳುತ್ತಾರೆ ಎಂಬ ಭಯ ಮೋದಿಗೆ ಇತ್ತೇ? ಥವಾ ಇತ್ತೀಚಿಗೆ ಭಾರತ ಬಿಲ್ಲಿಯನ್‌ಗಟ್ಟಲೆ ಡಾಲರಿನ ುದ್ಧ ವಿಮಾನ ಮತ್ತು ಆಯುಧಗಳನ್ನು ವಿದೇಶದಿಂದ ರೀದಿಸಿದ್ದು, ಅದರ ಕಮಿಷನ್ ರಾಜಕಾರಣಿಗಳು ಂಗಿರುವುದು ದಂಡನಾಯಕರಿಗೆ ಗೊತ್ತಾಗಿ ವರೇನಾದರೂ ಆಕ್ಷೇಪಣೆ ಎತ್ತಿರುವ ಬಗ್ಗೆ ಚರ್ಚಿಸಲು ಂಡನಾಯಕರನ್ನು ಕರೆಸಿರಬಹುದು ಎಂಬ ಅನುಮಾನ ಹಳ ಜನರಿಗಿತ್ತು. ಆದರೆ ಈಗ ಭಾರತ ಪಾಕ್ ನಡುವೆ ಪ್ರಚೋದಿತ ಗುಂಡಿನ ದಾಳಿ ನಡೆದು ಕದನ ವಿರಾಮ ಲ್ಲಂಘನೆಯಾಗಿ ಎರಡೂ ಕಡೆಯ ಯೋಧರು ಸತ್ತಿದ್ದಾರೆ. ಬಗ್ಗೆ ಕೆಲವು ಅಂತರರಾಷ್ಟ್ರೀಯ ವಿಶ್ಲೇಷಕರು ಭಾರತದಲ್ಲಿ 00, 1000 ರೂ.ಗಳ ನೋಟು ರದ್ದತಿಯಿಂದ ಇಡೀ ಶದಲ್ಲಿ ಭುಗಿಲೆದ್ದಿರುವ ಆಕ್ರೋಶವನ್ನು ಬೇರೆಡೆ ುಗಿಸಲು ಭಾರತವೇ ಗಡಿಯಲ್ಲಿ ಶಾಂತಿ ಉಲ್ಲಂಘಿಸಿ ಕ್ ಪೋಸ್ಟುಗಳ ಮೇಲೆ ದಾಳಿ ಮಾಡಿದ್ದು ಎಂದು ವಾಜ್ ಶರೀಫರ ಆರೋಪವನ್ನು ಸಮರ್ಥಿಸುತ್ತಿದ್ದಾರೆ. ೋಟು ರದ್ದತಿಗೆ ಮುಂಚೆ ಮೂರೂ ಸೇನಾ ಂಡನಾಯಕರನ್ನು ಮೋದಿ ಕರೆಸಿ ಸಮಾಲೋಚಿಸಿದ್ದು ಡಾಗ ನವಾಜ್ ಷರೀಫ್ ಆರೋಪದಲ್ಲಿ ಹುರುಳಿದೆ ಂದು ಯಾರಾದರೂ ಹೇಳಿದರೆ ಅವರಿಗೆ ದೇಶದ್ರೋಹಿ ಂದು ಬಿರುದು ಗ್ಯಾರಂಟಿ.

ಆದರೆ ಸೇನೆಯಲ್ಲಿ ಅನೇಕ ಸಂಬಂಧಿಕರನ್ನು



ಂದಿರುವ ಕೊಡಗು ಮೂಲದ ನನ್ನಂತವರಿಗೆ ಸರಿಯಾಗಿ ತ್ತಿದೆ, ಅನೇಕ ಸಂದರ್ಭಗಳಲ್ಲಿ ದೇಶದ ಆಂತರಿಕ ಮಸ್ಯೆಗಳಿಂದ ಜನರ ಗಮನ ಬೇರೆಡೆ ತಿರುಗಿಸಲು ರತವೇ ಮೊದಲು ಗಡಿಯಲ್ಲಿ ಕದನ ವಿರಾಮ ಲ್ಲಂಘನೆ ಮಾಡುತ್ತದೆ. ಇದು ಶುರುವಾಗಿದ್ದು ಇಂದಿರಾ ಂಧಿಯವರ ಕಾಲದಲ್ಲಿ. ಅಂದಿನಿಂದ ಇಂದಿನವರೆಗೂ ರೆ ಬೇರೆ ಪಕ್ಷಗಳು ಕೇಂದ್ರದಲ್ಲಿ ಆಡಳಿತದಲ್ಲಿ ಇದ್ದರೂ ಂತಹ ಗಡಿ ಉಲ್ಲಂಘನೆ ಕೇವಲ ಪಾಕ್‌ನಿಂದ ಮಾತ್ರವಲ್ಲ, ಜಕೀಯ ಕಾರಣಕ್ಕಾಗಿ ಭಾರತದಿಂದಲೂ ಆಗಿದೆ. ಕೊನೆಗೆ ದಲ್ಲಿ ಬಲಿಯಾಗುವುದು ಏನೂ ರಾಜಕೀಯ ಅರಿಯದ ಮ್ಮ ಯೋಧರು.

ಅದೇರೀತಿ, ಖೋಟಾ ಕರೆನ್ಸಿ ಬಗ್ಗೆ ಭಾರತದ ೋಪವೇನೆಂದರೆ- ಪಾಕಿಸ್ತಾನ ಸರಕಾರವೇ ಭಾರತೀಯ ೋಟಾ ಕರೆನ್ಸಿ ಛಾಪಾಯಿಸಿ ಭಾರತದೊಳಗೆ ಅದನ್ನು ಏಜಂಟರ ಮೂಲಕ ಚಲಾವಣೆ ಮಾಡಿ ಭಾರತದ ರ್ಥವ್ಯವಸ್ಥೆ ಬುಡಮೇಲು ಮಾಡಲು ಪ್ರಯತ್ನಿಸುತ್ತಿದೆ ಂಬುದಾಗಿ. ಆದರೆ ಪಾಕಿಸ್ತಾನವೂ ಇಂತಹದ್ದೇ ಆರೋಪ ಭಾರತದ ಮೇಲೆ ಮಾಡುತ್ತಿದೆ, ಅಂದರೆ ಭಾರತದ ಗುಪ್ತಚರ ಸಂಸ್ಥೆಗಳು ಭಾರತದಲ್ಲಿ ಪಾಕಿಸ್ತಾನದ ಖೋಟಾನೋಟು ಛಾಪಾಯಿಸಿ ಅದನ್ನು ಪಾಕಿಸ್ತಾನದ ಒಳಗೆ ಚಲಾಯಿಸಿ ಪಾಕಿಸ್ತಾನದ ಅರ್ಥ ವ್ಯವಸ್ಥೆ ಬುಡಮೇಲು ಮಾಡಲು ಪ್ರಯತ್ನಿಸುತ್ತಿದೆ ಎಂಬುದಾಗಿ. ಅದಕ್ಕಾಗಿ ಈಗ ಪಾಕಿಸ್ತಾನದಲ್ಲಿಯೂ **1000** ಮತ್ತು **5000** ರೂಪಾಯಿಯ ನೋಟು ರದ್ದುಗೊಳಿಸುತ್ತಿದ್ದಾರಂತೆ. ಇದರ ಬಗ್ಗೆ ಬರೆದವರು ಎರಡೂ ದೇಶದಲ್ಲಿ ದೇಶದ್ರೋಹಿಗಳು ಎನಿಸುತ್ತಾರೆ. ತಮ್ಮ ತಮ್ಮ ದೇಶದ ಸೇನೆಗಳನ್ನು ಉಪಯೋಗಿಸಿ ಎರಡೂ ದೇಶದ ರಾಜಕಾರಣಿಗಳು ತಮ್ಮ ಅಧಿಕಾರ ಗಟ್ಟಿಗೊಳಿಸಲು ಆಡುವ ಪಗಡೆಯಾಟದಲ್ಲಿ ಅಪ್ಪಟ ದೇಶಪ್ರೇಮಿಗಳಾದ ಕೆಳಹಂತದ ನಿಸ್ಸಹಾಯಕ ಯೋಧರು ಮಾತ್ರ ಎರಡೂ ಕಡೆ ಬಲಿಪಶು ಆಗುವುದು. ಎರಡೂ ದೇಶದ ರಾಜಕಾರಣಿಗಳು ಮಾತ್ರ ತಮ್ಮ ದೇಶದ ರಕ್ಷಣೆಗಾಗಿ ಹಾಗೂ ನೆರೆಯ ವೈರಿಗೆ ಬುದ್ಧಿ ಕಲಿಸಲು ತಾವು ಈ ಅತ್ಯಂತ ಕಠಿಣ ನಿರ್ಧಾರ ಕೈಗೊಳ್ಳಬೇಕಾಯಿತು ಎಂದು ಬೂಸಿ ಬಿಡುತ್ತಾರೆ.

-ವೀರಪ್ಪ ಡಿ.ಎನ್, ಮಡಿಕೇರಿ

ದೇವಸ್ಥಾನ/ಮಠಗಳಿಗೆ ಬಂಪರ್ ಆದಾಯ

ನಿನ್ನೆ ಗೋವಾದಲ್ಲಿ ಮೋದಿಯವರು ದೇವಸ್ಥಾನಗಳ ಹುಂಡಿ ಮೂಲಕ ಸಂಗ್ರಹವಾದ ಹಳೆ ನೋಟುಗಳು ಹಾಗೂ ಧಾರ್ಮಿಕ ಸಂಸ್ಥೆಗಳಲ್ಲಿರುವ ಹಳೇ ನೋಟುಗಳ ವಿನಿಮಯಕ್ಕೆ ಡಿಸೆಂಬರ್ 30 ರ ವರೆಗೆ ಯಾವುದೇ ನಿರ್ಬಂಧ ಇರುವುದಿಲ್ಲ ಎಂದು ಸ್ಪಷ್ಟೀಕರಣ ಕೊಟ್ಟ ಮೇಲೆ, ಸೋಮವಾರ ಸಂಜೆಯಿಂದ ದೊಡ್ಡ ಖಾಸಗಿ ದೇವಸ್ಥಾನಗಳು ತಮ್ಮ ಎಕ್ಸ್-ಚೇಂಜ್ ರೇಟ್ ಫಿಕ್ಸ್ ಮಾಡಿವೆ. ಇದು **demand/supply** ನಿಯಮದ ಮೇಲೆ ಆಧಾರಿತ. ನಮ್ಮ ಕರಾವಳಿಯ ಎರಡು ಖಾಸಗಿ ದೇವಸ್ಥಾನ/ಮಠಗಳ ಇಂದಿನ ರೇಟು ಈ ರೀತಿ ಇದೆ: ಅಣ್ಣಪ್ಪ ಸ್ವಾಮಿಯ ಕಾವಲಿನಲ್ಲಿರುವ ದೇವಲದಲ್ಲಿ ಜೈನ ಧರ್ಮದರ್ಶಿಯ ರೇಟು: ಶೂದ್ರರಿಗೆ **50:50**. ಅಂದರೆ ನೀವು ಒಂದು ಲಕ್ಷ ಮೌಲ್ಯದ ಹಳೆ ನೋಟು ಕೊಟ್ಟರೆ ನಿಮಗೆ **50** ಸಾವಿರದ ಹೊಸ ನೋಟು ಸಿಗುತ್ತದೆ. ಅದೇ ದೇವಲದಲ್ಲಿ ಜೈನರಿಗೆ ರೇಟು **70:30** ಅಂದರೆ **70%** ಕಾಳಧನದ ಜೈನನಿಗೆ ಸಿಕ್ಕರೆ ಧರ್ಮದರ್ಶಿಗೆ **30%**. ಇಲ್ಲಿ ಬ್ರಾಹ್ಮಣರಿಗೆ **60:40**. ಅಂದರೆ ಕಾಳಧನಿಕ ಬ್ರಾಹ್ಮಣನಿಗೆ **60** ರೂಪಾಯಿ ಮತ್ತು ಧರ್ಮದರ್ಶಿಗೆ **40** ರೂಪಾಯಿ. ಆದರೆ ಪಕ್ರವರ್ತಿ ಮೈಥುನ ನಡೆಸಿದ ಉಡುಪಿಯ ಮಾಧ್ವ ನಡೆಯ ಮಠದಲ್ಲಿ ಎಲ್ಲರಿಗೂ **60:40** ಅಂದರೆ ಕಾಳಧನ ಭಕ್ತರಿಗೆ **60%** ಮತ್ತು ಮಠ ಸ್ವಾಮಿಗೆ **40%**, ಯಾಕೆಂದರೆ ಅಲ್ಲಿ ಕೇವಲ ಶಿವಳ್ಳಿ ಬ್ರಾಹ್ಮಣರು ಹೆಚ್ಚಾಗಿ ಎಕ್ಸ್-ಚೆಂಜಿಗೆ ಬರುವುದು.


ಕೆಲವು ದೇವಸ್ಥಾನ/ಮಠಗಳಲ್ಲಿ ಹೊಸ ನೋಟು ಕೊಡುವ ಬದಲು ತಮ್ಮಲ್ಲಿ ಬಹಳ ಕಾಲದಿಂದ ಜಮೆಯಾಗಿರುವ ಭಕ್ತರು ಹರಕೆಯಾಗಿ ಕೊಟ್ಟ ಚಿನ್ನ-ವಜ್ರದ ಆಭರಣಗಳನ್ನೇ ಹೊಸ ನೋಟಿನ ಬದಲು ಕೊಡಲಾಗುತ್ತದೆ. ಹೊಸ ನೋಟುಗಳ ಲಭ್ಯತೆ ಕಡಿಮೆ ಇರುವ ದೇವಸ್ಥಾನಗಳಲ್ಲಿ ಈ ಸಿಸ್ಟಂ ಅಳವಡಿಸಲಾಗಿದೆ. ಹೇಗಿದೆ ನೋಡಿ ಚಾಪೆ ಕೆಳಗೆ ನುಸುಳುವ ಐಡಿಯಾ. ಗೋಸ್ವಾಮಿಯ ಆಶ್ರಮದಲ್ಲಿಯೂ ಇಂತಹದ್ದೇ ವಿನಿಮಯ ಸೌಲಭ್ಯವಿದೆಯಂತೆ.

ಗುಜರಾತಿನಲ್ಲಿ ಮಾತ್ರ **30:70**. ಉಲ್ಟಾ ರೇಟು ಇದೆ. ಯಾಕೆ ಗೊತ್ತೇ? ದೇಶದಲ್ಲಿ ಅತೀ ಹೆಚ್ಚು ವಜ್ರದ ವ್ಯಾಪಾರಿಗಳು ಇರುವ ಸೂರತ್‌ನಲ್ಲಿ ಅತಿಹೆಚ್ಚು ಕಾಳಧನ ಇರುವುದು. ಹಾಗಾಗಿ ಅಲ್ಲಿಯ ದೇವಸ್ಥಾನದ ರೇಟು ಭಕ್ತನಿಗೆ ಕೇವಲ **30%** ಹಾಗೂ ದೇವಸ್ಥಾನದ ವ್ಯವಸ್ಥಾಪಕರಿಗೆ **70%**. ಇಲ್ಲಿಯೂ ಶೇರ್ ಮಾರ್ಕೆಟಿನಂತೆ ಫಾರ್ವರ್ಡ್ ಟ್ರೇಡಿಂಗ್ ಇದೆ. ಆದರೆ ಈ ಕಾಂಟ್ರಾಕ್ಟ್ ಕೇವಲ ಮೌಖಿಕ. ಅಂದರೆ ಈಗಲೇ ನಮ್ಮ ಹಳೆ ನೋಟನ್ನು ದೇವಸ್ಥಾನದಲ್ಲಿ ಜಮಾ ಮಾಡಬೇಕು. ಅದನ್ನು ದೇವಸ್ಥಾನದಲ್ಲಿ ಈಗಲೇ ಹುಂಡಿ ಆದಾಯ ಎಂದು ತೋರಿಸಲಾಗುತ್ತದೆ. ಆದರೆ ಅದರ ಬದಲಿಗೆ ಕಾಳಧನಿಕನಿಗೆ ಹೊಸ ನೋಟು ಜನೆವರಿ/ಫೆಬ್ರುವರಿಯಲ್ಲಿ ಧರ್ಮದರ್ಶಿಗಳು ಕೊಡುತ್ತಾರೆ. ಇಲ್ಲಿ ರೇಟು ತುಂಬಾ ಅನುಕೂಲವಾಗಿದೆ. ಅಂದರೆ ಭಕ್ತನಿಗೆ **80%** ಹಾಗೂ ಧರ್ಮದರ್ಶಿ ಅಥವಾ ಮೊಕ್ತೇಸರನಿಗೆ ಕೇವಲ **20%** ಮಾತ್ರ. ಯಾಕೆಂದರೆ ಹೊಸ ನೋಟಿಗೆ ಎರಡು-ಮೂರು ತಿಂಗಳು ಕಾಯಬೇಕಲ್ಲವೇ! ಈಗ ಹೇಳಿ ಮೋದಿಯ ಉದ್ದೇಶ ಕಾಳಹಣವನ್ನು ಧರ್ಮ ಕಾರ್ಯಕ್ಕೆ ಬಳಸುವ ಯುಕ್ತಿ ಫಲ ಕೊಟ್ಟಿತೇ ಇಲ್ಲವೇ.

ಧರ್ಮದರ್ಶಿಗಳು/ಮುಕ್ತೇಸರರು ಹಾಗೂ ಚೆಡ್ಡಿಗಳೆಲ್ಲಾ ಈಗ ಫುಲ್‌ಖುಷ್. ಚೆಡ್ಡಿಗಳು ಖುಷ್ ಯಾಕೆಂದರೆ ಆರೆಸ್ಸೆಸ್/ವಿಹಿಂಪ ಇವುಗಳು ಧಾರ್ಮಿಕ ಸಂಸ್ಥೆಗಳು ಎಂದು ಪರಿಗಣಿತವಾಗಿವೆ ಹಾಗೂ ಅವುಗಳ ಹತ್ತಿರವಿರುವ ಹಳೆಯ ನೋಟು ಡಿಸೆಂಬರ್ 30 ರ ವರೆಗೆ ಬ್ಯಾಂಕಿನಲ್ಲಿ ವಿನಿಮಯ ಮಾಡಬಹುದು. ಹಾಗಾಗಿ ದೇವಸ್ಥಾನ/ ಮಠಗಳಂತೆ ಈ ಸಂಘ ಪರಿವಾರಗಳಿಗೂ ಬಂಪರ್ ಆದಾಯ.

- ಉದಯರಾಜ್ ಬಿ ಆಳ್ವ, ಕಾಟಿಪಳ್ಳ

'ಮಾಸ್ತಿಗುಡಿ' ದುರಂತ ಬೂದಿ ಮುಚ್ಚಿದ ಕೆಂಡದಂತಿದೆ. ದುರ್ಘಟನೆಗೆ ಕಾರಣ ಯಾರು ಅನ್ನುವ ಚರ್ಚೆ ಚಿತ್ರೋದ್ಯಮದಲ್ಲಿ ಜೋರಾಗಿದೆ. ನಟ ದುನಿಯಾ ವಿಜಯ್ ಮೇಲೂ ತೂಗುಕತ್ತಿಯಿದೆ. ಘಟನೆಯ ಕೇಂದ್ರಬಿಂದು ಆಗಿರುವ ವಿಜಯ್ ಈ ಕುರಿತು ಇಲ್ಲಿ ಮಾತಾಡಿದ್ದಾರೆ.



ಮಾಸ್ತಿಗುಡಿಯಿಂದ ಪಾಠ ಕಲಿತಿದ್ದೇವೆ: ದುನಿಯಾ ವಿಜಯ್



'ಮಾಸ್ತಿಗುಡಿ' ದುರಂತ ಇಬ್ಬರು ಕಲಾವಿದರನ್ನು ಬಲಿ ತೆಗೆದುಕೊಂಡಿದೆ. ಚಿತ್ರತಂಡದ ನಿರ್ಲಕ್ಷ್ಯದಿಂದಾಗಿ ನಡೆದ ಈ ದುರ್ಘಟನೆಯ ಬಗ್ಗೆ ಚಿತ್ರೋದ್ಯಮದಲ್ಲಿ ಚರ್ಚೆ ಜೋರಾಗಿದೆ. ಈ ಪ್ರಕರಣವನ್ನು ಒಬ್ಬರ ಮೇಲೊಬ್ಬರು ಹಾಕುವ ಪ್ರಯತ್ನ ಕೂಡ ನಡೆದಿದೆ. ನಿರ್ಮಾಪಕರಿಗೂ ಮತ್ತು ದುರಂತಕ್ಕೂ ಸಂಬಂಧವಿಲ್ಲ ಅನ್ನುವ ತೀರ್ಮಾನ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ತೆಗೆದುಕೊಂಡಿದ್ದರೆ, ನಿರ್ದೇಶಕರು ಕೂಡ ಪೂರ್ಣ ಪ್ರಮಾಣದಲ್ಲಿ ಘಟನೆಯನ್ನು ಹೊತ್ತುಕೊಳ್ಳಲು ತಯಾರಿಲ್ಲ. ಕೆಲವರಂತೂ ಈ ದುರಂತಕ್ಕೆ ನೇರವಾಗಿ ನಟ ವಿಜಯ್ ಕಾರಣ ಎಂದೂ ದೂರುತ್ತಿದ್ದಾರೆ. ಈ ಎಲ್ಲದರ ಬಗ್ಗೆ ವಿಜಯ್ ನೇರವಾಗಿಯೇ ಉತ್ತರಿಸಿದ್ದಾರೆ.

** ದುರಂತ ಆಗಿದ್ದು ಹೇಗೆ? ಹೆಲಿಕಾಪ್ಟರ್‌ನಿಂದ ಜಿಗಿಯಲು ತೀರ್ಮಾನ ತೆಗೆದುಕೊಂಡವರು ಯಾರು?*

ಸಿನಿಮಾದ ದೃಶ್ಯವೇ ಹಾಗಿತ್ತು. ವಿಲನ್‌ಗಳು ತಪ್ಪಿಸಿಕೊಂಡು ಹೆಲಿಕಾಪ್ಟರ್ ಏರುತ್ತಾರೆ. ಅವರನ್ನು ಬೆನ್ನಟ್ಟುವ ನಾಯಕ ಹೆಲಿಕಾಪ್ಟರ್‌ನಿಂದ ಮೊದಲು ವಿಲನ್ ಜಿಗಿಯುತ್ತಾರೆ. ಆನಂತರ ಹೀರೋ ಜಿಗಿಯುತ್ತಾನೆ ಅನ್ನುವುದು ದೃಶ್ಯವಾಗಿತ್ತು. ಅದನ್ನು ಮಾಡಲು ಹೋದಾಗ ಈ ದುರಂತ ಸಂಭವಿಸಿದೆ. ದೃಶ್ಯವೊಂದನ್ನು ಶೂಟ್ ಮಾಡುವಾಗ ಒಬ್ಬರೇ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲ. ಅದು ತಂಡದ ತೀರ್ಮಾನ ಆಗಿರುತ್ತದೆ.

** ನೀವೊಬ್ಬರೇ ಲೈಫ್ ಜಾಕೆಟ್ ಧರಿಸಿದ್ದು ಯಾಕೆ? ಅವರಿಗೇಕೆ ಜಾಕೆಟ್ ಕೊಟ್ಟಿರಲಿಲ್ಲ?*

ಶೂಟಿಂಗ್ ಫೂಟೇಜ್ ನೋಡಿದರೆ ಎಲ್ಲರಿಗೂ ಗೊತ್ತಾಗುತ್ತದೆ. ಅವರು ಶರ್ಟ್ ಹಾಕಿರಲಿಲ್ಲ, ನಾನೊಬ್ಬನೇ ಹಾಕಿದ್ದೆ. ಹಾಗಾಗಿ ನಾನು ಲೈಫ್ ಜಾಕೆಟ್ ಹಾಕಿದ್ದೆ. ಅವರಿಗೂ ಹಾಕಬೇಕಿತ್ತು ಅಂತ ಗೊತ್ತು. ಈ ವಿಚಾರವಾಗಿ ನಾನು ಸಾಹಸ ನಿರ್ದೇಶಕರನ್ನು ಆಗಲೇ ತರಾಟೆಗೆ ತೆಗೆದುಕೊಂಡಿದ್ದೇನೆ. ಘಟನೆ ಆಗಿದೆ. ಈಗ ಏನೇ ಮಾತಾಡಿದರೂ, ಅದು ಇನ್ನೇನೋ ಅರ್ಥಕ್ಕೆ ಕಾರಣವಾಗುತ್ತದೆ.

** ಇಬ್ಬರು ಕಲಾವಿದರ ಜೀವಹೋಗಿದೆ. ಸಾಹಸ ನಿರ್ದೇಶಕರು ಮತ್ತು ಕಲಾವಿದರು ಇದರಿಂದ ಪಾಠ ಕಲಿಯುತ್ತಾರಾ?*

ಎಲ್ಲರೂ ಪಾಠ ಕಲಿತಿದ್ದೇವೆ. ನೆಚ್ಚಿನ ಗೆಳೆಯರನ್ನು ಕಳೆದುಕೊಂಡ ನೋವು ಯಾವತ್ತಿಗೂ ಮರೆಯುವುದಕ್ಕೆ ಆಗುವುದಿಲ್ಲ. ನಾನು ಜೀವಂತವಾಗಿ ಇರುವತನಕ ಆ ನೋವು ಇದ್ದೇ ಇರುತ್ತದೆ. ಇನ್ಮುಂದೆ ಹಾಗೆ ಆಗದಂತೆ ನಾವೆಲ್ಲ ಎಚ್ಚರಿಕೆ ತೆಗೆದುಕೊಳ್ಳಬೇಕಿದೆ.

** ಅನಿಲ್ ಮತ್ತು ಉದಯ್ ಕುಟುಂಬದ ಜವಾಬ್ದಾರಿ ಹೊರುವವರು ಯಾರು?*


ನಾನು ಹೇಳುವುದಿಲ್ಲ ಮಾಡಿ ತೋರಿಸುತ್ತೇನೆ. ಅದು ನನ್ನ ಕುಟುಂಬ. ಆ ಕುಟುಂಬದ ಜವಾಬ್ದಾರಿಯನ್ನು ನಾನು ಹೊರಬೇಕು. ಈ ವಿಷಯದಲ್ಲಿ ಯಾರು ಏನೇ ಹೇಳಿದರೂ, ನಾನು ಏನು ಅಂದುಕೊಂಡಿದ್ದೇನೋ ಅದರಂತೆ ನಡೆಯುತ್ತೇನೆ. ನನ್ನ ಬಗ್ಗೆ ಇಲ್ಲದೇ ಇರೋ ಅಪಪ್ರಚಾರ ನಡೆಯುತ್ತಿದೆ. ನನ್ನ ಟೈಮ್ ಸರಿಯಿಲ್ಲ, ಹಾಗಾಗಿ ಎಲ್ಲವನ್ನೂ ಸಹಿಸಿಕೊಳ್ಳುತ್ತೇನೆ.

** ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದೆ. ಆ ಕುರಿತು ಏನು ಹೇಳುತ್ತೀರಿ?*

ದೊಡ್ಡವರು ಏನೇ ತೀರ್ಮಾನ ತೆಗೆದುಕೊಂಡರೂ, ಅದಕ್ಕೆ ನಾನು ಬದ್ಧನಾಗಿ ಇರುತ್ತೇನೆ. ಅವರು ದೊಡ್ಡವರು. ನಮ್ಮೆಲ್ಲರ ಒಳಿತಿಗಾಗಿ ಅಂತಹ ತೀರ್ಮಾನ ತೆಗೆದುಕೊಂಡಿದ್ದಾರೆಂದು ಭಾವಿಸಿದ್ದೇನೆ.

** ನಿರ್ಮಾಪಕರ ಪರವಾಗಿ ಮಾತಾಡುತ್ತಿದ್ದೀರಿ. ಆದರೆ, ಸಹ ನಿರ್ದೇಶಕ ಮತ್ತು ಮ್ಯಾನೇಜರ್ ಕೂಡ ಅರೆಸ್ಟ್ ಆಗಿದ್ದಾರೆ. ಅವರ ಕುರಿತು ಯಾಕೆ ಚಕಾರ ಎತ್ತುತ್ತಿಲ್ಲ?*

ನಿರ್ಮಾಪಕ ಅಮಾಯಕರು. ಅವರು ನಾವು ಕೇಳಿದಷ್ಟು ದುಡ್ಡು ಕೊಡುತ್ತಾರೆ. ಶೂಟಿಂಗ್ ಬಗ್ಗೆ ಅವರಿಗೇನೂ ಗೊತ್ತಿಲ್ಲ. ಅವರೇ ಎ1 ಆರೋಪಿ ಅಂದರೆ ತುಂಬಾ ನೋವಾಗುತ್ತದೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲಿ. ಅಮಾಯಕರಿಗೆ ಆಗಬಾರದು. ಜತೆಗೆ ಸಹ ನಿರ್ದೇಶಕರು ಕೂಡ ಆರೋಪಿ ಆಗಿದ್ದು ನೋವಿನ ಸಂಗತಿ ಕೂಡ. ಅವರ ಬಗ್ಗೆಯೂ ನಾನು ಮಾತಾಡಿದ್ದೇನೆ. ■



Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 30-11-2016 RNI No. KARKAN2005/



ವಿವಾದದಲ್ಲಿ 'ನಟರಾಜ ಸರ್ವೀಸ್'

ನಿರ್ದೇಶಕ ಪವನ್ ಒಡೆಯರ್ ವಿವಾದ ಮಾಡಿಕೊಳ್ಳದೇ ತಮ್ಮ ಸಿನಿಮಾ ರಿಲೀಸ್ ಮಾಡಲ್ಲ ಎಂದು ಶಪಥ ಮಾಡಿದಂತಿದೆ. ಹಾಗಾಗಿಯೇ ಅವರ ಪ್ರತಿ ಸಿನಿಮಾದಲ್ಲೂ ಏನಾದರೂ ಒಂದು ಗಲಾಟೆ ಇದ್ದೇ ಇರುತ್ತದೆ. ಈ ವಾರ ಬಿಡುಗಡೆ ಆಗಬೇಕಿರುವ 'ನಟರಾಜ ಸರ್ವೀಸ್' ಮೊನ್ನೆಯಷ್ಟೇ 'ಅಲ್ಲಾ ಅಲ್ಲಾ' ಹಾಡಿಗಾಗಿ ವಿವಾದ ಮಾಡಿಕೊಂಡಿತ್ತು. ಈಗ ರದ್ದಾದ ನೋಟಿನ ವಿಚಾರವಾಗಿ ಚರ್ಚೆಗೆ ಗ್ರಾಸವಾಗಿದೆ. ಪ್ರಧಾನಿ ನರೇಂದ್ರ ಮೋದಿ ಸರಕಾರ ಐನೂರು ಮತ್ತು ಸಾವಿರ ನೋಟುಗಳನ್ನು ರದ್ದು ಮಾಡಿದೆ. ಅವುಗಳ ಚಲಾವಣೆಯನ್ನು ನಿರ್ಬಂಧಿಸಲಾಗಿದೆ. ಆದರೂ, ಚಿತ್ರತಂಡವು ಹಳೆಯ ನೋಟುಗಳನ್ನೇ ಪಡೆದು ಸಿನಿಮಾ ತೋರಿಸುತ್ತೇವೆಂದು ಹೇಳಿಕೊಂಡಿದೆ. ಹಳೆಯ ನೋಟುಗಳ ಚಲಾವಣೆಗೆ ಉತ್ತೇಜನ ನೀಡುವುದು ಕಾನೂನುಬಾಹಿರ. ಇದು ಚಿತ್ರತಂಡಕ್ಕೆ ಗೊತ್ತಿದ್ದರೂ ಬಹಿರಂಗವಾಗಿ ಹೇಳಿಕೆಕೊಟ್ಟಿದ್ದು ಪಬ್ಲಿಸಿಟಿಯ ಒಂದು ಭಾಗ ಅನ್ನುವ ಮಾತಿದೆ.

ಕರೆನ್ಸಿ ಎಫೆಕ್ಟ್

ಐನೂರು ಮತ್ತು ಸಾವಿರ ನೋಟುಗಳು ರದ್ದಾಗುತ್ತಿದ್ದಂತೆಯೇ ಸಿನಿಮಾ ರಂಗದ ಬಹುತೇಕ ಚಟುವಟಿಕೆಗಳು ಕುಂಟುತ್ತಾ ಸಾಗಿವೆ. ಅಲ್ಲದೇ ಮುಹೂರ್ತವಾಗಿದ್ದ ಇನ್ನಷ್ಟೇ ಸೆಟ್ಟೇರಬೇಕಿದ್ದ ಚಿತ್ರಗಳು ಅರ್ಧಕ್ಕೆ ನಿಂತಿವೆ.

ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಮಲ್ಲಿಕಾರ್ಜುನ್ ಬಂಡೆ ಅವರ ಸಿನಿಮಾ ಈ ತಿಂಗಳು ಸೆಟ್ಟೇರಬೇಕಿತ್ತು. ಅಲ್ಲದೇ, ಮತ್ತಷ್ಟು ಚಿತ್ರಗಳ ಶೂಟಿಂಗ್ ಪ್ರಾರಂಭವಾಗಬೇಕಿತ್ತು. ಕರೆನ್ಸಿ ಬ್ಯಾನ್ ಪರಿಣಾಮದಿಂದಾಗಿ ಅವುಗಳು ಅರ್ಧಕ್ಕೆ




ನಿಲ್ಲುವಂತಾಗಿವೆ. ಆ ಸಿನಿಮಾಗಳನ್ನು ಮುಂದುವರೆಸಿಕೊಂಡು ಹೋಗುವುದು ಅನುಮಾನ ಎನ್ನುವ ಮಾತು ಕೂಡ ಕೇಳಿಬಂದಿದೆ.

ಕಳೆದ ವಾರ ಅಜಯ್ ರಾವ್, ಲೂಸ್‌ಮಾದ ಯೋಗಿ ಮತ್ತು ಮದರಂಗಿ ಕೃಷ್ಣ ಅವರ 'ಜಾನ್ ಜಾನಿ ಜನಾರ್ದನ್' ಮತ್ತು ಸಂಚಾರಿ ವಿಜಯ್ ಅವರ 'ರಿಕ್ತ' ಚಿತ್ರ ರಿಲೀಸ್ ಆಗಬೇಕಿತ್ತು. ಕರೆನ್ಸಿ ರದ್ದಾದ ಕಾರಣ ಆ ಚಿತ್ರಗಳ ಬಿಡುಗಡೆ ಕೂಡ ಮುಂದೂಡಲಾಗಿದೆ. ಕೈಯಲ್ಲಿ ಹೊಸ ನೋಟು ಇಲ್ಲದ ಕಾರಣ ಪ್ರೇಕ್ಷಕರು ಕೂಡ ಥಿಯೇಟರ್‌ನತ್ತ ಬರುತ್ತಿಲ್ಲ. ಹಾಗಾಗಿ ಇಡೀ ಸಿನಿಮಾ ರಂಗವೇ ತತ್ತರಿಸಿಹೋಗಿದೆ. ಮುಂದಿನ ದಿನಗಳಲ್ಲಿ ಸಿನಿಮಾ ನಿರ್ಮಾಣದ ಸಂಖ್ಯೆ ಕೂಡ ಕಡಿಮೆ ಆಗಲಿದೆ ಅಂತಾರೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯವರು.

ಮತ್ತೆ ದೇವರ ಹಿಂದೆ ಬಿದ್ದ ಉಪ್ಪಿ

ಉಪ್ಪಿಗೂ ದೇವರಿಗೂ ಬಿಡದ ನಂಟಿದೆ. ಉಪೇಂದ್ರ ಅವರ ಬಹುತೇಕ ಚಿತ್ರಗಳಲ್ಲಿ ದೇವರು ಪ್ರತ್ಯಕ್ಷನಾಗುತ್ತಾನೆ. ವೆರೈಟಿ ವೆರೈಟಿ ಡೈಲಾಗ್‌ನಲ್ಲಿ ಆತನನ್ನು ಆರಾಧಿಸುತ್ತಾರೆ ರಿಯಲ್‌ಸ್ಟಾರ್. ಮೊನ್ನೆಯಷ್ಟೇ ರಿಲೀಸ್ ಆದ 'ಮುಕುಂದ ಮುರಾರಿ'ಯಲ್ಲಿ ದೇವರ ಮೇಲೆ ಕಟ್ಟೆ ಹೂಡಿದ್ದ ಉಪ್ಪಿ, ಈ ಬಾರಿ ಕನ್ನೇಶ್ವರನ ಅವತಾರ ತಾಳಿದ್ದಾರೆ. ನಾಗಣ್ಣ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಕನ್ನೇಶ್ವರ' ಹೆಸರಿನ ಚಿತ್ರದಲ್ಲಿ ಉಪ್ಪಿ, ಭಗವಂತನ ಮತ್ತೊಂದು ಅವತಾರವನ್ನು ತಾಳಲಿದ್ದಾರಂತೆ. ಟೈಟಲ್ 'ಕನ್ನೇಶ್ವರ' ಅಂತ ಇದ್ದರೂ ಇದು ಪಕ್ಕಾ ದೇವರ ಸಿನಿಮಾ ಅಲ್ಲವಂತೆ. ಅಲ್ಲಲ್ಲಿ ದೇವರ ಪ್ರಸ್ತಾಪವಿದೆಯಂತೆ.



ನಾಗಣ್ಣ ಮತ್ತು ಉಪ್ಪಿ ಕಾಂಬಿನೇಷನ್‌ನ ನಾಲ್ಕನೇ ಸಿನಿಮಾ ಇದು. ತೂಕ ಇಳಿಸಿಕೊಂಡು ಅಜ್ಞಾತವಾಸದಲ್ಲಿರುವ ಕೋಮಲ್, ಈ ಸಿನಿಮಾದಲ್ಲಿ ನಟಿಸುತ್ತಿದ್ದಾರಂತೆ. ವೇದಿಕಾ ಸಿನಿಮಾದ ನಾಯಕಿ. ಸದ್ದಿಲ್ಲದೇ ಶೂಟಿಂಗ್ ಕೂಡ ಬೆಂಗಳೂರಿನಲ್ಲಿ ಶುರುವಾಗಿದೆ.



'ಶಿವಾನಿ'ಯಲ್ಲಿ ಭರ್ಜರಿ ಸ್ಟಂಟ್

ಮೊನ್ನೆಯಷ್ಟೇ 'ಮರಿಟೈಗರ್' ಸಿನಿಮಾದ ವಿಶೇಷ ಹಾಡಿಗೆ ಹೆಜ್ಜೆ ಹಾಕಿದ್ದ ನೀತು, ಈಗ ಮತ್ತೊಂದು ಸಿನಿಮಾಗೆ ಸಹಿ ಮಾಡಿದ್ದಾರೆ. ಇದು ಪಕ್ಕಾ ಮಹಿಳಾ ಪ್ರಧಾನ ಚಿತ್ರವಂತೆ. ಹಾಗಂತ ಅದು ಕಣ್ಣೀರಿನ ಕತೆಯ ಚಿತ್ರ ಅಲ್ಲವಂತೆ. ಭರ್ಜರಿ ಆ್ಯಕ್ಷನ್ ದೃಶ್ಯಗಳನ್ನು ಸಂಯೋಜನೆ ಮಾಡಿದ್ದಾರಂತೆ ನಿರ್ದೇಶಕ ಶ್ರೀನಿವಾಸ್ ಕೌಶಿಕ್.

ಈ ಚಿತ್ರದಲ್ಲಿ ನೀತು ಎಸಿಪಿಯಾಗಿ ಕಾಣಿಸಿಕೊಂಡಿದ್ದಾರೆ. ಅದು ಖಡಕ್ ಅಧಿಕಾರಿಯ ಪಾತ್ರ. ಚಿತ್ರಕ್ಕೆ 'ಶಿವಾನಿ' ಎಂದು ಹೆಸರಿಟ್ಟಿದ್ದು, ಚಿತ್ರಕ್ಕಾಗಿಯೇ ನೀತು ಸ್ಟಂಟ್ ಕಲಿತಿದ್ದಾರಂತೆ. "ಇದೇ ಮೊದಲ ಬಾರಿಗೆ ನಾನು ಸಾಹಸ ಸನ್ನಿವೇಶಗಳಲ್ಲಿ ಕಾಣಿಸಿಕೊಂಡಿದ್ದೇನೆ. ಫೈಟರ್ ಜತೆ ಹೊಡೆದಾಡುವುದು ನಿಜಕ್ಕೂ ಸಾಹಸದ ಕೆಲಸ. ಇಂಥದ್ದೊಂದು ಪಾತ್ರ ನನಗೆ ಸಿಕ್ಕಿದ್ದು ಹೆಮ್ಮೆ ಪಡುವ ವಿಚಾರ" ಅಂದಿದ್ದಾರೆ ನೀತು.

ಯಾವುದೇ ಸಿನಿಮಾ ಸಿಗದೆ ಎರಡು ವರ್ಷಗಳ ಕಾಲ ನೀತು ಮನೆಯಲ್ಲೇ ಕೂತಿದ್ದರು. 'ಮರಿಟೈಗರ್'ನಲ್ಲಿ ಚಾನ್ಸ್ ಸಿಕ್ಕಿದ್ದೇ ತಡ ಮತ್ತೆ ಅವರು ಬಿಜಿ ಆಗುವ ಲಕ್ಷಣ ತೋರಿಸಿದ್ದಾರೆ.

ದೀಪಾ ರೀಲಾಂಚ್

ಕನ್ನಡ ಸಿನಿಮಾರಂಗಕ್ಕೆ ದೀಪಾ ಸನ್ನಿಧಿ ಅವರನ್ನು ಪರಿಚಯಿಸಿದ್ದು ... ಆನಂತರ ದೀಪಾ ಅನೇಕ ಸ್ಟಾರ್ ನಟರ ಜತೆ ಕೆಲಸ ಮಾಡಿದರು ... ಇದ್ದಕ್ಕಿದ್ದಂತೆಯೇ ಕನ್ನಡ ಚಿತ್ರಗಳು ಅವರಿಗೆ ಸಿಗದೇ ಹೋದವು. ಅನಂತ ... ಮುಖ ಮಾಡಿದರು. ಅಲ್ಲೆರಡು ಸಿನಿಮಾ ಮಾಡಿದ ನಂತರ ಚಿತ್ರ ... ಕಾಣಿಸಿಕೊಳ್ಳಲಿಲ್ಲ, ಎರಡು ವರ್ಷಗಳ ಕಾಲ ಅವರು ಎಲ್ಲಿದ್ದಾರೆ ... ಗೊತ್ತಾಗಲಿಲ್ಲ, ದೀಪಾರನ್ನು ಹುಡುಕಿ ಮತ್ತೆ ರೀಲಾಂಚ್ ಮಾಡುತ್ತಿದ್ದಾರೆ ... ಸದ್ಯ ದೀಪಾ 'ಚಕ್ರವರ್ತಿ' ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ ... 'ಮಾಂಜಾ' ಚಿತ್ರಕ್ಕೂ ದೀಪಾ ಹೀರೋಯಿನ್. ಹೆಸರಾಂತ ನಟರ ಜ... ಮಾಡಿದ್ದವರು, ಇದ್ದಕ್ಕಿದ್ದಂತೆಯೇ ಮರೆಯಾಗಲು ಕಾರಣವೇನು ಅನ್ನುವ ಪ್ರಶ್ನೆಗೆ ಅವರು ಉತ್ತರಿಸುತ್ತಿಲ್ಲ. ಆದರೆ, ದೀಪಾ ಜೀವನದಲ್ಲಿ ಕೆಟ್ಟಗಳಿಗೆಗಳೂ ಎದುರಾದವಂತೆ. ಅವುಗಳಿಂದ ಸುಧಾರಿಸಿಕೊಳ್ಳಲು ಎರಡು ವರ್ಷಗಳ ಕಾಲ ಮನೆಯಲ್ಲೇ ಕೂರಬೇಕಾಗಿತ್ತಂತೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com